
ಸಂಪುಟ 24 ಸಂಚಿಕೆ 33
ಆಗಸ್ಟ್ 18, 2002 ಬೆಲೆ ರೂ. 3.00


ದುಡಿವ ಜನರ ಪ್ರಾಣಮಿತ್ರ


ಐಕ್ಯರಂಗ


http:// www.geocities.com/aikyaranga




ಪೆಟ್ರೋಲ್ ಪಂಪ್ ಹಗರಣ 'ಸ್ವಯಂ' 'ಸೇವ'ಕರು








ಯುರೋಪ್ ಫ್ಯಾಸಿಸಂನತ್ತ ಜಾರುತ್ತಿದೆಯೇ?



ಇವರು ಶ್ರೀಮಂತರಾದದ್ದು ಹೇಗೆ?



'ದೇವದಾಸ್' ಹೇಳುವುದೇನು?



ಏನು ಜಾದೂ ಮಾಡಿದ್ದೀರಯ್ಯಾ ನೀವು ಕಮ್ಯುನಿಸ್ಟರು

ಸಿ.ಎನ್.ಕಮ್ಯುನಿಸ್ಟನಾದದ್ದು - 6

1990 ರ ಐಕ್ಯರಂಗದಲ್ಲಿ ಪ್ರಕಟವಾದ ಲೇಖನವನ್ನು ಮತ್ತೆ ಪ್ರಕಟಿಸಲಾಗಿದೆ

1961ರಲ್ಲಿ ಮಾಸ್ಕೋದಿಂದ ಬರುತ್ತಿದ್ದ 'ನ್ಯೂ ಟೈಮ್ಸ್' ಮತ್ತು 'ಇಂಟರ್‌ನ್ಯಾಷನಲ್ ಅಫೇರ್ಸ್' ಪತ್ರಿಕೆಗಳಿಗೆ ಚಂದಾದಾರನಾದೆ. ಇವುಗಳ ಜೊತೆಗೆ 'ಲಿಂಕ್' ವಾರಪತ್ರಿಕೆ ಓದಲು ಆರಂಭಿಸಿದೆ. ಬೆಂಗಳೂರಿಗೆ ಹೋದಾಗಲೆಲ್ಲಾ 'ಜನಶಕ್ತಿ', 'ನ್ಯೂಏಜ್' ಪತ್ರಿಕೆಗಳನ್ನು ತೆಗೆದುಕೊಳ್ಳುತ್ತಿದ್ದೆ. ನನ್ನ ಗೆಳೆಯ ಗಂಗಣ್ಣನವರು ಧಾರವಾಡದಲ್ಲಿ ಕರ್ನಾಟಕ ಸೈನ್ಸ್ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದರು. ಬೆಂಗಳೂರಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಪರಿಚಯವಾಗಿ ಸ್ನೇಹವಾಗಿ ಬೆಳೆದಿದ್ದಿತು. ಪ್ರತಿವಾರವೂ ನಾವು ಭೇಟಿಯಾಗುತ್ತಿದ್ದೆವು. ಸಮಾಜವಾದಿ ದೇಶಗಳ ಬೆಳವಣಿಗೆಗಳು ಅಂತರರಾಷ್ಟ್ರೀಯ ಪರಿಸ್ಥಿತಿ, ದೇಶದ ಹಾಗೂ ರಾಜ್ಯದ ರಾಜಕೀಯ ಪರಿಸ್ಥಿತಿಗಳನ್ನು ಚರ್ಚಿಸುತ್ತಿದ್ದೆವು. ನನ್ನ ಬಗ್ಗೆ ಮತ್ತು ನನ್ನ ವಿಚಾರಧಾರೆಯ ಬಗ್ಗೆ ಅವರಿಗೆ ಸಹಾನುಭೂತಿ ಯಿದ್ದಿತು. (ಅವರು 1986 ಅಗಸ್ಟ್ ನಲ್ಲಿ ನಿಧನರಾದರು).

1961ರಲ್ಲಿ ನಾನು ಕೆಲಸಕ್ಕೆ ಸೇರಿದ ಕೂಡಲೇ 1960ರ ಮುಷ್ಕರದ ನಂತರ ಕ್ರಿಯಾ ಶೂನ್ಯವಾಗಿದ್ದ ದೂರ ಸಂಪರ್ಕ ನೌಕರರ ಸಂಘವನ್ನು ಪುನರುಜ್ಜೀವನಗೊಳಿಸಲು ಕೆಲಸ ಮಾಡಿ ಯಶಸ್ವಿಯಾದೆ. ಜತೆಗೆ ಕಮ್ಯುನಿಸ್ಟ್ ಎಂಬ ಬಿರುದೂ ಬಂದಿತು.

1962ರಲ್ಲಿ ಮೂರನೆಯ ಸಾರ್ವತ್ರಿಕ ಚುನಾವಣೆಯು ನಡೆಯಲಿದ್ದಿತು. ಅದಕ್ಕಾಗಿ 1961ರಲ್ಲಿ ರಾಜಕೀಯ ಪಕ್ಷಗಳು ಸಿದ್ಧತೆಗಳನ್ನು ನಡೆಸುತ್ತಿದ್ದುವು. 1961 ರ ಅಕ್ಟೋಬರಿನ 'ಜನಶಕ್ತಿ'ಯಲ್ಲಿ ನಡುವಿನ ಪುಟಗಳಲ್ಲಿ ಒಂದು ದೊಡ್ಡ ತಲೆಬರಹ ಸುದ್ದಿ ಪ್ರಕಟವಾಗಿತ್ತು. ಬಿಹಾರದಲ್ಲಿ ಒಂದು ಕಡೆ ಕಮ್ಯುನಿಸ್ಟ್ ಪಕ್ಷದ ಚುನಾವಣಾ ಪ್ರಚಾರನ್ನು ಉದ್ಘಾಟನೆ ಮಾಡುತ್ತಾ ಸಿಪಿಐನ ಪ್ರಧಾನ ಕಾರ್ಯದರ್ಶಿ ಅಜಯ ಘೋಷ್ 'ಕಮ್ಯುನಿಸ್ಟ್ ಪಕ್ಷಕ್ಕೆ ಮತ ನೀಡಿ, ಕಮ್ಯುನಿಸ್ಟ್ ಪಕ್ಷವು ಸ್ಪರ್ಧಿಸದಿದ್ದ ಕಡೆ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿ ಎಂದು ಕರೆ ಕೊಟ್ಟಿದ್ದನ್ನು ಓದಿ ನನಗೆ ನಖಶಿಖಾಂತ ಸಿಟ್ಟು ಬಂದಿತು. ಸಿಪಿಐ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವುದರಿಂದ ಭಾರತದಲ್ಲಿ ಸಮಾಜವಾದವನ್ನು ತರುವುದು ಸಾಧ್ಯವಾಗುವುದಿಲ್ಲ - ಸಿಪಿಐಯ ಈ ಧೋರಣೆ ನನಗೆ ಎಳ್ಳಷ್ಟೂ ಸರಿಬರುವುದಿಲ್ಲ ಎಂದು ಹೇಳಿದೆ. ನನ್ನ ಅಭಿಪ್ರಾಯವನ್ನು ಗಂಗಣ್ಣನವರು ಅನುಮೋದಿಸಿದರು.

1961ರ ಕೊನೆಯ ವೇಳೆಗೆ ದೂರಸಂಪರ್ಕ ನೌಕರರ ಸಂಘವನ್ನು ಕ್ರಿಯಾಶೀಲಗೊಳಿಸುವ ಕೆಲಸ ಮಾಡುವಾಗ ನಾನು ಒಂದು ಪಾಠವನ್ನು ಕಲಿತೆ. ಒಬ್ಬ ವ್ಯಕ್ತಿ ಎಷ್ಟೇ ಸಮರ್ಥನಾದರೂ, ಪ್ರತಿಭಾವಂತನಾದರೂ ಜನರನ್ನು ಒಂದುಗೂಡಿಸುವ ಕೆಲಸ ಮಾಡುವಾಗ ಒಬ್ಬನೇ ಸಾಧನೆ ಮಾಡುವುದು ಕಷ್ಟ. ಅದಕ್ಕೆ ಕಾರ್ಯಕರ್ತರ, ಮುಖಂಡರ ಒಂದು ತಂಡವೇ ಬೇಕು. ಮಾರ್ಕ್ಸ್‌ವಾದ - ಲೆನಿನ್ ವಾದವನ್ನು ಅಧ್ಯಯನ ಮಾಡಿ ಸ್ವೀಕರಿಸಿದ ವ್ಯಕ್ತಿ ಇತರರಿಗೆ ಅದನ್ನು ಬೋಧಿಸಿ ತರಬೇತುಗೊಳಿಸುವ ಕೆಲಸ ಮಾಡಿ ಕಾರ್ಯಕರ್ತರ ತಂಡವನ್ನು ರಚಿಸಬೇಕು. ಈ ಪಾಠವನ್ನು ಕಲಿತ ನಂತರ ನನ್ನ ಸಹೋದ್ಯೋಗಿಗಳ ನಡುವೆ ಅಂತಹವರನ್ನು ಗುರುತಿಸಲು ಪ್ರಯತ್ನಿಸಿದೆ.

1961ರ ಕೊನೆಯ ವೇಳೆಗೆ ನನಗೆ ಅತಿಯಾದ ಸಮಯದ ಅಭಾವವುಂಟಾಯಿತು. ನನ್ನ ಕನ್ನಡ ಸಾಹಿತ್ಯಾಭ್ಯಾಸ ನಿಂತು ಹೋಗುವ ಸ್ಥಿತಿಗೆ ಬಂದಿತು. ನನ್ನ ಎಂ.ಕಾಂ. ವ್ಯಾಸಂಗಕ್ಕೂ ಸಮಯವಿಲ್ಲದ ಸ್ಥಿತಿ ಬಂದಿತು. 1962ರಲ್ಲಿ ಭಾರತ - ಚೀನ ಗಡಿ ಘರ್ಷಣೆಗೆ ಸಂಬಂಧಿಸಿ ಸಹಸ್ರಾರು ಸಿಪಿಐ ಸದಸ್ಯರ ಬಂಧನವಾಯಿತು. ಸಿಪಿಐಯಲ್ಲಿ ಚೀನದ ಪರವಿರುವವರ ಒಂದು ಪಟ್ಟಿಯನ್ನು ಸಿದ್ಧಪಡಿಸಿ ಸಿಪಿಐ ಅಧ್ಯಕ್ಷ ಎಸ್.ಎ.ಡಾಂಗೆ ಭಾರತ ಸರ್ಕಾರದ ಗೃಹ ಇಲಾಖೆಗೆ ಕೊಟ್ಟರೆಂದೂ, ಆ ಪ್ರಕಾರ ಬಂಧನಗಳಾದುವೆಂದೂ ಇಂಡೋನೇಷ್ಯಾದ ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷ ಡಿ.ಎನ್ ಐಡಿಟ್ ಕೊಟ್ಟ ಹೇಳಿಕೆಯೊಂದನ್ನು ಪತ್ರಿಕೆಗಳಲ್ಲಿ ಓದಿದೆ. ಇಂತಹ ವ್ಯಕ್ತಿ ಅಧ್ಯಕ್ಷನಾಗಿರುವ ಪಕ್ಷಕ್ಕೆ ನಾನು ಸದಸ್ಯನಾಗಿ ಸೇರುವುದಾದರೂ ಹೇಗೆ? ಎಂಬ ಪ್ರಶ್ನೆ ನನ್ನ ಮುಂದೆ ಬಂದಿತು.

1962ರ ಕೊನೆಯ ವೇಳೆಗೆ ಪ್ರಗತಿಶೀಲ ವಿಚಾರಗಳಲ್ಲಿ ಆಸಕ್ತಿ ಇರುವ ಇಬ್ಬರು ಸಹೋದ್ಯೋಗಿಗಳನ್ನು ಗುರುತಿಸಿ ಅವರಿಗೆ ಗಮನ ಕೊಡಲಾರಂಭಿಸಿದೆ.

1962ರ ಡಿಸೆಂಬರ್ ತಿಂಗಳಲ್ಲಿ ತಿರುವನಂತಪುರದಲ್ಲಿ ದೂರ ಸಂಪರ್ಕ ನೌಕರರ ಅಖಿಲ ಭಾರತ ಸಮ್ಮೇಳನ ನಡೆಯಲಿದ್ದು ಆ ಸಮ್ಮೇಳನಕ್ಕೆ ಹುಬ್ಬಳ್ಳಿ ವಿಭಾಗದಿಂದ ಮೂವರು ಪ್ರತಿನಿಧಿಗಳನ್ನು ಆರಿಸಬೇಕಾದ್ದಿತು. ನಾನು ಎಷ್ಟೇ ಒಲ್ಲೆನೆಂದರೂ ನನ್ನನ್ನು ಒಬ್ಬ ಪ್ರತಿನಿಧಿಯನ್ನಾಗಿ ಆರಿಸಲಾಯಿತು. ನಾವು ಮೂವರು ರೈಲಿನಲ್ಲಿ ಹುಬ್ಬಳ್ಳಿಯಿಂದ ಹೊರಟು ಬೆಂಗಳೂರು ಮಾರ್ಗವಾಗಿ ಎರ್ನಾಕುಲಂ ತಲುಪಿದೆವು. ಅಲ್ಲಿಂದ ತಿರುವನಂತಪುರಕ್ಕೆ ಹೊರಡುವ ರೈಲು ಕೆಲವು ಗಂಟೆಗಳ ನಂತರ ಹೊರಡುವುದಿದ್ದುದರಿಂದ ರೈಲು ನಿಲ್ದಾಣದ ಹೊರಗಿದ್ದ ಒಂದು ವಿಶ್ರಾಂತಿ ಗೃಹಕ್ಕೆ ಹೋದೆವು.

ಅಂದಿನ ಕಾರ್ಮಿಕ ಚಳುವಳಿಯ ಬಗ್ಗೆ ಮಾತನಾಡುತ್ತಿದ್ದಾಗ ಅಲ್ಲಿಯ ಕಾರ್ಮಿಕ ಮುಖಂಡರು ಮಾತನ್ನು ರಾಜಕೀಯದತ್ತ ತಿರುಗಿಸಿ ತಮಿಳುನಾಡಿನಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಸಿಪಿಐ ಮತ್ತು ಕಾಂಗ್ರೆಸ್ ಪಕ್ಷಗಳ ಹೊಂದಾಣಿಕೆಯನ್ನು ಪ್ರಸ್ತಾಪಿಸಿದರು. ನಾನು ಕೂಡಲೇ ಅದನ್ನು ವಿರೋಧಿಸಿದೆ. ಅವರು ನನ್ನನ್ನು ಗುರುತಿಸಿದರು. ಮಾತ್ರವಲ್ಲದೆ ಭಾರತ- ಚೀನ ಗಡಿವಿವಾದದ ವಿಚಾರದಲ್ಲಿ ಸಿಪಿಐಯಲ್ಲಿ ಭಿನ್ನಾಭಿಪ್ರಾಯ ಡಾಂಗೆ ಮತ್ತು ಸಂಗಡಿಗರ ತಪ್ಪು ನಿಲುವು ಮುಂತಾದ ವಿಚಾರಗಳನ್ನು ಮಾತನಾಡಿದರು.


ತಿರುವನಂತಪುರದಲ್ಲಿ ನಡೆದ ಸಮ್ಮೇಳನಕ್ಕೆ ಸಂಘದ ಅಧ್ಯಕ್ಷರಾದ ಹೋಮಿದಾಜಿಯವರು ಬರಲಿಲ್ಲ. ಸ್ವತಂತ್ರ ಭಾರತದಲ್ಲಿ ಮೊದಲಬಾರಿಗೆ ನಡೆದ ಕೇಂದ್ರ ಸರ್ಕಾರದ ನೌಕರರ ಅನಿರ್ಧಿಷ್ಟಾವಧಿಯ ಮುಷ್ಕರವನ್ನು ಜವಹರಲಾಲ ನೆಹರು ನಾಯಕತ್ವದ ಕಾಂಗ್ರೆಸ್ ಸರ್ಕಾರವು ಕ್ರೂರ ದಬ್ಬಾಳಿಕೆಯನ್ನು ನಡೆಸಿ ದಮನ ಮಾಡಿದ ಒಂದೂವರೆ ವರ್ಷದ ನಂತರ ನಡೆದ ಈ ಸಮ್ಮೇಳನದಲ್ಲಿ ಒಂದು ಸೈದ್ಧಾಂತಿಕ ಕಾಳಗವೇ ನಡೆಯಿತು. ಪಶ್ಚಿಮ ಬಂಗಾಳದ ವಲಯ ಕಾರ್ಯದರ್ಶಿ ದಿವಂಗತ ಕೆ.ಜಿ.ಬೋಸ್ ಮತ್ತು ಸಂಘದ ಪ್ರಧಾನ ಕಾರ್ಯದರ್ಶಿ ಓ.ಪಿ. ಗುಪ್ತರ ನಡುವೆ ಪರೋಕ್ಷವಾಗಿ ಈ ವಿಚಾರಗಳ ಮೇಲೆ ವಾದ ನಡೆಯಿತು.

ಕೇಂದ್ರ ಸರ್ಕಾರದ ಧಮನಕಾರಿ ನೀತಿಯ ವಿರುದ್ಧ ಸದಸ್ಯಬಲಕ್ಕೆ ತಿಳುವಳಿಕೆಯನ್ನು ಕೊಡಬೇಕೆಂಬುದು ಒಂದು ವಾದ. ಭಾರತದ ಮೇಲೆ ಚೀನವು ಆಕ್ರಮಣ ಮಾಡಿದ ಹಿನ್ನೆಲೆಯಲ್ಲಿ ನೆಹರು ಸರ್ಕಾರದ ಕೈಗಳನ್ನು ಬಲಪಡಿಸಬೇಕೆಂಬುದು ಇನ್ನೊಂದು ವಾದವಾಗಿದ್ದಿತು. ಕೊನೆಯಲ್ಲಿ ನೂತನ ಪದಾಧಿಕಾರಿಗಳ ಚುನಾವಣೆಯ ಸಮಯ ಬಂದಾಗ ಓ.ಪಿ ಗುಪ್ತ ತಾವು ಪ್ರಧಾನ ಕಾರ್ಯದರ್ಶಿಯಾಗಿ ಮುಂದುವರಿಯುವುದಿಲ್ಲವೆಂದರು. ಮುಖ್ಯ ಪ್ರತಿನಿಧಿಗಳು ಒಂದು ಇಡೀ ರಾತ್ರಿ ಪ್ರಯತ್ನ ಮಾಡಿ ರಾಜಿಯಾಗಿ ಓ.ಪಿ ಗುಪ್ತ ಪ್ರಧಾನ ಕಾರ್ಯದರ್ಶಿಯಾಗಿ, ಅವರ ಒತ್ತಾಯದ ಮೇರೆಗೆ ಸಮ್ಮೇಳನಕ್ಕೆ ಬಂದಿಲ್ಲದ ಮತ್ತು ನಾನು ನೋಡಿರದ ಹೋಮಿ ದಾಜಿ ಅಧ್ಯಕ್ಷರಾಗಿ ಮುಂದುವರಿಯುವುದು ಎಂದಾಯಿತು. ಯಾಕೆಂದರೆ ಕೆ.ಜಿ.ಬೋಸ್ ಮತ್ತು ಸಂಗಡಿಗರಿಗೆ ಸಮ್ಮೇಳನಕ್ಕೆ ಬಂದಿದ್ದ ಪ್ರತಿನಿಧಿಗಳ ನಡುವೆ ಬಹುಮತವಿರಲಿಲ್ಲ. ನಿರ್ಣಾಯಕ ಅಂಶವೆಂದರೆ, ವರ್ಗ ಹೋರಾಟಕ್ಕೆ ವಿರುದ್ಧವಾಗಿದ್ದವರ ಕೈಗೆ ಸಂಘಟನೆಯ ಮುಖಂಡತ್ವ ಸಿಕ್ಕಿದುದು.

ಬೆಂಗಳೂರಿನಲ್ಲಿ 1960ರಲ್ಲಿ ನನ್ನ ವಿದ್ಯಾಭ್ಯಾಸ ಮುಗಿದ ನಂತರ ನೇರವಾಗಿ ಕಮ್ಯುನಿಸ್ಟ್ ಪಕ್ಷದ ಕೆಲಸವನ್ನು ಪ್ರಾರಂಭಿಸಲು ಪ್ರಬಲ ವಿರೋಧ ಬಂದಿತೆಂದು ಹೇಳಿದೆನಷ್ಟೆ. ಆಗ ನನ್ನ ಉದ್ದೇಶ ಸಾಧನೆಗೆ ಕೆಲಸ ಮಾಡಲು ಪರಿಣಾಮಕಾರಿ ರಂಗಗಳು ಯಾವುವು ಎಂದು ವಿಚಾರ ಮಾಡಿ ನಾಲ್ಕು ರಂಗಗಳನ್ನು ಆರಿಸಿಕೊಂಡೆ. ಕ್ರಮ ಪ್ರಕಾರ ಅವು ಸೈನ್ಯ, ಶಿಕ್ಷಣರಂಗ, ಪ್ರಸಾರ ಮಾಧ್ಯಮ ಮತ್ತು ರಂಗಭೂಮಿ ಆಗಿದ್ದವು. ಬೆಂಗಳೂರು ನಗರ ಸಭೆಯಲ್ಲಿ ಕೆಲಸ ಮಡುತ್ತಿರುವಾಗಲೇ ನೌಕಾ ಸೈನ್ಯದಲ್ಲಿ ಪಾರ್ಟ್ ಸರ್ವಿಸ್ ಕಮಿಷನ್' ಹುದ್ದೆಗೆ ಅರ್ಜಿ ಹಾಕಿದೆ. ಆದರೆ ನೌಕಾದಳದವರು ನನ್ನನ್ನು ಆರಿಸಲಿಲ್ಲ.

(ಮುಂದುವರಿಯುವುದು)

ಹುತಾತ್ಮ ಶ್ರೀನಿವಾಸ ಬಜಾಲ್ ನಿಧಿ



ಇಲ್ಲಿಯವರೆಗಿನ ಸಂಗ್ರಹ ವಿವರ

ಹೆಸರು	ಸಂಗ್ರಹವಾದ ಹಣ
ಕಳೆದ ವಾರ ಒಟ್ಟು	ರೂ. 11,316-50
ಈ ವಾರ	
1. ಡಿ.ವೈ.ಎಫ್.ಐ ಉ.ಕ. ಜಿಲ್ಲಾ ಸಮ್ಮೇಳನದಲ್ಲಿ ಸಂಗ್ರಹ	524.25
2. ಡಿ.ವೈ.ಎಫ್.ಐ ಕೊಡಗು ಜಿಲ್ಲಾ ಸಮಿತಿ	250.00
3. ಯಶು, ನಿರೂಪಮ (ಚೆನ್ನೈ) ಡಿ.ವೈ.ಎಫ್.ಐ ದ.ಕ. ಜಿಲ್ಲಾ ಸಮಿತಿ ಮುಖಾಂತರ	100.00
4. ಕೆ. ನಾಗರಾಜ್ ಉಡುಪ (ಚೆನ್ನೈ)	5,000.00
5. ಪ್ರೊ। ನರೇಂದ್ರ ನಾಯಕ್	1,000.00
6. ಡಾ। ಕೆ. ಆರ್. ಉಡುಪ	1,000.00
7. ಕೃಷ್ಣಪ್ಪ ಕೊಂಚಾಡಿ	1,000.00
8. ಸುಕುಮಾರ್, ಕೆ.(ಬಿ.ಇ.ಎಫ್.ಐ)	500.00
9. ಜೊಸ್‌ಲೀನ್ ಲೋಬೊ	1,500.00
10. ಸೀತಾ ಆರ್ ಭಟ್, ಧಾರವಾಡ	250.00
ಒಟ್ಟು ಸಂಗ್ರಹ	11,124.25
ಇದುವರೆಗಿನ ಒಟ್ಟು ಸಂಗ್ರಹ	22,440.75

ಕಾಮ್ರೇಡ್ ಸೂರಿಯವರ ಕುರಿತು ವಿಶೇಷ ಸಂಚಿಕೆ



ದುಡಿವ ವರ್ಗದ ಧೀಮಂತ ನಾಯಕ, ಹಿರಿಯ ಸಂಗಾತಿ ಕಾಮ್ರೇಡ್ 'ಸೂರಿ'ಯವರ ಬದುಕು-ಹೋರಾಟಗಳ ಕುರಿತಂತೆ ವಿಶಿಷ್ಟ ಫೋಟೋ, ಲೇಖನಗಳನ್ನೊಳಗೊಂಡ ವಿಶೇಷ ಸಂಚಿಕೆಯನ್ನು ಹೊರತರಲು ದುಡಿವ ಜನರ ಪ್ರಾಣ ಮಿತ್ರ 'ಐಕ್ಯರಂಗ' ನಿರ್ಧರಿಸಿದೆ. ಈ ಸಂಚಿಕೆ ಬಹುವರ್ಣದಲ್ಲಿ ಮುದ್ರಿತವಾಗುವ ಕಾಯ್ದಿರಿಸಿಕೊಳ್ಳಬೇಕಾದ ಸಂಚಿಕೆ. ಈ ಸಂಚಿಕೆಗಾಗಿ ಅವರೊಂದಿಗೆ ಒಡನಾಡಿದ ಅನೇಕರ ನೆನಪುಗಳ ಸಂಗ್ರಹ, ಹೋರಾಟಗಳ ಕುರಿತ ಲೇಖನ, ಫೋಟೋ ಸಂಗ್ರಹಿಸಲು ಈಗಾಗಲೇ ಐಕ್ಯರಂಗದ ತಂಡ ಕಾರ್ಯೋನ್ಮುಖವಾಗಿದೆ. ಈ ಸಂಚಿಕೆಗೆ ಅವರೊಂದಿಗಿನ ನೆನಪುಗಳು, ಜೀವನದ ವಿವರಗಳು, ಭಾವಚಿತ್ರಗಳು ನಿಮ್ಮಲ್ಲಿದ್ದರೆ ದಯವಿಟ್ಟು ಕಳಿಸಿಕೊಡಿ ಅಥವಾ ಸಂಗ್ರಹಿಸಿ ನೀಡಿ.

ಆಗಸ್ಟ್ 24 ರಂದು ಕಾಂ. ಸೂರಿಯವರ ಜನ್ಮದಿನದಂದು ವಿಶೇಷ ಕಾರ್ಯಕ್ರಮದಲ್ಲಿ ಈ ಸಂಚಿಕೆ ಬಿಡುಗಡೆಯಾಗಲಿದೆ.

ಆದ್ದರಿಂದ ಅವೆಲ್ಲಾ ಬರಹ, ಫೋಟೋ, ದಾಖಲೆಗಳು ಆಗಸ್ಟ್ 10 ರೊಳಗೆ ತಲುಪಬೇಕು. **ಇಂತಹ ಅವಿಸ್ಮರಣೀಯ ದಾಖಲೆಯ ಸಂಚಿಕೆಗೆ ಎಲ್ಲಾ ನೆರವು - ಸಹಕಾರ ನೀಡಿ ಹಾಗೆಯೇ ಜಾಹೀರಾತುಗಳನ್ನು ಕೂಡ.**

- ಸಂ .

ಬರ ಪರಿಹಾರಕ್ಕಾಗಿ ಆಗ್ರಹ

ರಾಜ್ಯದಲ್ಲಿ ತಲೆದೂರಿರುವ ಭೀಕರ ಬರಗಾರದಿಂದ ಸಂಕಷ್ಟಕ್ಕೀಡಾದ ರೈತರ ನೆರವಿಗೆ ಕೇಂದ್ರ ಹಾಗೂ ರಾಜ್ಯ ಸರಕಾರವು ಧಾವಿಸಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ (ಸಿಪಿಐಎಂ) ವು ಒತ್ತಾಯಿಸಿದೆ ಈ ನಿಟ್ಟಿನಲ್ಲಿ ಬರಗಾಲ ಕಾಮಗಾರಿ, ರೈತರ ಸಾಲ ಮನ್ನಾ ಕೂಲಿಗಾಗಿ ಕಾಳು ಯೋಜನೆ, ಇನ್ನಿತರ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಆಗಸ್ಟ್ 19 ರಂದು (ಸೋಮವಾರ) ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿಸಾಮೂಹಿಕ ಪ್ರಧರ್ಶನ ನಡೆಸಬೇಕೆಂದು ರಾಜ್ಯ ಸಮಿತಿಯು ಕರೆ ನೀಡಿದೆ.

ಕುಡಿವ ನೀರು ಸರಬರಾಜು: ವಿದೇಶಿ ಕಂಪನಿಗಳಿಗೆ

ಸುಮಾರು 70 ಲಕ್ಷ ಜನತೆ ಕುಡಿಯುವ ನೀರನ್ನು ಖಾಸಗೀಕರಿಸಲು ಎಸ್.ಎಂ.ಕೃಷ್ಣರ ಸರ್ಕಾರ ಹೊರಟಿದೆ. ಅತ್ಯಂತ ಸಮರ್ಥವಾಗಿ, ಅನುಭವ, ಸಂಪನ್ಮೂಲ ಹೊಂದಿದ ನಮ್ಮದೇ ಆದ ಬೆಂಗಳೂರು-ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯನ್ನು 'ಅಯೋಗ್ಯ'ವೆಂದು ಸಾರಿ, ವಿದೇಶಿ ಮೂಲದ ಕಂಪನಿಗಳನ್ನು ಕಂಡು, ಅವರ ಉಡಿಗೆ ಹಾಕಿ, ಮನಬಂದಂತೆ ಹಣ ಸುರಿಯುವ ದಂಧೆಗೆ ಪೂರ್ತಿ ಪರವಾನಗಿ ನೀಡಲಿದೆ.

ಉದಾರೀಕರಣ, ಜಾಗತೀಕರಣದ ಆರಾಧಕರಾಗಿ, ವಿಶ್ವಬ್ಯಾಂಕಿನ ಸಾಲದ ಶರತ್ತುಗಳಿಗೆ ತಲೆಬಾಗಿ ಕರ್ನಾಟಕವನೇ ಅವರಿಗೆ ಅಡವು ಇಡಲು ಹೊರಟಿರುವ ಕೃಷ್ಣರ ಮುಂದೆ ಬೆಂಗಳೂರು ಕುಡಿವ ನೀರು ಖಾಸಗೀಕರಿಸುವ ಪ್ರಸ್ತಾಪ ಕಳೆದೆರಡು ವರ್ಷಗಳಿಂದಲೇ ಇದೆ. ಹಿಂದಿನ ಪಟೇಲ್ ಸರ್ಕಾರದ ಮೇಲೂ ಇತ್ತು. ಈಗ ಹಣಕಾಸು ಖಾತೆ ತಮ್ಮಲ್ಲೇ ಇಟ್ಟು ಕೊಂಡಿರುವ ಎಸ್.ಎಮ್. ಕೃಷ್ಣರವರು ಜಲಮಂಡಳಿಯನ್ನು ಖಾತೆಯನ್ನು ನಿಯಂತ್ರಿಸುತ್ತಿದ್ದಾರೆ. ಅಲ್ಲದೇ ಅವರ ಆಪ್ತ ಶಿಷ್ಯ, ಗೂಂಡಾಗುರು ಎಂದೇ ಖ್ಯಾತರಾಗಿರುವ ಶಾಸಕ ಲಿಂಗಪ್ಪನವರನ್ನೇ ಅಧ್ಯಕ್ಷರನ್ನಾಗಿಸಿದ್ದಾರೆ.

ಜಗತ್ತಿನ 120 ರಾಷ್ಟ್ರಗಳಲ್ಲಿ ನೀರಿನ ವ್ಯಾಪಾರ ಆರಂಭಿಸಿದ್ದೇವೆಂದು ಕೊಚ್ಚಿಕೊಳ್ಳುವ ಫ್ರಾನ್ಸ್‌ನ ಖದೀಮ ಕಂಪನಿಗಳಾದ ವಿವಿಂಡಿ ಮತ್ತು ನಾರ್ಥೂಂ ಬ್ರಿಯನ್ ಲಿಯೋನೇಸ್‌ಗಳೊಂದಿಗೆ ಈಗಾಗಲೇ ತಿಳುವಳಿಕೆ ಒಪ್ಪಂದವೊಂದಕ್ಕೆ ಸಹಿಹಾಕಲಾಗಿದೆ. ಅಲ್ಲದೇ ಪ್ರಯೋಗಾತ್ಮಕ ಎಂದು ಬೆಂಗಳೂರಿನ ಕೆಲ ಪ್ರದೇಶಗಳನ್ನು ವಹಿಸಲಾಗಿದೆ. ಪೈಪ್‌ಲೈನ್, ನೀರು ಶುದ್ಧೀಕರಣ ಘಟಕ, ನುರಿತ ಸಿಬ್ಬಂದಿ ಹೀಗೆ ಎಲ್ಲಾ ಅಪಾರವಾದ ಸಂಪನ್ಮೂಲ, ಮೂಲಸೌಕರ್ಯದ ಜಾಲ ಇರುವ ಬಿಡಬ್ಲ್ಯೂಎಸ್‌ಎಸ್‌ಬಿಯಲ್ಲಿ ಈ ಕಂಪನಿ ಗಳು ಮಾಡುವ 'ಘನ ಸೇವೆ' ಎಂದರೆ - ಬಿಲ್ಲಿಂಗ್ ಮತ್ತು ನಿರ್ವಹಣೆ ಅಂತೆ. ಅಂದರೆ ಗುತ್ತಿಗೆ ಪಡೆದ ನಂತರ ಈ ಕಂಪನಿಗಳು ನೀರಿನ ಸೇವಾ ಶುಲ್ಕವೆಂದು ಕನಿಷ್ಟ ಶೇ 450 ರಷ್ಟು ಹೆಚ್ಚಿಸಿದ ಉದಾಹರಣೆಗಳು ಕಣ್ಣೆದುರಿವೆ. ಅಲ್ಲದೇ ರೋಗ ಪೀಡಿತ ನೀರು ಸರಬರಾಜು ಮಾಡಿ ಛೀಮಾರಿ ಗೀಡಾದ ಇತಿಹಾಸವೂ ಇದೆ. ಈಗ ಇಲ್ಲಿಗೆ ವಕ್ಕರಿಸಲಿರುವ ಇವು ಮೊದಲ ಹಂತದಲ್ಲೇ ಸ್ಲಂ ಜನರಿಗೆ ತಿಂಗಳಿಗೇ ರೂ. 250, 5000 ರೂ. ಆದಾಯ ಇರುವವರಿಗೆ ರೂ. 500, ಮೇಲ್ವರ್ಗದವರಿಗೆ ರೂ. 1000 ಗಳನ್ನು ನಿಗದಿ ಮಾಡಲು ಬತ್ತಳಿಕೆಯಲ್ಲಿ ಅಡಗಿಸಿಕೊಂಡಿವೆ ಯಂತೆ.



ಈ ಕಂಪನಿಗಳಿಗೆ ನಮ್ಮ 'ಒಟ್ಟು ಆಸ್ತಿ' ಅತೀ ಅವಶ್ಯಕ ಸೇವೆಯಾಗಿರುವ 'ನೀರನ್ನೇ' ವಹಿಸಲು ಮುಂದಾದ ಸಂಪುಟದ ನಿರ್ಧಾರಕ್ಕೆ ತೀವ್ರವಾದ ಪ್ರತಿಭಟನೆ ವ್ಯಕ್ತವಾಗಿದೆ. ಇದರಿಂದ ಮುಖ್ಯಮಂತ್ರಿ ತಾತ್ಕಾಲಿಕವಾಗಿ ತಡೆಹಿಡಿದು ಪ್ರಕಟಣೆ ಮಾಡಿದ್ದಾರೆ. ಆದರೆ ಇಂದಲ್ಲ ನಾಳೆ ಖಂಡಿತವಾಗಿ ಮತ್ತೆ ಕುಡಿವ ನೀರನ್ನು ಖಾಸಗೀಕರಿಸುವ ಅಪಾಯ ಇದ್ದೇ ಇದೆ. ಎಚ್ಚರ, ಪ್ರತಿರೋಧ ಅಗತ್ಯ.


ಈ ವಾರ ಕರ್ನಾಟಕ ಒಂದು ನೋಟ

ಎಸ್.ವೈ.ಗುರುಶಾಂತ್

ವಿಲೀನ : ಹೆಗಡೆ-ಯಾದವ್ ಆಟಗಳೇನು ?

ಪುಟ 9 ನೋಡಿ

ಚರಿತ್ರೆ ಕುರಿತ ವಿಶ್ವಕೋಶ : ವಿಶಿಷ್ಠ ಪ್ರಯತ್ನ



ಸಂಪಾದಕರು
ತಂಬಂಡ ವಿಜಯ್ ಪೂಣಚ್ಚ

ಸಹ ಸಂಪಾದಕರು
ಸಿ.ಆರ್.ಗೋವಿಂದರಾಜು
ಕೆ. ಮೋಹನಕೃಷ್ಣ ರೈ
ಎಸ್.ಚನ್ನಸ್ವಾಮಿ ಸೋಸಲೆ

ಸತ್ಯ ಎಂಬುದು ಸಾಮೂಹಿಕವಾದುದು, ಸತ್ಯದ ಸಂಶೋದನೆಯಾಗಬೇಕು. ಸತ್ಯ ಸಾಮೂಹಿಕ ವಾದ್ದರಿಂದ ಅದರ ಸಂಶೊದನೆ ಕೂಡ ಸಾಮೂಹಿಕವಾಗಿ ನಡೆಯಬೇಕು ಎಂದು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಡಾ|| ತಿಮ್ಮಪ್ಪ ಅಭಿಪ್ರಾಯಪಟ್ಟರು.

ಕಳೆದವಾರ ಬೆಂಗಳೂರಿನ ಸತಾರ್ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಹಂಪಿ ವಿಶ್ವವಿದ್ಯಾಲಯದವರು ಹೊರ ತಂದಿರುವ ಇತಿಹಾಸ ವಿಶ್ವಕೋಶ ಸಂಪುಟದ ಬಿಡುಗಡೆ ಮತ್ತು ವಿಚಾರಸಂಕಿರಣದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡುತ್ತಿದ್ದರು.

ವಿಶ್ವವಿದ್ಯಾಲಯಗಳು ಪ್ರಕಟಣೆಯನ್ನು ನಿರ್ಲಕ್ಷಿಸುತ್ತಿವೆ, ಪ್ರಸಾರಾಂಗಗಳು ಹಿಂದೆ ನಿರಂತರವಾಗಿ ಪ್ರಕಟಣೆಯ ಕೆಲಸ ಮಾಡುತ್ತಿದ್ದವು. ಈಗ ಅಂತಹ ಪರಿಸ್ಥಿತಿಯಲ್ಲಿ, ಆದರೆ ಸಂಶೋದನೆಗಳು ನಡೆಯುತ್ತಲೇ ಇವೆ, ನಡೆದ ಸಂಶೋದನೆಗಳು ಪ್ರಕಟಗೊಳ್ಳಬೇಕು. ಹಾಗೆ ಪ್ರಕಟಗೊಳ್ಳುವುದರಿಂದ ಮಾತ್ರ ಅದು ಜನರಿಗೆ ತಲುಪಿ ಅದಕ್ಕೊಂದು ಅರ್ಥ ಬರಲು ಸಾಧ್ಯ ಎಂದರು. ಹಂಪಿ ವಿಶ್ವವಿದ್ಯಾಲಯವು ಸಂಶೋದನೆಗಳಿಗೆ ಮೀಸಲಾದ ವಿಶ್ವವಿದ್ಯಾಲಯ, ಹಾಗಾಗಿ ಅದು ಸಂಶೋಧನೆ ಮತ್ತು ಪ್ರಕಟಣೆಗೆ ಹೆಚ್ಚಿನ ಮಹತ್ವ ನೀಡುತ್ತಿದೆ. ಅದರಲ್ಲೂ 'ಇತಿಹಾಸಕ್ಕೆ ಸಂಬಂಧಿಸಿ ಇಂತಹ ವಿಶ್ವಕೋಶ ಹೊರತಂದಿರುವುದು ಶ್ಲಾಘನೀಯ ಕೆಲಸ, ಏಕೆಂದರೆ ಇತಿಹಾಸ ಸತ್ಯವಾದುದು, ಹಾಗೂ ಪ್ರತಿಯೊಂದು ವಿಷಯವೂ ಐತಿಹಾಸಿಕ ಸತ್ಯ. ಪ್ರತಿಯೊಂದನ್ನು ಐತಿಹಾಸಿಕವಾಗಿ ಅಧ್ಯಯನ ಮಾಡಿದಾಗ ಮಾತ್ರ ಆ ವಿಷಯದ ಮಹತ್ವ ನಮಗೆ ತಿಳಿಯುತ್ತದೆ ಎಂದು ತಿಮ್ಮಪ್ಪ ನುಡಿದರು.

ಈ ವಿಶ್ವಕೋಶದ ಸಲಹೆಗಾರರು, ಕುವೆಂಪು ವಿಶ್ವವಿದ್ಯಾಲಯದ ಇತಿಹಾಸ ಪ್ರಾಧ್ಯಾಪಕರೂ ಆದ ಡಾ. ಭಾರಿಯವರು ವಿಚಾರ ಸಂಕಿರಣದಲ್ಲಿ ವಿಚಾರ ಮಂಡಿಸುತ್ತಾ, 18ನೇ ಶತಮಾನದಲ್ಲಿ ಮೊದಲಿಗೆ ಫ್ರಾನ್ಸಿನಲ್ಲಿ ಈ ರೀತಿಯಲ್ಲಿ ವಿಶ್ವಕೋಶವೊಂದನ್ನು ಸಂಪಾದಿಸಲಾಯಿತು, 8 ಸಂಪುಟಗಳನ್ನು ಡೆನಿಸ್ ಡೆಡೆಕೊ ಎಂಬಾತನ ಸಂಪಾದಕತ್ವದಲ್ಲಿ ಫ್ರಾನ್ಸಿನ ಕ್ರಾಂತಿಗೆ ಮೊದಲು ಸಂಪಾದಿಸಲಾಯಿತು, ಈ ವಿಶ್ವಕೋಶದಲ್ಲಿ ಭಾತೃತ್ವ, ಸಮಾನತೆ ಎಂಬ ವಿಷಯಗಳನ್ನು ಚರ್ಚಿಸಲಾಯಿತು ಎಂದರು, ಮುಂದೆ ಈ ವಿಶ್ವಕೋಶವು ಫ್ರಾನ್ಸಿನ ಕ್ರಾಂತಿಗೆ ವೈಚಾರಿಕ ತಳಹದಿ ನಿರ್ಮಿಸಿಕೊಟ್ಟದ್ದು ಐತಿಹಾಸಿಕ ಸತ್ಯ.

ಇಂದು ಯಾವುದೇ ವಿಷಯ ವನ್ನು ಸೂಕ್ಷ್ಮವಾಗಿ ನೋಡಲು ಹೋಗಿ ಅದರ ಸಮಗ್ರತೆಯನ್ನು ಗ್ರಹಿಸಲು ಸಾಧ್ಯವಾಗುತ್ತಿಲ್ಲ, ಈ ಇತಿಹಾಸ ವಿಶ್ವಕೋಶವು ಸಮಗ್ರವಾಗಿ ಇತಿಹಾಸವನ್ನು ಪರಿಚಯಿಸಿ ಕೊಡುವ ಪ್ರಯತ್ನ ಎಂದು ತಿಳಿಸಿದರು.

ವಿಶ್ವಕೋಶದ ಮತ್ತೊಬ್ಬ ಸಲಹೆಗಾರರಾದ ರಾಜಾರಾಂ ಹೆಗಡೆಯವರು ಮಾತನಾಡುತ್ತ, ಕನ್ನಡದಲ್ಲಿ ಇಂತಹದೊಂದು ಪ್ರಯತ್ನ ಇದೇ ಮೊದಲು, ಆದ್ದರಿಂದ ಕನ್ನಡದ ಜನಗಳಿಗೆ ಇತಿಹಾಸವನ್ನು ಸರಿಯಾಗಿ ಅರ್ಥೈಸಿಕೊಳ್ಳಲು ಇದು ಸಹಾಯಕ. ಕನ್ನಡದಲ್ಲಿ ಈ ರೀತಿಯ ವಿಶ್ವಕೊಶದ ಕೊರತೆಯಿಂದಾಗಿ ಇತಿಹಾಸ ಅಧ್ಯಯನವೆಂದರೆ ಪಿ.ಯು.ಸಿ ಪಠ್ಯಪುಸ್ತಕಗಳನ್ನು ಅವಲಂಬಿಸುವಂತಾಗಿ ನಮ್ಮ ಸಂಶೋಧನಾರ್ಥಿಗಳ ತಿಳುವಳಿಕೆ ಸೀಮಿತಗೊಳ್ಳುವಂತಾಗಿದೆ, ಎಂದು ಹೇಳುತ್ತಾ, ಈವತ್ತಿನ ಸ್ನಾತಕೋತ್ತರ ಪದವಿ, ಸಂಶೋದನಾ ವಿದ್ಯಾರ್ಥಿಗಳು ಪಿ.ಯು.ಸಿ ಪಠ್ಯವನ್ನೇ ಆಧಾರವಾಗಿ ಬಳಸಿ ಕಲಿಯುತ್ತಿದ್ದಾರೆ, ಆದರೆ ಈ ವಿಶ್ವಕೋಶ ಇಂತಹ ಕೊರತೆಯೊಂದನ್ನು ನೀಗಲು ಸಹಕಾರಿಯಾದೀತು ಎಂದು ಅವರು ಆಶಯ ವ್ಯಕ್ತಪಡಿಸಿದರು.

ಇದುವರೆಗಿನ ಇತಿಹಾಸದ ಬರಹಗಳು ಯುರೋಪನ್ನು ಕೇಂದ್ರವಾಗಿರಿಸಿಕೊಂಡು ರಚಿಸಿದುದಾಗಿತ್ತು. ಅದನ್ನು ಪ್ರತಿರೋಧಿಸುವ ಹೆಸರಿನಲ್ಲಿ ಮತ್ತೊಂದು ವಿಕೃತಿ ಇತಿಹಾಸ ಸಂಶೋಧನೆಯಲ್ಲಿ ನಡೆಯುತ್ತಿದೆ ಎಂದು ಹೆಸರೇಳದೆ ಕೋಮುವಾದೀ ಇತಿಹಾಸಕಾರರನ್ನು ಟೀಕಿಸಿದರು.

ನಾವು ರಚಿಸಿರುವ ವಿಶ್ವಕೋಶ ಯುಕೋಸೆಂಟ್ರಿಕ್ ಅಲ್ಲ, ಅದರ ಜೊತೆಯಲ್ಲೇ ಯುರೋಪಿನ ಮೌಲ್ಯಗಳಿಗೆ ವಿರೋಧವೆಂದೇನೂ ಅಲ್ಲ, ಇದು ಏಶಿಯಾ, ಲ್ಯಾಟಿನ್ ಅಮೇರಿಕಾ, ಆಫ್ರಿಕಾ ಸೇರಿದಂತೆ ಎಲ್ಲಾ ಇತಿಹಾಸಗಳ ಸಂಕ್ಷಿಪ್ತ ಪರಿಚಯ ಎಂದು ಹೇಳಿದರು.

ಮಾರ್ಕ್ಸ್‌ವಾದಿ ಚಿಂತಕರಾದ ದಿವಂಗತ ಸಿ.ಆರ್.ಭಟ್, ಸಿ.ನಂಜುಂಡಪ್ಪ ಕೂಡ ಲೇಖನಗಳನ್ನು ಬರೆದುಕೊಟ್ಟಿರುವ ಈ ವಿಶ್ವಕೋಶವು ಕನ್ನಡದಲ್ಲಿ ಮೂಡಿ ಬಂದಿರುವ ಮಹತ್ವದ ಕೃತಿ. ಒಂದು ಸಾವಿರ ಪುಟಗಳ ಇದರ ಬೆಲೆ 750 ರೂ.ಗಳು.


ಭಿನ್ನ ಬಗೆ ಅರ್ಥ ಮಾಡಿಕೊಳ್ಳುವುದರತ್ತ

'ಚರಿತ್ರೆ' ವಿಶ್ವಕೋಶವು ಕನ್ನಡ ವಿಶ್ವವಿದ್ಯಾಲಯದ ನಾಲ್ಕನೆಯ ಸಂಪುಟ. ಇದು ಒಟ್ಟು 9 ಭಾಗಗಳನ್ನು ಒಳಗೊಂಡಿದೆ.

ಪ್ರಸ್ತುತ ವಿಶ್ವಕೋಶವು ಪ್ರಾಚೀನ, ಮಧ್ಯಯುಗೀನ ಚರಿತ್ರೆಗಳಿಗೆ ಸಂಬಂಧಿಸಿದಂತೆ ಅನೇಕ ವಿವರಗಳನ್ನು ಚರ್ಚಿಸಿದರೂ, ಬಹುತೇಕವಾಗಿ ಆಧುನಿಕ ಚರಿತ್ರೆಯನ್ನು ಪ್ರಮುಖವಾಗಿ ವಿಶ್ಲೇಷಿಸಿದೆ. ಸಾಮ್ರಾಜ್ಯಶಾಹಿ ಶಕ್ತಿಗಳು ಬೇರೆ ಬೇರೆ ಖಂಡಗಳ ಅನೇಕ ದೇಶಗಳನ್ನು ವಸಾಹತುಗಳನ್ನಾಗಿ ಮಾಡಿದ ಹಾಗೂ ಆ ವಸಾಹತುಶಾಹಿ ಸರಕಾರಗಳಿಗೆ ವಿರೋಧವಾಗಿ ಜನಾಂದೋಲನವನ್ನು ಸಂಘಟಿಸಿದ ಸ್ಥಳೀಯರ ರಾಷ್ಟ್ರೀಯ ಹೋರಾಟಗಳ ಮತ್ತು ಪ್ರತಿಕ್ರಿಯೆಗಳ ಪ್ರಕ್ರಿಯೆಗಳನ್ನು ಇಲ್ಲಿ ವಿವರವಾಗಿ ಚರ್ಚಿಸಲಾಗಿದೆ. ಆಫ್ರಿಕಾ, ಆಸ್ಟ್ರೇಲಿಯಾ ಮತ್ತು ಅಮೇರಿಕಾಗಳಲ್ಲಿನ ಮೂಲನಿವಾಸಿ ಬುಡಕಟ್ಟುಗಳು ಸಾಮ್ರಾಜ್ಯಶಾಹಿಗಳ ತುಳಿತಕ್ಕೆ ನೇರವಾಗಿ ಬಲಿಯಾದ ಚರಿತ್ರೆಯ ವಿವಿಧ ಘಟ್ಟಗಳನ್ನು ನಮ್ಮ ಲೇಖಕರು ವಿವರಿಸಿದ್ದಾರೆ. ಈ ಮೂಲನಿವಾಸಿಗಳ ಪ್ರತಿಭಟನೆಯನ್ನು ಅವರ ಸಾಂಸತಿಕ ಗುರುತೇ ಇಲ್ಲದ ರೀತಿಯಲ್ಲಿ ಮಟ್ಟಹಾಕಿ, ದೇಶಗಳನ್ನು ಸುಲಿಗೆ ಮಾಡಿ, ಜನ ಹೋರಾಟಗಳನ್ನು ಸುಮಾರು ಒಂದೂವರೆ ಶತಮಾನಗಳ ಕಾಲ ದಮನಿಸಿದವು. ಆದರೂ, ದ್ವಿತೀಯ ಮಹಾಯುದ್ಧದ ನಂತರ ಮುಖ್ಯವಾಗಿ ಏಷ್ಯಾದಲ್ಲಿ ತಮ್ಮದೇ ಗುರುತನ್ನು ಸ್ಥಾಪಿಸಲು ಈ ರಾಷ್ಟ್ರೀಯ ಹೋರಾಟಗಳಿಗೆ ಸಾಧ್ಯವಾಯಿತು. ಆಫ್ರಿಕಾ, ಆಸ್ಟ್ರೇಲಿಯಾ ಮತ್ತು ಅಮೇರಿಕಾಗಳಲ್ಲಿ ಸ್ಥಳೀಯರ ಹೋರಾಟಗಳು ಹೇಗೆ ಭಿನ್ನ ಹಾದಿಗಳನ್ನು ತುಳಿದವು ಎಂಬುದನ್ನು ಪ್ರಸ್ತುತ ವಿಶ್ವಕೋಶವು ವಿವರಿಸಿದೆ. ಹಾಗೆಯೇ, ಪ್ರಸ್ತುತ ವಸಾಹತುಶಾಹಿ ಚರಿತ್ರೆಯನ್ನು ವಿಶ್ಲೇಷಿಸುವುದರೊಂದಿಗೆ . ಪ್ರಸಕ್ತ ವಿದ್ಯಮಾನಗಳನ್ನು ಸಂದರ್ಭೋಚಿತವಾಗಿ ವಿಶ್ವಕೋಶದ ಬೇರೆ ಬೇರೆ ಕಡೆಗಳಲ್ಲಿ ನಮ್ಮ ವಿದ್ವಾಂಸರು ಚರ್ಚಿಸಿದ್ದಾರೆ. ಔದ್ಯೋಗೀಕರಣ, ಭಿನ್ನ ಭಿನ್ನ ಬೌದ್ಧಿಕ ಸಿದ್ಧಾಂತಗಳು, ಸಾಮಾಜಿಕ ಮತ್ತು ರಾಷ್ಟ್ರೀಯ ಪ್ರಶ್ನೆಗಳು ಧ್ರುವೀಕರಣಗೊಳ್ಳುವ ಭಿನ್ನ ಭಿನ್ನ ಬಗೆಗಳನ್ನು ಈ ಸಂದರ್ಭದಲ್ಲಿ ಅರ್ಥಮಾಡಿಕೊಳ್ಳುವ ಪ್ರಯತ್ನಗಳನ್ನು ಮಾಡಲಾಗಿದೆ. ಇದರೊಂದಿಗೆ ಪ್ರಥಮ - ದ್ವಿತಿಯ ಮಹಾಯುದ್ಧಗಳು, ಶೀತಲಯುದ್ಧ, ಸೋವಿಯತ್ ರಷ್ಯಾದ ವಿಘಟನೆ ಹಾಗೂ ಜಾಗತೀಕರಣ ಪ್ರಕ್ರಿಯೆಗಳ ರಾಜಕೀಯ-ಸಾಮಾಜಿಕ-ಸಾಂಸತಿಕ-ಸಂಘರ್ಷಗಳನ್ನು ದಾಖಲಿಸುವ ಯತ್ನವನ್ನು ಬಹುತೇಕ ಲೇಖಕರು ಮಾಡಿದ್ದಾರೆ. ಹಾಗೆಯೇ, ಬೇರೆ ಬೇರೆ ದೇಶಗಳ ಮತ್ತು ಜನರ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸತಿಕ ಹಿನ್ನೆಲೆಗಳನ್ನು ; ಸಾಮ್ಯತೆಗಳನ್ನು, ಭಿನ್ನತೆಗಳನ್ನು, ಸಾಮರಸ್ಯಗಳನ್ನು, ಸಂಘರ್ಷಗಳನ್ನು ಮತ್ತು ಸಂಕೀರ್ಣ ಸಂಬಂಧಗಳನ್ನು ಪ್ರಸ್ತುತ ವಿಶ್ವಕೋಶವು ಚರ್ಚಿಸುವ ಪ್ರಯತ್ನವನ್ನು ಮಾಡಿದೆ.

ಕೋಲಾರ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಆಗ್ರಹಿಸಿ ಯುವಜನ ಆಂದೋಲನ ಆರಂಭ

ಅನೇಕ ಪ್ರಾಕೃತಿಕ ಸಂಪನ್ಮೂಲಗಳಿದ್ದು ಹಿಂದುಳಿದ ಜಿಲ್ಲೆಯಾಗೇ ಉಳಿದಿರುವ ಕೋಲಾರದಲ್ಲಿ ಸಮಗ್ರ ಅಭಿವೃದ್ಧಿ ಸಾಧಿಸಬೇಕೆಂಬ ಸ್ಥಳೀಯ ಯುವಕರ ಹೋರಾಟ ಆರಂಭಗೊಂಡಿರುವ ವರದಿ ಇಲ್ಲಿದೆ. ದೇಶಧ ಒಟ್ಟು ಅಭಿವೃದ್ಧಿಯೊಂದಿಗೆ ಬೆಳೆಯುವ ಅನಿವಾರ್ಯತೆಯಿರುವಾಗಲೇ ಜಿಲ್ಲೆಯಲ್ಲಿ ಆಳುವವರ ನಿರ್ಲಕ್ಷ್ಯವೂ ಹೇಗೆ ಕಾರಣವಾಗಬಲ್ಲದು ಎಂಬುದರ ಒಂದು ನಿದರ್ಶನವಿದೆ. ಅದೂ ಜಾಗತೀಕರಣ ಪ್ರಹಾರಗಳು ಹೆಚ್ಚುತ್ತಿರುವಾಗ ಹೋರಾಟದ ವಿಸ್ತಾರವೂ ಹೆಚ್ಚಬೇಕಿದೆ. ಈ ದಿಶೆಯಲ್ಲಿ ಜನರನ್ನು ಜಾಗೃತಗೊಳಿಸುವ ದಿಕ್ಕಿನ ಪ್ರಯತ್ನಗಳ ವರದಿ....



ಜಿ.ಆರ.ಮುರುಳಿಕೃಷ್ಣ

ಕರ್ನಾಟಕ ರಾಜ್ಯದಲ್ಲಿ ಕೋಲಾರ ಜಿಲ್ಲೆಯು ಅತ್ಯಂತ ಹಿಂದುಳಿದ ಜಿಲ್ಲೆಗಳಲ್ಲಿ ಒಂದು. ಜಿಲ್ಲೆಯು 8240 ಚದರ್ ಕಿ.ಮೀನಷ್ಟು ವಿಸ್ತೀರ್ಣ ಹೊಂದಿದ್ದು 3325 ಗ್ರಾಮಗಳನ್ನು ಹಾಗೂ ಸರಿಸುಮಾರು 24 ಲಕ್ಷ ಜನಸಂಖ್ಯೆಯನ್ನು ಹೊಂದಿದ್ದು ಬಹುಪಾಲು ಜನ ಕೃಷಿ ಚಟುವಟಿಕೆಗಳನ್ನೇ ಅವಲಂಬಿಸಿ ಜೀವನ ಸಾಗಿಸುತ್ತಿದ್ದಾರೆ.

ಜಿಲ್ಲೆಯಲ್ಲಿ ವರ್ಷಪೂರ್ತಿ ಹರಿಯುವ ಯಾವುದೇ ನದಿಗಳಾಗಲಿ, ನಾಲೆಗಳಾಗಲೀ ಇಲ್ಲ. ಕುಡಿಯಲು ಮತ್ತು ಕೃಷಿಗೆ ಮಳೆ ಮತ್ತು ಅಂತರ್ಜಲವನ್ನೇ ಆಶ್ರಯಿಸಲಾಗಿದೆ. ಪ್ರಕೃತಿಯು ವಿರುಪೇರಿನಿಂದ ಸಮಯಕ್ಕೆ ಸರಿಯಾಗಿ ಮಳೆಯಾಗದೇ ಅಂತರ ಜಲ ಅವಲಂಬಿಸಲಾಗಿದೆ. ಈಗ ಅಂತರಜಲ ಕುಸಿದಿದೆ.

1984ರಲ್ಲಿ ಉಪಗ್ರಹ ನೀಡಿರುವ ಸಮೀಕ್ಷೆಯ ಪ್ರಕಾರ ಇನ್ನು 15-20 ವರ್ಷ ಇದೇ ರೀತಿ ಅಂತರಜಲವನ್ನು ತೆಗೆಯುವುದರಿಂದ ಕೋಲಾರ ಜಿಲ್ಲೆ ಮರುಭೂಮಿಯಾಗಲಿದೆ ಎಂದು ಮತ್ತೊಂದು ಕಡೆ ನೀರಾವರಿ ತಜ್ಞರಾದ ನಿವೃತ್ತ ಮುಖ್ಯ ಇಂಜನಿಯರ್ ಪರಮಶಿವಯ್ಯನವರು ವರದಿ ನೀಡಿದ್ದು ಅದರ ಪ್ರಕಾರ ಜಿಲ್ಲೆಗೆ ಪಶ್ಚಿಮ ಘಟ್ಟಗಳಲ್ಲಿ ಹರಿದು ವ್ಯರ್ಥವಾಗಿ ಸಮುದ್ರಸೇರುವ ನೇತ್ರಾವತಿ ಮತ್ತು ಕುಮಾರಧಾರಾ ನದಿಗಳ ನೀರನ್ನು ಹರಿಸಬಹುದೆಂದು ಈ ವರದಿಯು ಜಿಲ್ಲೆಯ ಜನತೆಗೆ ಭರವಸೆ ಮೂಡಿಸಿದೆ.

ಒಂದು ಕಡೆ ಜಿಲ್ಲೆಯಲ್ಲಿ ಜನತೆಯ ಭವಿಷ್ಯ ಅತ್ಯಂತ ಆತಂಕಕರವಾಗಿದೆ. ಮತ್ತು ಪರಮಶಿವಯ್ಯನವರ ವರದಿ ಒಂದು ಹಂತದಲ್ಲಿ ನಮಗೆ ಶಾಶ್ವತವಾದ ಪರಿಹಾರವನ್ನು ಸೂಚಿಸಿದೆ. ಹೀಗಿದ್ದರೂ ಈ ಹಿಂದಿನ, ಈಗಿರುವ ಯಾವುದೇ ರಾಜಕೀಯ ವ್ಯಕ್ತಿಗಳು, ಮುಖಂಡರುಗಳು, ಬೇರೆ ಬೇರೆ ಸಂಘ ಸಂಸ್ಥೆಗಳವರು. ಇದರ ಬಗ್ಗೆ ಆಲೋಚಿಸದ ಅವರವರ ಸ್ವಾರ್ಥ ರಾಜಕೀಯಗಳಲ್ಲಿ ತೊಡಗಿದ್ದಾರೆ.

ಈ ಶಾಶ್ವತ ನೀರಾವರಿ ಕಾರ್ಯ ಜಾರಿಗೊಳಿಸಲು ಜನತೆಯ ಆಂದೋಲನ ಮತ್ತು ಚಳುವಳಿಗಳಿಂದ ಒತ್ತಾಯ ತರುವುದೊಂದೇ ಮಾರ್ಗ. ಆದ್ದರಿಂದ ಒಂದು ದೂರಗಾಮಿ ಮತ್ತು ವೈಜ್ಞಾನಿಕ ದೃಷ್ಟಿಕೋನವನ್ನಿಟ್ಟು ಕೊಂಡು 'ಜಿಲ್ಲೆಯ ಸಮಗ್ರ ಅಭಿವ್ರದ್ಧಿಗೆ, ಉದ್ಯೋಗಾವಕಾಶಗಳ ಸೃಷ್ಟಿಗೆ' ಎಂಬ ಘೋಷಣೆಯಡಿ 'ಯುವಜನರ ಆಂದೋಲನ'ವನ್ನು ಭಾರತ ಪ್ರಚಾರಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ) ಸಂಘಟಿಸಿದೆ.

ಆಂದೋಲನವನ್ನು ಯಶಸ್ವಿಗೊಳಿಸಲು ಜಿಲ್ಲೆಯ ಎಲ್ಲ ಜನವಿಭಾಗಗಳನ್ನು ಒಟ್ಟಿಗೆ ಕೂಡಿಸಿಕೊಂಡು ಕಾರ್ಯಕ್ರಮ ರೂಪಿಸಲಾಯಿತು.

ಈ ಸಭೆಗೆ ಡಿವೈಎಫ್ಐ, ಎಸ್ಎಫ್ಐ, ಡಿಎಸ್ಎಸ್, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸದಸ್ಯರುಗಳು, ನಗರಸಭಾ ಸದಸ್ಯರುಗಳು, ಮಾಜಿ ಸದಸ್ಯರುಗಳು, ಸಂಘರ್ಷ ಸಮಿತಿ, ಜನತಾದಳ(ಜಾ), ಜೆಎಂಎಸ್, ಅಂಗನವಾಡಿ ನೌಕರರ ಸಂಘ, ಕೆಎಸ್ಆರ್‌ಟಿಸಿ ಕಾರ್ಮಿಕರ ಸಂಘ, ಸಾಕ್ಷರತಾ ಸಂಯೋಜಕರು, ಕಲಾವಿದರು, ಸಾಹಿತಿಗಳು ಮುಂತಾದ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಸಮಾಜಸೇವಕರು ಸೇರಿದ್ದರು.

ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಹೊನ್ನುಡಿ ದಿನಪತ್ರಿಕೆಯ ಸಂಪಾದಕರಾದ ಎಂ.ಜಿ. ಪ್ರಭಾಕರ್, ಕಾರ್ಯದರ್ಶಿಗಳಾಗಿ ಡಿವೈಎಫ್ಐನ ಜಿಲ್ಲಾ ಕಾರ್ಯದರ್ಶಿ ಎ.ವಿ.ವೆಂಕಟರಾಂ, ಖಜಾಂಚಿಯಾಗಿ ಜಿ.ಆರ್.ಮುರಳಿಕೃಷ್ಣ ಆಯ್ಕೆಯಾದರು. ಒಂದು ಸ್ವಾಗತ ಸಮಿತಿಯನ್ನು ರಚಿಸಲಾಯಿತು.

ಸ್ವಾಗತಸಮಿತಿ ಸಭೆಯಲ್ಲಿ ಭಾಗವಹಿಸಿದ ಎಲ್ಲರೂ ಮುಂದಿರುವ ಆತಂಕದ ಪರಿಸ್ಥಿತಿಯ ಕುರಿತು ಗಂಭೀರವಾಗಿ ಚರ್ಚಿಸಿ ಕಾರ್ಯಕ್ರಮ ರೂಪಿಸಲಾಯಿತು.

ಯಶಸ್ವಿ ವಿಚಾರ ಸಂಕಿರಣ

ಅಗಸ್ಟ್ 1ರಂದು ನಗರದ ಚನ್ನಯ್ಯ ರಂಗ ಮಂದಿರದಲ್ಲಿ ವಿಚಾರಸಂಕಿರಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ವಿಚಾರ ಸಂಕಿರಣದ ಯಶಸ್ಸಿಗೆ ಎಸ್ಎಫ್ಐ ಜಿಲ್ಲಾಸಮಿತಿ ಹಾಗೂ ಇತರೆ ಸಂಘಟನೆಗಳ ಸಹಕಾರ ವನ್ನು ಪಡೆದು ಜಿಲ್ಲೆಯಲ್ಲಿ ಅತ್ಯಂತ ಕ್ರಿಯಾತ್ಮಕವಾದ, ಗಂಭೀರ ಚಿಂತನೆಯಿಂದ ಕೂಡಿದ ಒಂದು ಐತಿಹಾಸಿಕವಾದ ವಿಚಾರ ಸಂಕಿರಣವಾಗಿ ಜಿಲ್ಲೆಯ ಎಲ್ಲ ಜನವಿಭಾಗಗಳಲ್ಲಿಯೂ ಉತ್ಸಾಹ, ಹುಮ್ಮಸ್ಸನ್ನು ತುಂಬಿತು.

ಅಭಿವೃದ್ಧಿ ಪ್ರಶ್ನೆ: ಶ್ವೇತಭವನದ ನಿಯಂತ್ರಣ: ಬರಗೂರು

ವಿಚಾರ ಸಂಕಿರಣವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ. ಬರಗೂರು ರಾಮಚಂದ್ರಪ್ಪರವರು ಉದ್ಘಾಟಿಸಿ ಮಾತನಾಡುತ್ತಾ ಜಗತ್ತಿನ ಅಭಿವೃದ್ಧಿಶೀಲ ರಾಷ್ಟ್ರಗಳನ್ನು ಅಮೇರಿಕಾದ ಶ್ವೇತಭವನವು ನಿಯಂತ್ರಿಸುತ್ತಿರುವುದರಿಂದ ಭಾರತದಂತಹ ದೇಶಗಳ ಸಂವಿಧಾನದ ಸಾರ್ವಭೌಮತ್ವವು ಕ್ರಮೇಣ ಕರಗುತ್ತಿದೆ ಎಂದು ಹೇಳಿದರು.

ಅಮೇರಿಕಾದ ವಾದವೇ ಅಂತರರಾಷ್ಟ್ರೀಯ ವಾದವಾಗಿರುವುದರಿಂದ ಜಗತ್ತಿನ ಅಭಿವೃದ್ಧಿಶೀಲ ದೇಶಗಳಲ್ಲಿ ಹಲವಾರು ಸಮಸ್ಯೆಗಳು ಉದ್ಭವಿಸಿವೆಯೆಂದು ಅವರು ಜಾಗತೀಕರಣದ ನೀತಿಗಳಿಂದಾಗಿ ನಮ್ಮ ಹಳ್ಳಿಗಳು ಸೊರಗುತ್ತಿವೆ ಎಂದರು.

ಸ್ಥಳೀಯ ಆಶಯಗಳಿಗೆ ಆದ್ಯತೆ ನೀಡಿದಾಗ ಮಾತ್ರ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ವಾದಕ್ಕೆ ಹೆಚ್ಚು ಬೆಲೆ ಬರುತ್ತದೆಂದರು. ಆದರೆ ಹೀಗಾಗದೆ ಅಮೇರಿಕಾದಂತಹ ಕೆಲವೇ ರಾಷ್ಟ್ರಗಳ ಅಂತರಾಷ್ಟ್ರೀಯ ವಾದದಿಂದ ಸ್ಥಳೀಯ ಆಶಯಗಳಿಗೆ ಹಿನ್ನಡೆಯುಂಟಾಗುತ್ತದೆ ಎಂದು ವಿಷಾಧಿಸಿದರು.

ಯುದ್ಧ ಉದ್ಯಮವಾಗಿ ಬೆಳೆಯುತ್ತಾ ಅಮೇರಿಕಾದಂತಹ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಶಸ್ತ್ರಾಸ್ತ್ರಗಳ ಮಾರಾಟ ಕೇಂದ್ರವಾಗುತ್ತಿರುವ ಹಿನ್ನೆಲೆಯಲ್ಲಿ ಭಯೋತ್ಪಾದನೆಗಿಂತಲೂ ಯುದ್ಧೋತ್ಪಾದಕತೆಯು ಅಪಾಯಕಾರಿ, ಶಿಕ್ಷಣ, ಕೈಗಾರಿಕೆ ಮತ್ತು ಸಂಸತಿಯನ್ನು ಉದ್ಯಮಪತಿಗಳು ನಿಯಂತ್ರಿಸುತ್ತಿದ್ದಾರೆಂದು ಹೇಳಿದರು.

ಜಾಗತೀಕರಣದ ಅಪಾಯಕಾರಿ ನಿಲುವುಗಳನ್ನು ಸಮರ್ಥವಾಗಿ ಎದುರಿಸಿ ನೈತಿಕ, ಸಾತ್ವಿಕ ನೆಲೆಗಟ್ಟಿನ ಹೋರಾಟವು ರೂಪುಗೊಳ್ಳಬೇಕಿದೆಯೆಂದು ಅಭಿಪ್ರಾಯಪಟ್ಟರು.

ವಿಚಾರಸಂಕಿರಣದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ವಿಧಾನ ಪರಿಷತ್ ಸದಸ್ಯರಾದ ವಿ.ಆರ್.ಸುದರ್ಶನ್‌ರವರು ಮಾತನಾಡಿ ಜನತೆಯ, ಜನಪ್ರತಿನಿಧಿಗಳ ಸಂಘಟಿತ ಹೋರಾಟದ ಮೂಲಕ ಮಾತ್ರ ಜಿಲ್ಲೆಯನ್ನು ಅಭಿವೃದ್ಧಿಪಡಿಸಲು ಸಾಧ್ಯ ಎಂದರು.

ಭವಿಷ್ಯ ಕರಾಳ : ಶ್ರೀರಾಮರೆಡ್ಡಿ

ಮಾಜಿಶಾಸಕರು ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿಗಳಾದ ಜಿ.ವಿ.ಶ್ರಿರಾಮರೆಡ್ಡಿ ಮಾತನಾಡಿ ಕೋಲಾರ ಜಿಲ್ಲೆಯು ಇನ್ನು ಹತ್ತಾರು ವರ್ಷಗಳಲ್ಲಿ ಮರಳುಗಾಡಾಗಲಿದೆಯೆಂದು ವರದಿ ಬಂದಿದ್ದು ಭವಿಷ್ಯ ಅತ್ಯಂತ ಕರಾಳವಾಗಿದೆಯೆಂದು ಹೇಳಿದರು.

ಜಿಲ್ಲೆ ಹಿಂದುಳಿಯಲು ಕಾರಣಗಳೇನು, ಸಮಸ್ಯೆಗಳೇನು ಎಂದು ಆಲೋಚಿಸಬೇಕಾದ ಜನರು ತಮ್ಮ ಕರ್ತವ್ಯ ಮರೆತಿದ್ದಾರೆ, ಈ ಬಗ್ಗೆ ಜನರೂ ಆಸಕ್ತಿ ವಹಿಸುತ್ತಿಲ್ಲ ಎಂದು ವಿಷಾದಿಸಿದರು.

ಜಿಲ್ಲೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಹಾಲಿನ ಉತ್ಪಾದನೆ ಇದ್ದರೂ ಮಾರುಕಟ್ಟೆ ಇಲ್ಲದೆ ರೈತರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಹೊರರಾಜ್ಯಗಳ ಹಾಲು ಮಾರಾಟಗಾರರಿಗೆ ಬೆಂಗಳೂರಿನಲ್ಲಿ ಅವಕಾಶ ಕಲ್ಪಿಸಿದ್ದಾರೆ. ಆದರೆ ಕೋಲಾರದ ಹಾಲಿಗೆ ಮಾರುಕಟ್ಟೆಯ ವಿಸ್ತರಣೆಗೆ ನಮ್ಮ ಸರ್ಕಾರ ಅವಕಾಶ ನೀಡಿಲ್ಲ. ಹಾಲಿನ ಉತ್ಪನ್ನಗಳ ತಯಾರಿಕೆ ಬಗ್ಗೆಯೂ ಯೋಚಿಸುತ್ತಿಲ್ಲ ಎಂದು ಆರೋಪಿಸಿದರು.

ಸ್ಥಳೀಯ ಸಂಪನ್ಮೂಲವನ್ನು ಆದರಿಸಿ ಕೈಗಾರಿಕೆಗಳನ್ನು ಸ್ಥಾಪಿಸಿ ಯುವಜನರಿಗೆ ಉದ್ಯೋಗ ನೀಡಿ ನಮ್ಮ ವಸ್ತುಗಳಿಗೆ ಮಾರುಕಟ್ಟೆ ಕಂಡುಕೊಳ್ಳುವಂತಹ ಯೋಜನೆಯನ್ನು ರೂಪಿಸಿಲ್ಲ ಎಂದರು. ಜಿಲ್ಲೆಯ ಸಮಗ್ರ ಅಭಿವೃದ್ಧಿ ಬಗ್ಗೆ ಡಿವೈಎಫ್ಐ ಆಯೋಜಿಸಿರುವ ವಿಚಾರ ಸಂಕಿರಣವು ವಿಶಾಲವಾದ ಹೋರಾಟಕ್ಕೆ ನಾಂದಿಯಾಗಲೆಂದರು.

ಆದ್ಯತೆ - ಜ್ಯೋತಿರೆಡ್ಡಿ

ವಿಚಾರಸಂಕಿರಣದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಮಾಜಿ ಶಾಸಕಿ ಶ್ರೀಮತಿ ಜ್ಯೋತಿರೆಡ್ಡಿ ಮಾತನಾಡಿ ರೈತರು ಬೆಳೆದಂತಹ ಬೆಳೆಗಳಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಕೆರೆಗಳಲ್ಲಿ ಹೂಳೆತ್ತಲು ಯಾವುದೇ ಸರ್ಕಾರ ಹಣ ಮೀಸಲಿಟ್ಟಿಲ್ಲ. ಈ ಆಂದೋಲನಕ್ಕೆ ನಾವೆಲ್ಲರೂ ಹೆಚ್ಚಿನ ರೀತಿಯಲ್ಲಿ ಸಹಕಾರ ಬೆಂಬಲ, ಪ್ರೋತ್ಸಾಹ ನೀಡುವುದಾಗಿ ತಿಳಿಸಿದರು.

ಅಭಿವೃದ್ಧಿ ಪ್ರತಿಪಾದನೆ

ನೀರಾವರಿ ತಜ್ಞರಾದ ಪಾ. ಪರಮಶಿವಯ್ಯರವರು 'ಕೋಲಾರ ಜಿಲ್ಲೆಗೆ ಶಾಶ್ವತ ನೀರಾವರಿ ಯೋಜನೆ' ಕುರಿತು ತಮ್ಮ ವಿಷಯವನ್ನು ಮಂಡಿಸಿದರು. ಹಾಗೂ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿಗಳಾದ ಸೋಮಶೇಖರ್‌ರವರು ಕೋಲಾರ ಜಿಲ್ಲೆಯಲ್ಲಿ 'ಕೃಷಿಯಾಧಾರಿತ ಕೈಗಾರಿಕೆಗಳ ಸ್ಥಾಪನೆ ಮತ್ತು ಉದ್ಯೋಗಾವಕಾಶಗಳ ಸೃಷ್ಟಿ' ಕುರಿತು ತಮ್ಮ ವರದಿಯನ್ನು ಮಂಡಿಸಿದರು.

ವಿಚಾರಸಂಕಿರಣದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಬಿ.ವಿ.ಗೋಪಿನಾಥ್ ಮಾತನಾಡಿ ಅನೇಕ ವರ್ಷಗಳಿಂದ ಜಿಲ್ಲೆ ಅಭಿವೃದ್ಧಿ ಹೊಂದಿಲ್ಲ. ಇದಕ್ಕೆ ರಾಜಕೀಯ ಇಚ್ಛಾಶಕ್ತಿಯ ಸಮಗ್ರ ಚಿಂತನೆಯ ಕೊರತೆ ಎದ್ದು ಕಾಣುತ್ತಿದೆ ಎಂದರು.

ವಿಚಾರಸಂಕಿರಣದ ಅಧ್ಯಕ್ಷತೆ ವಹಿಸಿದ್ದ ಹೊನ್ನುಡಿ ದಿನಪತ್ರಿಕೆ ಸಂಪಾದಕರಾದ ಎಂ.ಜಿ. ಪ್ರಭಾಕರ್ ಮಾತನಾಡಿ ಜನಪರ ಹೋರಾಟ ನಡೆಸುವವರನ್ನು ಆಳುವ ಪಕ್ಷದ ರಾಜಕಾರಣಿಗಳು ಶತ್ರುಗಳಂತೆ ನೋಡುತ್ತಿರುವುದು ಉತ್ತಮ ಲಕ್ಷಣವಲ್ಲವೆಂದರು. ○

ಜಾಥಾಗಳ ಉದ್ಘಾಟನೆ

ಕೆ.ಜಿ.ಎಫ್.ನ ಹುತಾತ್ಮರ ಮೈದಾನದಲ್ಲಿ ಆಗಸ್ಟ್ 2ರಂದು ಭಗತ್‌ಸಿಂಗ್ ಕಲಾತಂಡದ ಜಾಥಾ ಉದ್ಘಾಟನೆಯಾಯಿತು. ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ರಾಮಲಿಂಗಂರವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕರಾದ ಟಿ.ಎಸ್.ಮಣಿ, ಡಿವೈಎಫ್ಐ ತಮಿಳುನಾಡು ರಾಜ್ಯಸಮಿತಿ ಖಜಾಂಚಿಯಾದ ತಿರುವೆಚ್ಚಿ, ರಾಜ್ಯಕಾರ್ಯದರ್ಶಿಗಳಾದ ಮಹಾಂತೇಶ್, ಜಿಲ್ಲಾಕಾರ್ಯದರ್ಶಿ ಎ.ವಿ.ವೆಂಕಟರಾಂ, ರಾಮಚಂದ್ರ ತಿರುಪತಿ, ಎ.ಆರ್.ಬಾಬು, ಸಿಐಟಿಯು ಮುಖಂಡರಾದ ಗಾಂಧಿನಗರ ನಾರಾಯಣಸ್ವಾಮಿ, ಜೆಡಿಎಸ್ ಮುಖಂಡರಾದ ಎಂ.ರಾಮಚಂದ್ರ, ಎಸ್.ಎಫ್.ಐನ ವಿ.ಗೀತಾ, ಜಿ.ಆರ್.ಮುರಳಿಕೃಷ್ಣ, ಮುಂತಾದವರು ಭಾಗವಹಿಸಿದ್ದರು. ಸಮಾರಂಭಕ್ಕೆ ನೂರಾರು ಮಂದಿ ಸೇರಿದ್ದು ಜಾಥಾವನ್ನು ಆತ್ಮೀಯವಾಗಿ ಸ್ವಾಗತಿಸಿದರು. ಈ ಜಾಥಾವು 15 ದಿನಗಳ ಕಾಲ ಕೋಲಾರ ಉಪವಿಭಾಗದ ತಾಲೂಕುಗಳ 144 ಗ್ರಾಮಗಳು 7ಕ್ಕೂ ಹೆಚ್ಚು ಪಟ್ಟಣಗಳಲ್ಲಿ ಸಂಚರಿಸಲಿದೆ.

ಆರ್.ಎಂ.ವಿ ಕಲಾತಂಡವು ಆಗಸ್ಟ್ 2ರಂದು 2ನೇ ಜಲಿಯನ್‌ವಾಲಾಬಾಗ್ ಎಂದು ಪ್ರಖ್ಯಾತವಾಗಿರುವ ಗೌರಿಬಿದನೂರಿನ ವಿದುರಾಶ್ವತ್ಥದಲ್ಲಿ ಉದ್ಘಾಟನೆಯಾಯಿತು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಹೊರೆಯಾಳ ದೊರೆಸ್ವಾಮಿ ಈ ಜಾಥಾವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಜಿ.ವಿ.ಶ್ರಿರಾಮರೆಡ್ಡಿ, ಜ್ಯೋತಿರೆಡ್ಡಿ ಡಿವೈಎಫ್ಐನ ರಾಜ್ಯ ಮುಖಂಡರಾದ ಕೆ.ಎನ್.ಉಮೇಶ್ ಎಸ್.ಎಫ್.ಐನ ಜಿಲ್ಲಾ ಕಾರ್ಯದರ್ಶಿಗಳಾದ ಎಂ.ಪಿ.ಮುನಿವೆಂಕಟಪ್ಪ ಮುಂತಾದವರು ಭಾಗವಹಿಸಿದ್ದರು.

ಈ ಜಾಥಾವು ಚಿಕ್ಕಬಳ್ಳಾಪುರ ಉಪವಿಭಾಗದ ತಾಲೂಕುಗಳ ಸುಮಾರು 184ಕ್ಕೂ ಹೆಚ್ಚು ಗ್ರಾಮಗಳು ಮತ್ತು ಪಟ್ಟಣಗಳಲ್ಲಿ ಸಂಚರಿಸಲಿದೆ.



ಐಕ್ಯತೆಯ ಸಮಾವೇಶ

ಜುಲೈ 15 ರಂದು ನವದೆಹಲಿಯಲ್ಲಿ ಜರುಗಿದ ಕಾರ್ಮಿಕ ವರ್ಗದ ಸಮಾವೇಶ, ಕೇಂದ್ರ ಸರ್ಕಾರದ ಧೋರಣೆಗಳನ್ನೆದುರಿಸಲು ದೇಶವ್ಯಾಪಿಯಾದ ವ್ಯಾಪಕ ಆಂದೋಲನವನ್ನು ರೂಪಿಸಿದೆ. ಐಕ್ಯ ಹೋರಾಟದ ಈ ಹೋರಾಟ ದೇಶದ ಇತಿಹಾಸದಲ್ಲಿ ವಿಶಿಷ್ಟವಾಗಲಿದೆ.

ದೆಹಲಿಯಲ್ಲಿ ಕಾರ್ಮಿಕರ ರಾಷ್ಟ್ರೀಯ ಅಧಿವೇಶನ

ಕಾರ್ಮಿಕ ವರ್ಗದ ಸಂಘಟಿತ ಪ್ರಕ್ಷೋಭೆ

ಇ.ಕೆ.ಎನ್. ರಾಜನ್

ರಾಜಕೀಯ ಅಭಿಪ್ರಾಯ ವ್ಯತ್ಯಾಸಗಳಿದ್ದರೂ ಭಾರತದ ಸಂಘಟಿತ ಕಾರ್ಮಿಕರು - ನೌಕರರು ಕೇಂದ್ರ ಸರ್ಕಾರದ ಆರ್ಥಿಕ ಧೋರಣೆಗಳಿಗೆ ಎದುರಾಗಿ ಬೃಹತ್ ಸಂಘಟಿತ ಪ್ರಕ್ಷೋಭೆಗೆ ರೂಪ ಕೊಟ್ಟಿರುತ್ತಾರೆ. ಜುಲೈ 15 ರಂದು ನವದೆಹಲಿಯ ತಲಕಟೋರಾ ಸ್ಟೇಡಿಯಂನಲ್ಲಿ ಜರುಗಿದ ಕಾರ್ಮಿಕರ ರಾಷ್ಟ್ರೀಯ ಅಧಿವೇಶದಲ್ಲಿ ದೇಶದ ಎಲ್ಲಾ ಮೂಲೆಗಳಿಂದ ಎಲ್ಲಾ ರಾಷ್ಟ್ರೀಯ ಕಾರ್ಮಿಕ ಸಂಘಟನೆಗಳನ್ನು ಪ್ರತಿನಿಧಿಸಿ ಐದುಸಾವಿರ ಮುಖಂಡರು ಭಾಗವಹಿಸಿದ್ದರು. ಎಡ ಟ್ರೇಡ್ ಯೂನಿಯನ್‌ಗಳ ಜೊತೆ INTUC ಸಹಾ ಚಳುವಳಿಯಲ್ಲಿ ಸೇರುವಂತಹ ಅನಿವಾರ್ಯತೆ ಇಂದು ಉಂಟಾಗಿದೆ, ಬ್ಯಾಂಕ್ ವಿಮೆ ಸೇರಿದಂತಹ ಆರ್ಥಿಕ ರಂಗದ ನೌಕರರ ಹಾಗೂ ಅಧಿಕಾರಿಗಳ ಸಂಘಟನೆಗಳು, ರೈಲ್ವೆ ನೌಕರರ ಅತೀ ದೊಡ್ಡ ಫೆಡರೇಷನ್ ಆದ AIRF ನ ಮುಖಂಡರೂ ಸಹ ದೆಹಲಿ ಸಭೆಯಲ್ಲಿ ಭಾಗವಹಿಸಿದ್ದರು. ಕೇಂದ್ರ ಸರಕಾರಿ ನೌಕರರ ಸಂಘಟನೆಯ ಕಾನ್‌ಫೆಡರೇಷನ್, ವಿವಿಧ ರಾಜ್ಯ ಸರಕಾರಿ ನೌಕರರ ಸಂಘಟನೆಗಳು ಹಾಗೂ ಫೆಡರೇಷನ್‌ಗಳು, ಅಂಚೆ, ದೂರವಾಣಿ, ವಿಮಾನ ನಿಲ್ದಾಣ ಪ್ರಾಧಿಕಾರ ಸೇರಿದಂತೆ ಎಲ್ಲಾ ಸಂಘಟನೆಗಳ ಮುಖಂಡರು ದೆಹಲಿ ಅಧಿವೇಶನದಲ್ಲಿ ಭಾಗವಹಿಸಿದ್ದರು.

ಇ. ಬಾಲಾನಂದನ್(ಸಿಐಟಿಯು), ಜೆ. ಚಿತ್ತರಂಜನ್(ಎಐಟಿಯುಸಿ), ಶಿವಗೋಪಾಲ್ ಮಿಶ್ರಾ(ಹೆಚ್‌ಎಂಎಸ್), ಗುಮನ್ ಸಿಂಗ್(ಐಎನ್‌ಟಿಯುಸಿ) ಸೇರಿದಂತಹ ಅಧ್ಯಕ್ಷೀಯ ಮಂಡಳಿ ದೆಹಲಿ ಅಧಿವೇಶನವನ್ನು ನಡೆಸಿಕೊಟ್ಟಿತು. ರಾಷ್ಟ್ರೀಯ ಅಧಿವೇಶನದ ಕೆಲಸ ಕಾರ್ಯಗಳಲ್ಲಿ ಸಂಪೂರ್ಣವಾಗಿ ಭಾಗವಹಿಸಿಕೊಂಡು ಬಂದಿದ್ದಂತಹ ಬಿ.ಎಂ.ಎಸ್. ಮುಖಂಡತ್ವ ಕೊನೇ ಗಳಿಗೆಯಲ್ಲಿ ದೆಹಲಿ ಅಧಿವೇಶನದಲ್ಲಿ ಭಾಗವಹಿಸುವಿಕೆಯಿಂದ ಹಿಂದೆ ಸರಿಯಿತು. ಆದರೆ ಬೇಡಿಕೆ ಹಾಗೂ ಸಮಸ್ಯೆಗಳನ್ನು ಕೈ ಬಿಡಲು ಆಗುವುದಿಲ್ಲ ಎಂದು ಬಿ.ಎಂ.ಎಸ್. ಅಭಿಪ್ರಾಯ ವ್ಯಕ್ತಪಡಿಸಿ ಅಕ್ಟೋಬರ್ 2 ರಂದು ಪ್ರತ್ಯೇಕ ಚಳುವಳಿಗೆ ಕರೆ ಕೊಟ್ಟಿದೆ.

ಕಾರ್ಮಿಕ ವಿರೋಧಿ ಧೋರಣೆಗಳನ್ನು ಹಿಮ್ಮೆಟ್ಟಿಸಲು ಆಗಸ್ಟ್ 19 ರಂದು ರಾಷ್ಟ್ರವ್ಯಾಪಿಯಾಗಿ ಪ್ರತಿಜ್ಞೆ ಕೈಗೊಂಡು ಚಳುವಳಿ ಆರಂಭವಾಗುತ್ತದೆ. ಆಗಸ್ಟ್ 24 ರಂದು ದೊಡ್ಡ ರೀತಿಯಲ್ಲಿ ಪ್ರಚಾರ ಕಾರ್ಯಕ್ರಮಗಳನ್ನು ನಡೆಸಲು ತೀರ್ಮಾನಿಸಲಾಗಿದೆ. ಸೆಪ್ಟೆಂಬರ್ 23 ರಿಂದ 28 ರವರೆಗೆ ಜಿಲ್ಲಾ ಮಟ್ಟದಲ್ಲಿ ಮೆರವಣಿಗೆ, ಸಭೆ ನಡೆಸಲು ತೀರ್ಮಾನಿಸಲಾಗಿದೆ. ನವೆಂಬರ್ 18 ರಿಂದ 23 ರವರೆಗೆ ರಾಜ್ಯ ಮಟ್ಟದಲ್ಲಿ ಎಲ್ಲಾ ಸಂಘಟನೆಗಳನ್ನು ಸೇರಿಸಿ ರ್‍ಯಾಲಿ ನಡೆಸಲು ತೀರ್ಮಾನಿಸಲಾಗಿದೆ. 2003ರ ಜನವರಿಯಲ್ಲಿ ದೇಶದಾದ್ಯಂತ ಕಾರ್ಮಿಕರು ಪ್ರತಿಭಟನೆ ನಡೆಸಿ ಬಂಧನಕ್ಕೊಳಗಾಗಬೇಕು ಎಂದು ತೀರ್ಮಾನಿಸಲಾಗಿದೆ. 2003ರ ಫೆಬ್ರವರಿಯಲ್ಲಿ ಪಾರ್ಲಿಮೆಂಟ್‌ನಲ್ಲಿ ಬಜೆಟ್ ಅಧಿವೇಶನ ನಡೆಯುವಾಗ ಕಾರ್ಮಿಕರು ಪಾರ್ಲಿಮೆಂಟ್ ಚಲೋ ನಡೆಸಲು ತೀರ್ಮಾನಿಸಿದ್ದಾರೆ.

ಒಕ್ಕೊರಲಿನ ವಿರೋಧ-ಹೋರಾಟದ ನಿರ್ಧಾರ

ರಾಷ್ಟ್ರದ ಕಾರ್ಮಿಕ, ನೌಕರರ ಕೇಂದ್ರ ಕಾರ್ಮಿಕ ಸಂಘಟನೆಗಳ ಒಕ್ಕೂಟಗಳು, ಸ್ವತಂತ್ರ ಸಂಘಟನೆಗಳ ಪ್ರತಿನಿಧಿಗಳು ಅಧಿವೇಶನದಲ್ಲಿ ಸೇರಿ ಜಾಗತೀಕರಣ, ಉದಾರೀಕರಣ, ಖಾಸಗೀಕರಣ, ಸೇರಿದಂತೆ ಕೇಂದ್ರ ಸರಕಾರದ ಹೊಸ ಆರ್ಥಿಕ ಧೋರಣೆಗಳನ್ನು ಒಕ್ಕೊರಲಿನಿಂದ ವಿರೋಧಿಸಲು ನಿರ್ಣಯಿಸಿದ್ದಾರೆ. ವೇತನ ಕಡಿತ, ಇರುವಂತಹ ಕೆಲಸದ ಭದ್ರತೆ ಕಳೆದುಕೊಳ್ಳುವುದು, ಸೌಲಭ್ಯಗಳ ಕಡಿತ, ಸಾಮಾಜಿಕ ಭದ್ರತೆಗಳ ಕಡಿತ ಇವುಗಳಿಂದ ನಿರುದ್ಯೋಗ ಮತ್ತು ದಾರಿದ್ರ್ಯ ಹೆಚ್ಚಾಗಿ ಹೊಸ ಆರ್ಥಿಕ ಧೋರಣೆಯ ಎಲ್ಲಾ ಭಾರವನ್ನು ದುಡಿಯುವ ಜನತೆಯ ಮೇಲೆ ಹಾಕುವ ಕೇಂದ್ರ ಸರ್ಕಾರದ ತಲೆಕೆಟ್ಟ ಪರಿಷ್ಕರಣೆ ನೀತಿಯನ್ನು ಎಲ್ಲಾ ಶಕ್ತಿಯನ್ನು ಉಪಯೋಗಿಸಿ ಎದುರಿಸಿ ಸೋಲಿಸಬೇಕೆಂದು ಕಾರ್ಮಿಕರ ದೆಹಲಿ ಅಧಿವೇಶನ ತೀರ್ಮಾನಿಸಿದೆ.

ಟ್ರೇಡ್ ಯೂನಿಯನ್ ನೇತೃತ್ವದಲ್ಲಿ ಹಲವು ದೇಶವ್ಯಾಪಿ ಹೋರಾಟಗಳು ನಡೆದಿದ್ದರು ಸಹಾ ಕೇಂದ್ರ ಸರಕಾರ ತನ್ನ ಧೋರಣೆಯನ್ನು ಬದಲಾಯಿಸಲು ತಯಾರಾಗಿಲ್ಲ. ಕೇಂದ್ರ ಸರ್ಕಾರದ ಹೊಸ ಧೋರಣೆ ಆರ್ಥಿಕ ರಂಗದಲ್ಲಿ ವಿಫಲವಾಗಿದ್ದರೂ ಕೇಂದ್ರ ಸರಕಾರ ತನ್ನನ್ನು ತಿದ್ದಿಕೊಳ್ಳಲು ತಯಾರಾಗಿರುವುದಿಲ್ಲ. ಈ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಕಾರ್ಮಿಕರ ರಾಷ್ಟ್ರೀಯ ಅಧಿವೇಶನ ಕೇಂದ್ರ ಸರ್ಕಾರದ ಧೋರಣೆಗಳನ್ನು ತಿದ್ದಲು ಹಾಗೂ ಪರ್ಯಾಯ ಧೋರಣೆ ಏನೆಂದು ತಿಳಿಯಲು ತಯಾರಿಲ್ಲದ ಕೇಂದ್ರ ಸರಕಾರದ ಮನೋಭಾವವನ್ನು ಸಹಾ ತಿದ್ದಲು ಹೋರಾಟ ಶಕ್ತಿಯುತ ಗೊಳಿಸಬೇಕೆಂದು ದೆಹಲಿ ಅಧಿವೇಶನ ತೀರ್ಮಾನಿಸಿದೆ. ವಿಶ್ವ ಬ್ಯಾಂಕಿನ ಹಾಗೂ WTO ನಿರ್ದೇಶನದಂತೆ ಕಾರ್ಯ ನಿರ್ವಹಿಸುವ ಸರಕಾರ ತನ್ನ ಸ್ವಂತ ಆರ್ಥಿಕ ಕಾರ್ಯಕ್ರಮವನ್ನು ಜಾರಿ ಮಾಡುವ ಬದಲಾಗಿ ವಿದೇಶಿ ಆದೇಶವನ್ನು ಕಾಯ್ದು ನೋಡುತ್ತಿರುವುದು ವ್ಯಕ್ತವಾಗಿದೆ. ಕೇಂದ್ರ ಸರ್ಕಾರ ಈ ಎಲ್ಲಾ ಅಂಶಗಳ ಬಗ್ಗೆ ತಿಳುವಳಿಕೆ ಇದ್ದರೂ ಈ ಅಂಶವನ್ನು ಒಪ್ಪಲು ತಯಾರಿಲ್ಲ. ದೇಶದ ಆರ್ಥಿಕ ಸ್ವಾವಲಂಬನೆಯನ್ನು ವಿದೇಶಿಗಳಿಗೆ ಅಡಮಾನವಿಟ್ಟು ದೇಶದ ಆರ್ಥಿಕ ಪರಿಸ್ಥಿತಿಯನ್ನು ಕೇಂದ್ರದ ಬಿಜೆಪಿ ಸರಕಾರ ಇಕ್ಕಟ್ಟಿಗೆ ಸಿಲುಕಿಸಿದೆ.

ಪುನರ್‌ಜೀವವಿಲ್ಲ

ದೇಶದ ಉತ್ಪಾದನೆ ಕುಂಟಿತಗೊಂಡಿದೆ. ಕಾರ್ಮಿಕ ರಂಗವನ್ನು ಇದು ಹೆಚ್ಚಾಗಿ ಭಾದಿಸುತ್ತಿದೆ. ಲಕ್ಷಾಂತರ ಕಾರ್ಮಿಕರು ಮತ್ತು ನೌಕರರು ಕೆಲಸ ಕಳೆದುಕೊಂಡಿದ್ದಾರೆ. ಹಲವಾರು ಕಾರ್ಖಾನೆಗಳು ಮುಚ್ಚಿವೆ. 2001ರ ಮಾರ್ಚ್ 31ರ ಅಂಕಿ ಅಂಶ ಸಮೀಕ್ಷಣೆ ಪ್ರಕಾರ ರೋಗಗ್ರಸ್ತವಾಗಿರುವ ಸಣ್ಣ ಮಧ್ಯಮ ಹಾಗೂ ಬೃಹತ್ ಕೈಗಾರಿಕೆಗಳ ಸಂಖ್ಯೆ 2,52,947 ಇದರಲ್ಲಿ ಹಲವು ಕಾರ್ಖಾನೆಗಳು ಈಗಾಗಲೇ ಮುಚ್ಚಲ್ಪಟ್ಟಿವೆ. ಈ ಉದ್ಯಮಗಳಿಗೆ ಪುನರ್‌ಜೀವ ಕೊಡಿಸಲು ಸರಕಾರದಿಂದ ಯಾವ ಕ್ರಮವನ್ನು ವಹಿಸಲಾಗುತ್ತಿಲ್ಲ.

ಕಾರ್ಖಾನೆಗಳು ರೋಗಗ್ರಸ್ತವಾಗಿರುವ ಸಮಯದಲ್ಲಿ ಈ ಕಾರ್ಖಾನೆಗಳ ಪ್ರಮೋಟರ್‌ಗಳು ಕುಬೇರರಾಗುತ್ತಿದ್ದಾರೆ. ಎಲ್ಲಾ ರಂಗಗಳಲ್ಲಿ ಮಾರುಕಟ್ಟೆ ಸಡಿಲತೆ ಮುಂದುವರಿಯುತ್ತಿದೆ. ಬಂಡವಾಳ ಹೂಡಿಕೆ ಕಡಿಮೆಯಾಗುತ್ತಿದೆ. ಬ್ಯಾಂಕ್ ಸಾಲದ ಉಪಯೋಗ ಕಡಿಮೆಯಾಗಿದೆ. ಕಾರ್ಖಾನೆಗಳಲ್ಲಿ ಕೆಲಸಗಾರರ ಸಂಖ್ಯೆ ಕಡಿತಗೊಳಿಸಲಾಗುತ್ತಿದೆ. ಇದರಿಂದಾಗಿ ನಿರುದ್ಯೋಗ ಹೆಚ್ಚಾಗುತ್ತಿದೆ. ಉದ್ಯಮಗಳನ್ನು ಮುಚ್ಚುತ್ತಿರುವುದು, ಸ್ವಯಂ ನಿವೃತ್ತಿ ಜಾರಿಮಾಡುವುದು, ಡೌನ್ ಸೈಜ್ ಇತ್ಯಾದಿ ಕಾರಣಗಳಿಂದ 2 ಕೋಟಿಗೂ ಹೆಚ್ಚು ಕಾರ್ಮಿಕರು ಬೀದಿಗೆ ಬಿದ್ದಿದ್ದಾರೆ. ಕೇವಲ ಕಾರ್ಖಾನೆಗಳಿಂದ 7 ಲಕ್ಷ ಕಾರ್ಮಿಕರಿಗೆ ಈ ಎರಡು ವರ್ಷಗಳಲ್ಲಿ ಕೆಲಸ ನಷ್ಟವಾಗಿದೆ. ಈ ನಡುವೆ ಕೇಂದ್ರ ಸರಕಾರ ಆಡಳಿತ ರಂಗದಲ್ಲಿ ಡೌನ್ ಸೈಜ್ ಮೂಲಕ ನೌಕರರ ಸಂಖ್ಯೆಯನ್ನು ಶೇಕಡಾ 10 ರಷ್ಟು ಕಡಿಮೆ ಮಾಡುವ ತೀರ್ಮಾನ ಕೈಗೊಂಡಿದೆ. ಕೇಂದ್ರ ಸರಕಾರದ ಒಡತನದಲ್ಲಿರುವ ಸಾರ್ವಜನಿಕ ಉದ್ದಿಮೆಗಳಿಂದ 40 ಸಾವಿರಕ್ಕೂ ಹೆಚ್ಚು ಜನರನ್ನು ಸ್ವಯಂ ನಿವೃತ್ತಿ ಯೋಜನೆ ಮೂಲಕ ತೆಗೆದುಹಾಕಲಾಗಿದೆ.

ಘೋರ ಸ್ಥಿತಿ

2ನೇ ಕಾರ್ಮಿಕ ಆಯೋಗ ಕೇಂದ್ರ ಸರ್ಕಾರಕ್ಕೆ ಕಳುಹಿಸಿರುವ ವರದಿಯಲ್ಲಿ ಬರುವ 10 ವರ್ಷದೊಳಗೆ 7 ಕೋಟಿಗೂ ಹೆಚ್ಚು ನಿರುದ್ಯೋಗಿಗಳು ಇರುತ್ತಾರೆಂದು ಲೆಕ್ಕ ಹಾಕಲಾಗಿದೆ. ಖಾಸಗಿ ಬಹುರಾಷ್ಟ್ರೀಯ ಕಂಪನಿಗಳ ರಂಗದಲ್ಲಿ ಜನ ವಿರೋಧಿ ಧೋರಣೆಯನ್ನೇ ಅನುಸರಿಸಲಾಗುತ್ತಿದೆ. ಇವರು ಬಟ್ಟೆ ಗಿರಣಿಗಳಲ್ಲಿ ಮಾತ್ರವೇ 3 ಲಕ್ಷ 90 ಸಾವಿರ ಕಾರ್ಮಿಕರಿಗೆ ಕೆಲಸ ನಷ್ಟ ಉಂಟುಮಾಡಿದ್ದಾರೆ. ಕಳೆದ .2 ವರ್ಷದಲ್ಲಿ ಇಂಡಿಯನ್ ಐಯಾರ್ನ್ ಅಂಡ್ ಸ್ಟೀಲ್ ಕಂಪನಿ, ಟಾಟ ಇಂಜಿನಿಯರಿಂಗ್ ಅಂಡ್ ಲೋಕೋಮೋಟಿವ್, ಬಜಾಜ್ ಆಟೋ, ವೋಲ್ಟಾಸ್, ರಿಲೆಯನ್ಸ್, ಎಬಿಬಿ, ಯೂನಿಲೀವರ್, ಇತ್ಯಾದಿ ದೈತ್ಯ ಕಂಪನಿಗಳಿಂದ 50 ಸಾವಿರ ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕಲಾಗಿದೆ. ಮಾಹಿತಿ ತಂತ್ರಜ್ಞಾನ ರಂಗದಲ್ಲಿ ಕಳೆದ ವರ್ಷ 1 ಲಕ್ಷ ಜನರಿಗೆ ಉದ್ಯೋಗ ನಷ್ಟವಾಗಿದೆ. ಆರ್ಥಿಕ ಪರಿಷ್ಕರಣೆಯಿಂದ ಹೆಚ್ಚು ಭಾಧಿತಾರಾಗಿರುವವರು ಮಹಿಳೆಯರು ಹಾಗೂ ಅಸಂಘಟಿತ ಕಾರ್ಮಿಕರು. ಕಾರ್ಖಾನೆಯ ಮಾಲೀಕರು ತಮ್ಮ ಉತ್ಪಾದನೆಯನ್ನು ಗುತ್ತಿಗೆ ಮೂಲಕ ಮಾಡಿಸಿ ಹೆಚ್ಚು ಲಾಭ ಪಡೆಯುತ್ತಿದ್ದಾರೆ. ಗುತ್ತಿಗೆ ಕಾರ್ಮಿಕರಿಗೆ ಯಾವ ಕೆಲಸದ ಭದ್ರತೆ, ನಿಗದಿತ ಸೌಲಭ್ಯಗಳಿರುವುದಿಲ್ಲ. ಕೃಷಿ, ಗ್ರಾಮೀಣ ಕೈಗಾರಿಕೆಗಳು, ಕಟ್ಟಡ ನಿರ್ಮಾಣ, ಬೀಡಿ ಉದ್ದಿಮೆ, ಹೋಟೆಲ್ ಮತ್ತು ರೆಸ್ಟೋರೆಂಟ್, ವಾಣಿಜ್ಯ ಸಂಸ್ಥೆಗಳು, ಲೋಡಿಂಗ್ ಅನ್ ಲೋಡಿಂಗ್ ರಂಗದಲ್ಲಿ ಕನಿಷ್ಟ ಕೂಲಿ ಹಾಗೂ ಕಾನೂನು ಬದ್ಧ ಸೌಲಭ್ಯಗಳಿಲ್ಲದೆ ಕಾರ್ಮಿಕರು ಕೆಲಸ ಮಾಡುವಂತಾಗಿದೆ. ಈ ಕಾರ್ಮಿಕರಿಗೆ ಕಾನೂನು ರೀತಿಯ ಸೌಲಭ್ಯ ಹಾಗೂ ಸಾಮಾಜಿಕ ಪರಿಷ್ಕಣೆ ಜಾರಿ ಮಾಡಲು ಸರಕಾರ ಹಿಂದೇಟು ಹಾಕುತ್ತಿದೆ. ಭಾರತದ ಕಾರ್ಪೋರೇಟ್ ಹಾಗೂ ಬಹು ರಾಷ್ಟ್ರೀಯ ಕಂಪನಿಗಳಿಗೆ ಎಲ್ಲಾ ರೀತಿಯ ಸಹಾಯ ಮಾಡಲು ನಾಚಿಕೆ ಇಲ್ಲದೆ ಸರ್ಕಾರ ತಯಾರಾಗುತ್ತಿದೆ. ಕಾರ್ಖಾನೆಗಳ ಉತ್ಪಾದನೆಯನ್ನು ಗುತ್ತಿಗೆ ಕಾರ್ಮಿಕರಿಂದ ಮಾಡಿಸಲು ಕಾನೂನಿಗೆ ತಿದ್ದುಪಡಿ ತರಲಾಗುತ್ತಿದೆ. ಬೋನಸ್ ಮೇಲಿನ ಪರಿಮಿತಿಯನ್ನು ತೆಗೆದು ಹಾಕಲು ಸರಕಾರ ತಯಾರಾಗಿಲ್ಲ. ಕಾರ್ಮಿಕರ ಮತ್ತು ನೌಕರರ ಭವಿಷ್ಯ ನಿಧಿ ಹಣದ ಮೇಲಿನ ಬಡ್ಡಿಯನ್ನು ಪ್ರತಿ ವರ್ಷ ಕಡಿಮೆ ಮಾಡಲಾಗುತ್ತಿದೆ. ಕೇಂದ್ರ ನೌಕರರ ಎಲ್.ಟಿ.ಸಿ. ಸೌಲಭ್ಯವನ್ನು ಹಿಂತೆಗೆದುಕೊಳ್ಳಲು ಹೊರಟಿದ್ದಾರೆ. ಕನಿಷ್ಟ ವೇತನ ಹಾಗೂ ತುಟ್ಟಿಭತ್ಯೆಯನ್ನು ಉತ್ಪಾದನೆಗೆ ಜೋಡಿಸಲು ಕಾನೂನು ತಯಾರಾಗುತ್ತಿದೆ. ಸಣ್ಣ ಉಳಿತಾಯ ಯೋಜನೆಯಿಂದ ಕೆಲಸಗಾರರಿಗೆ ಬಹಳ ಅನ್ಯಾಯ ನಡೆದಿದೆ. ಕಾರ್ಮಿಕ ಕಾಯಿದೆಯನ್ನು ಉಲ್ಲಂಘನೆ ಮಾಡುವವರಿಗೆ ಈಗಾಗಲೇ ಯಾವ ಶಿಕ್ಷೆ ಇಲ್ಲದಿರುವಾಗ ಮಾಲಿಕರಿಗೆ ಇನ್ನೂ ಹೆಚ್ಚಿನ ಅನುಕೂಲ ಕಲ್ಪಿಸಲು ಸರಕಾರ ಹೊರಟಿದೆ.

ಎರಡನೇ ಕಾರ್ಮಿಕ ಆಯೋಗದ ಶಿಫಾರಸ್ಸನ್ನು ವಿರೋಧಿಸಲು ದೆಹಲಿ ಕಾರ್ಮಿಕರ ಅಧಿವೇಶನ ತೀರ್ಮಾನಿಸಿದೆ. ಕೈಗಾರಿಕಾ ವಿವಾದ ಕಾಯಿದೆಗೆ, ಗುತ್ತಿಗೆ ಕಾರ್ಮಿಕರ ಕಾಯಿದೆಗೆ ತಿದ್ದುಪಡಿ, ಕೆಲಸದ ಅವಧಿ ಹೆಚ್ಚಳ, ರಾಷ್ಟ್ರೀಯ ಹಾಗೂ ಹಬ್ಬದ ರಜೆ ಕಡಿತ ಇವೆಲ್ಲದರ ವಿರುದ್ಧ ಹೋರಾಡಲು ಟ್ರೇಡ್ ಯೂನಿಯನ್‌ಗಳು ತಯಾರಾಗಬೇಕೆಂದು ದೆಹಲಿ ಕಾರ್ಮಿಕರ ಅಧಿವೇಶನ ಕರೆಕೊಟ್ಟಿದೆ.

ಆಂಧ್ರ, ಕರ್ನಾಟಕ, ಒರಿಸ್ಸಾ, ಪಂಜಾಬ್ ರಾಜ್ಯಗಳಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ಕೃಷಿ ರಂಗದಲ್ಲಿ ಜಾರಿಗೆ ಬಂದಿರುವ ಹೊಸ ನೀತಿಗಳಿಂದಾಗಿ ಈ ಆತ್ಮಹತ್ಯೆ ನಡೆದಿದೆ ಎಂದು ದೆಹಲಿ ಕಾರ್ಮಿಕರ ಅಧಿವೇಶನ ಗುರುತಿಸಿದೆ.


ಹಗರಣಗಳ ಸರದಾರರ ಮತ್ತೊಂದು ಹಗರಣ

ಪೆಟ್ರೋಲ್ ಬಂಕ್ ಹಗರಣ

ಅಪ್ಪಟ ದೇಶಭಕ್ತರು, ಸಾರ್ವಜನಿಕ ಸೇವಾ ದುರಂಧಾರರು, ಅತ್ಯಂತ ಪ್ರಾಮಾಣಿಕರು ಎಂದೆಲ್ಲಾ ಬೊಗಳೆ ಹೊಡೆಯುತ್ತಿದ್ದ ಆರ್‌ಎಸ್‌ಎಸ್ ನ ನಾಯಕ ಬಣ್ಣವೀಗ ಮತ್ತೆ ಬಯಲಾಗಿದೆ. ಅದನ್ನು ನಾಚಿಕೆಬಿಟ್ಟು ಸಮರ್ಥಿಸಿಕೊಳ್ಳುತ್ತಿದ್ದಾರೆ ಬೇರೆ. ಪೆಟ್ರೋಲ್ ಪಂಪ್‌ನ ಭಾರೀ ಹಗರಣದಲ್ಲಿ ಈ 'ಸ್ವಯಂಸೇವಕ'ರ ಪಾಲೆಷ್ಟು?

ಕೆ.ಎನ್.ಉಮೇಶ್

ಬೆಂಗಳೂರು - ತುಮಕೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಕಳೆದ 2 ವರ್ಷಗಳಿಂದ ಈಚೆಗೆ ಬಹಳಷ್ಟು ಪೆಟ್ರೋಲ್ ಬಂಕ್‌ಗಳು ಪ್ರಾರಂಭವಾಗಿವೆ. ತುಮಕೂರಿಗೆ ಹೋಗುವಾಗಲೆಲ್ಲ ಅವುಗಳ ನಿರ್ಮಾಣ ಯಾವ ಹಂತದಲ್ಲಿದೆ ಎಂದು ಕುತೂಹಲದಿಂದ ನೋಡುತ್ತಿದ್ದ ನನಗೆ ಒಂದು ಪ್ರಶ್ನೆ ಸದಾ ಕಾಡುತ್ತಿತ್ತು, ಏನಿದು ಇಷ್ಟೊಂದು ಪೆಟ್ರೋಲ್ ಬಂಕ್‌ಗಳು ಪ್ರಾರಂಭವಾಗಿವೆ? ದಿಡೀರನೆ? ಎಂಬ ಅನುಮಾನ ಸದಾ ನನ್ನನ್ನು ಕಾಡುತಿತ್ತು. ಇದು ಕೇವಲ ಬೆಂಗಳೂರು-ತುಮಕೂರು ರಸ್ತೆ ಮಾತ್ರವಲ್ಲ ಇಡೀ ರಾಜ್ಯದಲ್ಲಿ ಇಡೀ ದೇಶದಲ್ಲಿ ಒಂದೇ ಸಮನೆ, ಪೆಟ್ರೋಲ್ ಬಂಕ್‌ಗಳು ಪ್ರಾರಂಭವಾಗಿವೆ, ತರಾತುರಿಯಲ್ಲಿ ಅವುಗಳ ಮಾಲೀಕರು ಯಾರು? ಎಲ್ಲಿಯವರು? ಹೇಗೆ ಪಡೆದರು ಪರವಾನಗಿ ಎಂಬ ಪ್ರಶ್ನೆಗಳಿಗೆ ಉತ್ತರ ಕಳೆದ ಒಂದು ವಾರದಿಂದ ಪತ್ರಿಕೆಗಳಲ್ಲಿ ಮುಖಪುಟಗಳಲ್ಲಿ ಬರುತ್ತಿರುವ "ಬಂಕ್ ಹಗರಣ- ಸದನ ಸ್ಥಗಿತ -ಗದ್ದಲ", ಆರೋಪ- ಪ್ರತ್ಯಾರೋಪಗಳ ಶಿರ್ಷಿಕೆಯಡಿ ಜಗತ್ತಿಗೆ ಜಗಜ್ಜಾಹೀರವಾಗಿದೆ.



ಹೇಗೆ ಭಿನ್ನ?

ಒಂದೆಡೆ "ನಮ್ಮ ಪಕ್ಷ ಇತರೆ ಪಕ್ಷಗಳಿಗಿಂತ ಭಿನ್ನ" ಮಾತ್ರವಲ್ಲ "ನಮ್ಮ ಸರ್ಕಾರ ಕೂಡ ಇತರೆ ಸರ್ಕಾರಕ್ಕಿಂತ ಭಿನ್ನ ಹಾಗೂ ಸ್ವಚ್ಛ, ಭ್ರಷ್ಟಾಚಾರ ರಹಿತ ಉತ್ತಮ ಆಡಳಿತ ನೀಡಿರುವ, ನೀಡುವ ಸರ್ಕಾರ" ಎಂದು ಉಪ ಪ್ರಧಾನಿ ಲಾಲ್ ಕೃಷ್ಣ ಅಡ್ವಾನಿ "ದೆಹಲಿ ಘೋಷಣೆ"ಯನ್ನು ಪ್ರಕಟಿಸುತ್ತಾ, ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಭಾಷಣವನ್ನು ಮಾಡಿ, ವೆಂಕಯ್ಯನಾಯ್ಡುರವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿದನ್ನು ಅಧಿಕೃತಗೊಳಿಸುವ ಸಭೆಯಲ್ಲಿ ಆಗಸ್ಟ್ 3ರಂದು ದೆಹಲಿಯಲ್ಲಿ ಹೆಮ್ಮೆಯಿಂದ ನುಡಿದಿದ್ದರು.


ಆಗಸ್ಟ್ 5ರಂದು ಸಂಸತ್ತಿನಲ್ಲಿ ಗದ್ದಲ-ಮುಜುಗರ ನಿರೀಕ್ಷಿಸಿರದ ಪ್ರಧಾನಿ ವಾಜಪೇಯಿಯುರವರು; 2000ದ ಜನವರಿಯಿಂದ ಇದುವರೆಗೆ ನೀಡಲಾಗಿದ್ದ ಎಲ್ಲಾ ಪೆಟ್ರೋಲ್ ಬಂಕ್, ಅಡಿಗೆ ಅನಿಲ ವಿತರಣಾ ಪರವಾನಗಿ ಹಾಗೂ ಸೀಮೆ ಎಣ್ಣೆ ಪರವಾನಗಿಯನ್ನು ರದ್ದುಪಡಿಸಿ ಆದೇಶ ಹೊರಡಿಸಬೇಕಾಗಿ ಬಂದಿದೆ. ಬಹುಶಃ ಈ ಘೋಷಣೆ ಆಗಸ್ಟ್ 3'ರ 'ದೆಹಲಿ ಘೋಷಣೆಯನ್ನು' ಬಲಪಡಿಸುವ ನಿಟ್ಟಿನಲ್ಲಿ ಬಿಜೆಪಿ ಪಕ್ಷ ಹಾಗೂ ಎನ್.ಡಿ.ಎ ಸರ್ಕಾರ ಹೇಗೆ ಇತರರಿಗಿಂತ ಭಿನ್ನ ಎಂಬುದನ್ನು ತೋರಿಸಿದೆ ಯೆಂದೂ ನೋಡಿ ನಮ್ಮ ಪ್ರಧಾನಿಯವರ ಪ್ರಾಮಾಣಿಕತೆ ಎಂದು ಕೆಲವರು ಬಡಾಯಿ ಕೊಚ್ಚಿಕೊಳ್ಳಲಿಕ್ಕೂ ಸಾಧ್ಯತೆ ಇದೆ, ಅದರ ಭಾಗವಾಗಿ ರಾಜ್ಯ ಶಾಸನಸಭೆಯ ಮೇಲ್ಮನೆಯ ಕೆಲವು ಬಿಜೆಪಿ ಸದಸ್ಯರು ಸಹಾ ಅಂಥ ಸರ್ಟಿಫಿಕೆಟನ್ನು ಪ್ರಧಾನಿಗಳಿಗೆ ನೀಡಿಯೇ ಬಿಟ್ಟಿದ್ದಾರೆ.

ಪ್ರಧಾನಿ ಈ ಪರವಾನಗಿಗಳನ್ನು ರದ್ದುಮಾಡಲು ಕಾರಣ ಏನು? ಸರ್ಕಾರದ ಒಂದು ಕ್ರಮ ರದ್ದಾಗಲು ಕಾರಣ ಏನು? ಎಂಬುದನ್ನು ಅರಿಯುವ ಅಗತ್ಯವಂತೂ ಅತೀ ಅಗತ್ಯ. ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ ಸರ್ಕಾರ ಪರವಾನಗಿಗಳಲ್ಲಿ ಬಹುತೇಕ ಶೇ.70ರಷ್ಟನ್ನು ಬಿಜೆಪಿ, ಆರ್.ಎಸ್.ಎಸ್ ಹಾಗೂ ಸಂಘಪರಿವಾರದ ನಾಯಕರ ಸಂಬಂಧಿಕರಿಗೆ ನೀಡಲಾಗಿದೆ, ಮತ್ತೆ ಕೆಲವನ್ನು ಹಣಕ್ಕೆ (ಲಂಚಕ್ಕೆ) ನೀಡಲಾಗಿದೆ ಎಂಬ ಸುದ್ದಿಯನ್ನು ಹಾಗೂ ಪರವಾನಗಿ ಪಡೆದ ಕೆಲವು ಪ್ರಮುಖರ ಹೆಸರನ್ನು ಪ್ರಕಟಿಸಿತು. ಕೂಡಲೇ ಆರ್.ಎಸ್.ಎಸ್‌ನ

ಈಗ ಬಿಜೆಪಿ - ಭಾರತೀಯ ಜನತಾ ಪೆಟ್ರೋಲ್ ಪಂಪ್ ಪಾರ್ಟಿ

ಮೇಲಿನ ಮೂರನೇ ಪ್ರಭಾವಿ ಸ್ಥಾನದಲ್ಲಿರುವ ಅದರ ವಕ್ತಾರರಾದ ಎಂ.ಜಿ.ವೈದ್ಯರ ಮಗ ಪಡೆದಿದ್ದ ಪೆಟ್ರೋಲ್ ಬಂಕ್ ಪರವಾನಗಿಯನ್ನೇ ವಾಪಸ್ಸು ನೀಡುವುದಾಗಿ ಪತ್ರಿಕೆಗಳಿಗೆ ಹೇಳಿಕೆ ನೀಡಿದರು. ಆದರೆ ಮತ್ತಾರೂ ಆ ರೀತಿ ಮುಂದೆ ಬಂದಿಲ್ಲದಿದ್ದರು, ನೀಡಲಾಗಿರುವ ಪರವಾನಗಿಗಳಲ್ಲಿ ಅತಿಹೆಚ್ಚು ಬಿಜೆಪಿ ಮುಖಂಡರಿಗೆ, ಅವರ ಶಿಫಾರಸ್ಸಿನ ಮೇಲೆ ಅವರ ನಿಕಟವರ್ತಿಗಳಿಗೆ, ಸಂಬಂಧಿಕರಿಗೆ ನೀಡಲಾಗಿರುವವು ಎಂಬುದಂತೂ ಸ್ಪಷ್ಟವಾಗಿ ಬಹಿರಂಗಗೊಂಡಿವೆ.

ಪ್ರಧಾನಿಗಳು ಅವನ್ನು ರದ್ದುಮಾಡಿದ ಮೇಲೆ, ಸರ್ಕಾರದ ಕ್ರಮದಲ್ಲಿ ಲೋಪ, ಸ್ವಜನಪಕ್ಷಪಾತ ನಡೆದಿದೆ ಎಂದ ಮೇಲೆ, ಇಡೀ ಪ್ರಕರಣ ಕುರಿತು ತನಿಖೆ ನಡೆಸಿ, ಹಾಗೂ ಇಂಧನ ಖಾತೆ ಸಚಿವರಾದ ರಾಮನಾಯಕ್ ರಾಜಿನಾಮೆ ನೀಡಲಿ ಎಂದು ವಿರೋಧ ಪಕ್ಷಗಳ ಒತ್ತಾಯಕ್ಕೆ ನಕಾರಾತ್ಮಕವಾಗಿ ಸ್ಪಂಧಿಸಬೇಕಿದ್ದ ಸರ್ಕಾರ, 1983ರಿಂದಲೂ ಡಿ.ಎಸ್.ಬಿ (ಡೀಲರ್ ಸೆಲಕ್ಷನ್ ಬೋರ್ಡ್) ರಚಿಸಿದಾಗಿನಿಂದ ಇದೇ ರೀತಿ ನಡೆದಿದೆ, ಇದೇನು ಹೊಸದಲ್ಲ, ವಿರೋದ ಪಕ್ಷದವರಿಗೂ ಈ ಪರವಾನಗಿ ನೀಡಲಾಗಿದೆ ಎಂಬ ಭಂಡ ವಾದ ಮಂಡಿಸಿ ಸಂಸದರು ಸಚಿವರಿಗೆ ಬರೆದ ಪತ್ರಗಳನ್ನು ಬಿಜೆಪಿ ಸಂಸದರು ಸದನದಲ್ಲಿ ಪ್ರದರ್ಶಿಸುತ್ತಾ, 1983ರಿಂದ ನೀಡಲಾದ ಎಲ್ಲಾ ಪರವಾನಗಿಗಳನ್ನು ರದ್ದು ಮಾಡಬೇಕೆಂದು ಎನ್.ಡಿ.ಎನ 100 ಸಂಸದರು ಪ್ರಧಾನಿಗಳಿಗೆ ಮನವಿ ಮಾಡಿದ್ದಾರೆ. ಹೇಗಿದೆ ನೋಡಿ ಇತರೆ ಸರ್ಕಾರಗಳಿಗಿಂತ ಭಿನ್ನವಾದ, ಭ್ರಷ್ಟಾಚಾರ ರಹಿತ ಆಡಳಿತ - 'ಅವರು ಹೇಸಿಗೆ.....! ಹಾಗಾಗಿ ನಾವು ತಿಂದೆವು' ಎಂಬ ವಾದ! ಈ ವಿಷಯದ ಮೇಲೆಯೇ ಅಗಸ್ಟ್ 5ರಿಂದ ಸದನ ನಡೆದಿಲ್ಲ. ಇದೇ ವಿಷಯದ ಮೇಲೆ ರಾಜ್ಯ ಶಾಸನ ಸಭೆಯು ನಡೆದಿಲ್ಲ. ಹಿಂದೆಲ್ಲಾ ಕಾಂಗ್ರೆಸಿಗರು ಪಡೆದಿರುವ ಪಟ್ಟಿಯನ್ನು ಬಿಜೆಪಿಯವರು ತೋರಿಸಿ ಸಮರ್ಥಿಸಿಕೊಳ್ಳಲು ಯತ್ನಿಸುತ್ತಿರುವುದು ನಾಚಿಕೆಗೇಡು.



ಭಂಡ ಸಮರ್ಥನೆ : ಹಗರಣದಲ್ಲಿ ರಾಮನಾಯಕ ಹಾಗೂ ಪ್ರಧಾನಿ

ಪ್ರಧಾನಿ ವಜಾ ಮಾಡಿರುವ ಕ್ರಮ ಸರಿ ಎನ್ನುವ ಇಂಧನ ಸಚಿವರಾದ ರಾಮ ನಾಯಕ್, ಪರವಾನಗಿ ನೀಡುವುದರಲ್ಲಿ ಯಾವುದೇ ಅಕ್ರಮ ನಡೆದಿಲ್ಲ, ಎಲ್ಲಾ ನಡೆದಿರುವುದು ನಿವೃತ್ತ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿರುವ ಡಿ.ಎಸ್.ಬಿ ಮೂಲಕ, 1983ರಲ್ಲಿ ರೂಪಿಸಲಾದ ನಿಯಮಾವಳಿಗಳ ಅನುಸಾರ ಎಂದು ವಾದ ಮಂಡಿಸುತ್ತಾರೆ. ಹಾಗೂ ಎಲ್ಲಾ ಪಕ್ಷಗಳ ಮುಖಂಡರೂ ಶಿಫಾರಸ್ಸು ಮಾಡಿದ್ದಾರೆ, ಅವರಿಗೂ ಪರವಾನಗಿ ನೀಡಲಾಗಿದೆ, ಎನ್ನುತ್ತಾ, ರಾಜೀನಾಮೆ ನೀಡುವ ಅವಶ್ಯಕತೆ ಇಲ್ಲ ಎನ್ನುತ್ತಾರೆ..ಗುಜರಾತ್ ಹಾಗೂ ಔರಂಗಾಬಾದ್ ಉಚ್ಚನ್ಯಾಯಾಲಯಗಳು ಈ ಕ್ರಮಗಳನ್ನು ಎತ್ತಿಹಿಡಿದಿದ್ದಾರೆ ಎಂದು ತಾವು ಸಾಚಾಗಳು ಎಂದು ಹೇಳುತ್ತಾ ಹೊರಟಿದ್ದಾರೆ. ಏಕೆ ಕಳೆದ ಕೆಲವೇ ದಿನಗಳಲ್ಲಿ ಡಿ.ಎಸ್.ಬಿಯ ಅಧ್ಯಕ್ಷತೆ ವಹಿಸಿದ್ದ 19 ಜನ ನಿವೃತ್ತ ನ್ಯಾಯಾದೀಶರನ್ನು ಬದಲಿಸಿದಿರಿ ಎಂಬ ಪ್ರಶ್ನೆಗೆ, ಅದು ಅಗತ್ಯವಿತ್ತು ಆದ ಕಾರಣ ಎಂದು ಹೇಳಿ ಜಾರಿಕೊಳ್ಳುತ್ತಿದ್ದಾರೆ. ಬಿಜೆಪಿಯ ಕೆಲವು ಸಚಿವರು ಪೆಟ್ರೋಲ್ ಬಂಕ್‌ಗಳನ್ನು ಬಿಜೆಪಿಯ ಸಂಸದರಿಗೆ ಅಥವಾ ಅವರ ಪಕ್ಷದ ಕಾರ್ಯಕರ್ತರಿಗೆ ನೀಡಿರುವುದು ನ್ಯಾಯಸಮ್ಮತವಾಗಿದೆ, ಅದೇನು ಅಪರಾಧವಲ್ಲ, ಪರವಾನಗಿ ಪಡೆದಿರುವವರು ಪಾಕಿಸ್ತಾನದವರೋ ಅಥವಾ ಐ.ಎಸ್.ಐ ಏಜೆಂಟರಲ್ಲವಲ್ಲ ಎಂಬ ವಾದವನ್ನು ಸಂಸತ್ತಿನ ಮೊಗಸಾಲೆಯಲ್ಲಿ ಮಂಡಿಸುತ್ತಿದ್ದಾರಂತೆ. ಇಡೀ ಈ ಹಗರಣದಲ್ಲಿ 2500 ಕೋಟಿ ರೂಪಾಯಿಗಳ ಭ್ರಷ್ಟಾಚಾರ ನಡೆದಿದೆ ಎಂಬ ಅನುಮಾನವು ವ್ಯಕ್ತವಾಗಿದೆ. ರಾಮನಾಯಕ್ ರಾಜಿನಾಮೆಗೆ ಅಥವಾ ಸಮಗ್ರ ತನಿಖೆಗೆ ಒಪ್ಪದ ಸರ್ಕಾರದಿಂದ ಏನನ್ನು ನಿರೀಕ್ಷಿಸಲಾಗದೆ ತಪ್ಪು ಹಾಗೂ ಅಕ್ರಮವನ್ನು ಭ್ರಷ್ಟಾಚಾರ ಹಾಗೂ ಸ್ವಜನಪಕ್ಷಪಾತಕ್ಕಾಗಿ ಎಸಗಲಾಗಿದೆಯೆಂದು ಇಡೀ ಪರವಾನಗಿಯನ್ನು ರದ್ದು ಮಾಡಿರುವ ಪ್ರಧಾನಿಗಳೇ ನೈತಿಕ ಹೊಣೆ ಹೊತ್ತು ರಾಜಿನಾಮೆ ನೀಡಬೇಕೆಂದು ವಿರೋಧ ಪಕ್ಷಗಳು ಪಟ್ಟು ಹಿಡಿದು ಅಚಲವಾಗಿ ನಿಂತಿವೆ.

ಪ್ರಧಾನಿ ನಿವಾಸಿಗೂ

ಮೊದಲ ಸರ್ಕಾರದ ಆದೇಶದ ಪ್ರಕಾರ ರದ್ದಾದ ಪರವಾನಗಿಗಳು ಒಟ್ಟು 3158, (1134 ಪೆಟ್ರೋಲ್ ಬಂಕ್ ಪರವಾನಗಿ, 1788 ಅಡುಗೆ ಅನಿಲ(ಎಲ್‌ಪಿಜಿ) ಮಾರಾಟ ಪರವಾನಗಿ, 236 ಸೀಮೆ ಎಣ್ಣೆ ಮಾರಾಟ ಪರವಾನಗಿ). ಆದರೆ ಆಗಸ್ಟ್ 9 ರ ಪ್ರಕಟಣೆಯಂತೆ ಇದು 3718 ಆಗಿದೆ.ಆದರೆ ವಾಸ್ತವದಲ್ಲಿ ಜನವರಿ 2000 ದ ನಂತರ ನೀಡಲಾಗಿರುವ ಒಟ್ಟು ಪರವಾನಗಿಗಳು 3850. ಆರೋಪ-ಪ್ರತ್ಯಾರೋಪ ಪಟ್ಟಿಗಳಲ್ಲಿ ಬಿಜೆಪಿ, ಕಾಂಗ್ರೆಸ್ ಇತರೆ ಪಕ್ಷಗಳ ಬಹಳಷ್ಟು ಮಂದಿಯ ಹೆಸರುಗಳು ಇವೆ. ಆದರೆ ಬಹಳಷ್ಟು ಬಿಜೆಪಿ-ಆರ್‌ಎಸ್‌ಎಸ್‌ನವರದು. **ಒಬ್ಬರಂತೂ ಪ್ರಧಾನಿಗಳ ಲಕ್ನೌನ ಅಧಿಕೃತ ನಿವಾಸದ ವಾಸಿಗಳು!**

ಹಗರಣಗಳ ಸರಮಾಲೆ ಭ್ರಷ್ಟಾಚಾರವೇ ಆಡಳಿತ

ಒಮ್ಮೆ ತಪ್ಪನ್ನು ಒಪ್ಪಿಕೊಂಡ ಮೇಲೆ ಶಿಕ್ಷೆ

ಎಡಪಕ್ಷಗಳ ಸ್ಪಷ್ಟನೆ

ಬಿ.ಜೆ.ಪಿ (ಹೊಸಹೆಸರು - ಪೆಟ್ರೋಲ್ ಪಂಪ್ ಪಾರ್ಟಿ) ಚುನಾವಣಾ ರಾಜಕೀಯದಲ್ಲಿ ಮುಳುಗುತ್ತಿರುವ ಹಡಗು. ತಾನು ಮುಳುಗುತ್ತಿರುವ ಸಂದರ್ಭದಲ್ಲಿ ಇತರರನ್ನು ಮುಳುಗಿಸುವ ಕುತಂತ್ರ ಅದರದ್ದು. ಅಂತೆಯೇ ಪೆಟ್ರೋಲ್ ಪಂಪ್ ಹಗರಣದಲ್ಲಿ ಇತರೆ ರಾಜಕೀಯ ಪಕ್ಷಗಳ ಸಂಸತ್ ಸದಸ್ಯರ ಹೆಸರನ್ನು ಸೇರಿಸಿದೆ.

ಕಾಂಗ್ರೆಸ್ಸಿನವರ ಬಗ್ಗೆ ಬಿಜೆಪಿಯ ಆರೋಪದಲ್ಲಿ ಸತ್ಯಾಂಶವಿರಬಹುದು. ಸ್ವಾತಂತ್ರ್ಯಾನಂತರದ 45 ವರ್ಷಗಳ ಕಾಂಗ್ರೆಸ್ ಸಂಸತಿಯನ್ನೇ ಬಿಜೆಪಿ ಕಳೆದ 4-5ವರ್ಷಗಳಲ್ಲಿ ಅನುಸರಿಸುತ್ತಿರುವುದು. ಕಾಂಗ್ರೆಸ್ಸಿನಲ್ಲಿದ್ದು ಹಗರಣಗಳಲ್ಲಿ ಸಿಲುಕಿಕೊಂಡವರು ಬಿಜೆಪಿಗೆ ಬಂದು ದೊಡ್ಡ ಮುಖಂಡರಾದುದು ಅಥವಾ ಬಿಜೆಪಿಯ ಮಿತ್ರಪಕ್ಷವಾಗಿ ಉಳಿದಿರುವುದು ಈಗ ಇತಿಹಾಸವೇನಲ್ಲ.

ಆದರೆ ಈ ಆರೋಪಗಳಲ್ಲಿ ಎಡಪಕ್ಷಗಳ ಸಂಸತ್ ಸದಸ್ಯರನ್ನು ಎಳೆದಿರುವುದು ಕುತಂತ್ರದ ಪರಮಾವಧಿ. ಸಿಪಿಐ(ಎಂ)ನ ಸಂಸತ್ ಸದಸ್ಯರಾದ ಬಸುದೇವ್ ಆಚಾರ್ಯ ಅವರು ಸ್ವಹಿತಕ್ಕಾಗಿ ಪೆಟ್ರೋಲ್ ಬಂಕ್‌ಗಳನ್ನು ಪಡೆಯಲು ಶಿಫಾರಸ್ಸು ನೀಡಿದ್ದಾ ರೆಂಬುದು ಯಾವುದೇ ಹುರುಳಿಲ್ಲದ್ದು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸಂಸತ್ ಸದಸ್ಯ ಬಸುದೇವ್ ಆಚಾರ್ಯ ಎರಡು ಪತ್ರಗಳನ್ನು ಪೆಟ್ರೋಲಿಯಂ ಸಚಿವರಿಗೆ ಬರೆದಿದ್ದರು.

1) ಅವರು ಪ್ರತಿನಿಧಿಸುವ ರಾಜ್ಯವಾದ ಪಶ್ಚಿಮಬಂಗಾಳದ ಮಾಲ್ಡಾದಲ್ಲಿ ಇಂಡಿಯನ್ ಆಯಿಲ್ ಕಂಪನಿಗೆ ಸೇರಿದ ಪೆಟ್ರೋಲ್ ಬಂಕ್ ಒಂದನ್ನು ಸ್ಥಳಾಂತರಿಸಬೇಕು ಎಂದು ಪ್ರಯತ್ನಿಸಿದಾಗ, ಅಲ್ಲಿನ ಜನ ವಿರೋಧಿಸಿದ್ದರು ಹಾಗೂ ಸಾಮೂಹಿಕವಾಗಿ ಸಹಿ ಮಾಡಿದ ಮನವಿಯೊಂದನ್ನು ಸಲ್ಲಿಸಿದ್ದರು. ಅದರ ಆಧಾರದಲ್ಲಿ ಸಂಸತ್ ಸದಸ್ಯ ಬಸುದೇವ್ ಆಚಾರ್ಯ ಪೆಟ್ರೋಲಿಯಂ ಸಚಿವರಿಗೆ ಪತ್ರ ಬರೆದು, ಪೆಟ್ರೋಲ್ ಬಂಕ್ ಸ್ಥಳಾಂತರಿಸಬಾರದೆಂದು ಕೇಳಿಕೊಂಡಿದ್ದರು.

2) ಮಾನಸಿಕ ರೋಗಿಗಳಿಗೆ ಶುಶ್ರೂಷೆ ನೀಡುವ ಮಾನಸಿಕ ಆರೋಗ್ಯ ಸಂಸ್ಥೆಯೊಂದು (Institute of Mental Health) ಗ್ಯಾಸ್ ಕನೆಕ್ಷನ್‌ಗಳನ್ನು ಹೊಂದಿದ್ದು, ಅದೊಂದು ಉಚಿತ ಸೇವಾ ಸಂಸ್ಥೆಯಾದುದರಿಂದ ಮುಂಗಡ ಹಣವನ್ನು ಪಡೆಯಬಾರದೆಂದು ಪೆಟ್ರೋಲಿಯಂ ಸಚಿವರಿಗೆ ಮನವಿ ಸಲ್ಲಿಸಿದ್ದರು.


ಅಂತೆಯೇ ಸಿಪಿಐನ ಸಂಸದ ಅಜಯ್ ಚಕ್ರವರ್ತಿಯವರು ಆಂಧ್ರದಲ್ಲಿ ಕರ್ತವ್ಯ ನಿರ್ವಹಿಸುವಲ್ಲಿ ಅಸುನೀಗಿದ ಸಿಆರ್‌ಪಿಎಫ್ ಪೇದೆಯ ಪತ್ನಿಗೆ ಪರಿಹಾರವಾಗಿ ಸಹಾಯ ಮಾಡಲು ಕೋರಿದ್ದರು.

ಇಷ್ಟಕ್ಕೂ ಸಚಿವರಿಗೆ ಬರೆದ ಪತ್ರ ಬಿಜೆಪಿ ಮುಖಂಡರ ಕೈಗೆ ಹೇಗೆ ಸಿಕ್ಕಿತು? ಅವಸರವಾಗಿ ಕದ್ದು ತೆಗೆದ ಪತ್ರವನ್ನು ಓದಲಿಕ್ಕೂ ಬಿಜೆಪಿ ಮುಖಂಡರಿಗೆ ಸಮಯವಿರಲಿಲ್ಲ.

ಗಲೇಬೇಕು, ಮತ್ತೆ ನ್ಯಾಯದ ದೃಷ್ಟಿಯಿಂದ ಜಾಸತ್ತೆಯಲ್ಲಿ ಶಿಕ್ಷೆ ಅನಿವಾರ್ಯ. ಆದರೆ ಲಿಕಾಂ ಹಗರಣದಿಂದ,ತೆಹಲ್ಕಾ ಹಗರಣ, ವಪೆಟ್ಟಿಗೆ ಹಗರಣದಂತಹ ಒಂದರಿಂದ ತ್ತೊಂದು, ಮಗದೊಂದು ಎಂಬಂತೆ ಒಂದರ ರ ಒಂದರಂತೆ ದೊಡ್ಡ ಹಗರಣಗಳನ್ನು ಮಾಡಿ, ಪ್ರತಿಯೊಂದು ಅಧಿವೇಶನದಲ್ಲೂ ಇವರ ಹಗರಣಗಳೇ(ಹೊಸ ಹೊಸ ಹಗರಣಗಳೇ) ಚರ್ಚೆಯ ವಿಷಯ ವಾಗಿರುವಾಗ, ಇದು ಪೆಟ್ರೋಲ್ ಬಂಕ್ ಹಗರಣ ಮತ್ತೊಂದು ಎಂದು ಬಿಜೆಪಿ ಹಾಗೂ ಂದ್ರ ಸರ್ಕಾರ ನಿಶ್ಚಿಂತವಾಗಿದ್ದಂತಿದೆ. ತೆಹಲ್ಕಾ ಗರಣದ ಬಗ್ಗೆ ತನಿಖೆ ನಡೆದಿರುವಾಗಲೇ ರ್ಜ್ ಫರ್ನಾಂಡೀಸ್ ರವರನ್ನು ಮತ್ತೆ ಸಚಿವ ಂಪುಟಕ್ಕೆ ಸೇರಿಸಿಕೊಂಡಿರುವ ನಾಚಿಕೆಗೇಡಿನ ರ್ಕಾರದಿಂದ ರಾಮನಾಯಕ್‌ರಿಂದ ರಾಜಿನಾಮೆ ಾಡಿಸುವುದು ದೊಡ್ಡ ವಿಷಯವೇ? ಹೇಗಿದ್ದರೂ ಭ್ರಷ್ಟಾಚಾರವೇ ಈ ಸರ್ಕಾರದ ಆಡಳಿತವಲ್ಲವೇ?'


RSS ವಕ್ತಾರ ಎಂ.ಜಿ.ವೈದ್ಯ

ಪುಟ 10 ಕ್ಕೆ



ಹರಾಜಿನ ಪ್ರಧಾನಿ


2000ದ ಜನವರಿಯಿಂದ ನೀಡಲಾಗಿರುವ ಏಜೆನ್ಸಿಗಳನ್ನು ರದ್ದುಮಾಡುವ ಆದೇಶ ನೀಡಿರುವ ಪ್ರಧಾನಿಗಳು 1983 ರಿಂದ ಡೀಲರ್ ಸೆಲೆಕ್ಷನ್ ಬೋರ್ಡ್(DSB) ಮೂಲಕ ನೀಡಲಾಗುತ್ತಿರುವ ಏಜೆನ್ಸಿಗಳ ನಿಯಮಾವಳಿಗಳಲ್ಲಿ ಭ್ರಷ್ಟಾಚಾರ ಹಾಗೂ ಸ್ವಜನಪಕ್ಷಪಾತಕ್ಕೆ ಅವಕಾಶವಿರುವ ಕಾರಣ ಇನ್ನು ಮುಂದೆ ಸ್ಪರ್ಧಾತ್ಮಕ ಪೈಪೋಟಿಯ ಹರಾಜಿನ ಮೂಲಕ ಪೆಟ್ರೋಲ್ ಬಂದ್, ಸೀಮೆಎಣ್ಣೆ ಹಾಗೂ ಅಡುಗೆ ಅನಿಲ ಏಜೆನ್ಸಿ ನೀಡಲಾಗುವುದು, ಅದಕ್ಕೆ ಬೇಕಾದ ಕಾನೂನು ರೂಪಿಸಲಾಗುದು ಎಂದಿದ್ದಾರೆ. ಅಂದರೆ ನಮ್ಮಲ್ಲಿ ಹಾಗೂ ಇತರೆಡೆ ಸಾರಾಯಿ ರಾಜು ಹಾಕುತ್ತಾರಲ್ಲಾ ಹಾಗೆ!

ಮಾಜಿ ಪ್ರಧಾನಿ ವಿ.ಪಿ.ಸಿಂಗ್ ಪ್ರಧಾನಿಯಾಗಿ ಕೆಂಪುಕೋಟೆಯಿಂದ ಸ್ವತಂತ್ರ ದಿನಾಚರಣೆ ಅಂಗವಾಗಿ ಮಾಡಿದ್ದ ಭಾಷಣದಲ್ಲಿ ಬಡವರು ಹಾಗೂ ಸಾಮಾನ್ಯರಿಗೆ ಉದ್ಯೋಗ ನೀಡುವ ಕ್ರಮವಾಗಿ ಪೆಟ್ರೋಲ್ ಬಂಕ್, ಸೀಮೆಎಣ್ಣೆ ಹಾಗೂ ಅಡುಗೆ ಅನಿಲ ವಿತರಣಾ ಏಜೆನ್ಸಿಗಳನ್ನು ಲೋಕಸೇವಾ ಆಯೋಗದ ಪರೀಕ್ಷೆಗಳ ಮೂಲಕ, ಬ್ಯಾಂಕ್ ಸಾಲ, ಸಬ್ಸಿಡಿ ಸೌಲಭ್ಯಗಳೊಂದಿಗೆ ನೀಡುವ ಪ್ರಸ್ತಾಪಗಳನ್ನು ಮಾಡಿದ್ದರೆ. ಆದರೆ ಇಂದಿನ ಪ್ರಧಾನಿ ಹರಾಜಿನ ಮಾತನ್ನಾಡುತ್ತಿದ್ದಾರೆ.

ಶ್ರೀಮಂತರಾದದ್ದು ಹೇಗೆ?

ಈ ಒಕ್ಕಣಿಕೆ ಓದಿದ ಕೂಡಲೇ ಈ ಲೇಖನ ಓದಬೇಕೆನಿಸುತ್ತದೆ. ಏಕೆಂದರೆ, ಬಂಡವಾಳ ಶಾಹಿ ಸಮಾಜದಲ್ಲಿ ಎಲ್ಲರೂ ತಾನು ಶ್ರೀಮಂತನಾಗಬೇಕೆಂದು ಬಯಸುತ್ತಾರೆ. ಕಮ್ಯುನಿಸ್ಟರು, ಪ್ರಗತಿಪರರು ಮಾತ್ರ ಇಡೀ ಸಮಾಜವನ್ನು ಶ್ರೀಮಂತಗೊಳಿಸುವುದು ಹೇಗೆ ಎಂದು ಚಿಂತಿಸುತ್ತಾರೆ. ಅದಕ್ಕಾಗಿ ದುಡಿಯುತ್ತಾರೆ. ಬರೀ ಆರ್ಥಿಕವಾಗಿ ಮಾತ್ರವಲ್ಲ, ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿಯೂ ಕೂಡಾ.

ಕಾರ್ಮಿಕರು ಉತ್ಪಾದಿಸುವ ಉತ್ಪಾದನೆಗಳನ್ನು ಮಾರಾಟ ಮಾಡಿ ಉಂಟಾಗುವ ಮಿಗುತಾಯ ಮೌಲ್ಯದ(Surplus value) ಶೇಖರಣೆಯಿಂದ ಬಂಡವಾಳಗಾರರು ಲಾಭ ಗಳಿಸುತ್ತಾರೆ. ನಿಜವಾಗಿಯೂ ಕಾರ್ಮಿಕರಿಗೆ ಸೇರಬೇಕಾದ ಈ ಪಾಲನ್ನು ಅವರಿಗೆ ನೀಡದೇ ಇರುವುದರಿಂದ ಬಂಡವಾಳಗಾರ ಶ್ರೀಮಂತನಾಗುತ್ತಾನೆ. ಇದು ಬಂಡವಾಳವಾದದ ನಿಯಮ.


ಮಲ್ಯ

ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಶ್ರೀಮಂತನಾಗಲು ಇನ್ನೂ ಹಲವಾರು ವಿಧಾನಗಳಿವೆ. ಮೇಲಿನ ಉದಾಹರಣೆಯಲ್ಲಿ ಕಾರ್ಮಿಕನನ್ನು ಶೋಷಿಸಿ ಬಂಡವಾಳಗಾರ ಶ್ರೀಮಂತನಾಗುವಂತೆ, ಸಮಾಜದ ಇನ್ನಿತರ ವಿಭಾಗಗಳನ್ನು ಶೋಷಿಸಿ, ಸಂಘ ಸಂಸ್ಥೆಗಳನ್ನು ಲೂಟಿ ಮಾಡಿ ಬಂಡವಾಳಶಾಹಿ ಶ್ರೀಮಂತನಾಗುತ್ತಾನೆ. ಉದಾಹರಣೆಗೆ ತನ್ನ ಕಂಪನಿಗೆಂದು ಬ್ಯಾಂಕುಗಳಲ್ಲಿ ಸಾಲ ಪಡೆದುಕೊಂಡ ಬಂಡವಾಳಗಾರ ಅದರಿಂದ ಸಾಕಷ್ಟು ಲಾಭ ಪಡೆದು ತನ್ನ ಸ್ವಂತ ಆಸ್ತಿಯನ್ನು ಹೆಚ್ಚಿಸಿಕೊಳ್ಳುತ್ತಾನೆ. ಸ್ವಲ್ಪ ಸಮಯದ ನಂತರ ಆರ್ಥಿಕ ಹಿನ್ನಡೆಯಿಂದ, ತನ್ನ ಆಡಳಿತ ದುರುಪಯೋಗದಿಂದ ಅಥವಾ ಬ್ಯಾಂಕಿನ ಹಣವನ್ನು 'ಲೂಟಿ' ಮಾಡುವ ಉದ್ದೇಶದಿಂದ ತನ್ನ ಕಂಪನಿಯನ್ನು ರೋಗಗ್ರಸ್ತ ಎಂದು ಘೋಷಿಸಿಕೊಳ್ಳುತ್ತಾನೆ. ಬ್ಯಾಂಕಿನ ಹಣವನ್ನು ವಾಪಸು ಮಾಡುವುದಿಲ್ಲ. ಲಾಭ ಬಂದಾಗ ತಾನೇ ಇಟ್ಟುಕೊಳ್ಳುವ ಬಂಡವಾಳಗಾರ ನಷ್ಟವಾದಾಗ (ಯಾವುದೇ ಕಾರಣಕ್ಕೂ) ಮಾತ್ರ ಅದನ್ನು ಬ್ಯಾಂಕಿನ ಮೇಲೆ ವರ್ಗಾಯಿಸುತ್ತಾನೆ. ಬ್ಯಾಂಕಿನಲ್ಲಿರುವ ಹಣ ಎಂದರೆ ಸಾರ್ವಜನಿಕರ ಹಣ. ತಾನು ಪಡೆದ ಸಾಲ ವಾಪಸು ನೀಡಲಿಲ್ಲ ಎಂದರೆ ಸಾರ್ವಜನಿಕರ ಹಣವನ್ನು ಬಂಡವಾಳಗಾರ ಲೂಟಿ ಮಾಡಿದ್ದಾನೆ ಎಂದೇ ಹೇಳಬೇಕಾಗುತ್ತದೆ.

ಬ್ಯಾಂಕುಗಳಿಂದ ಹಾಗೆ ಲೂಟಿ ಮಾಡಿದ ಒಟ್ಟು ಹಣ 1 ಲಕ್ಷ ಕೋಟಿ ರೂಪಾಯಿಗಳಿಗೂ ಜಾಸ್ತಿ. ದಿನನಿತ್ಯ ಒಂದೆರಡು ರೂಪಾಯಿಗೂ ತಡಕಾಡುವ ಭಾರತದ ಬಡ ಜನತೆಗೆ 1 ಲಕ್ಷ ಕೋಟಿ ರೂಪಾಯಿ ಎಷ್ಟಾಗುತ್ತದೆ ಎಂದು ಊಹಿಸುವುದೂ ಕಷ್ಟವಾಗಬಹುದು.

ಕರ್ನಾಟಕ ರಾಜ್ಯದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಸರಾಸರಿ ಆದಾಯ ತಿಂಗಳಿಗೆ 1000 ರೂಪಾಯಿ ಮಾತ್ರ. ಅತಿ ಶ್ರೀಮಂತನಿಂದ ಹಿಡಿದು ಅತಿ ಬಡ ವ್ಯಕ್ತಿಯ ಒಟ್ಟು ಆದಾಯವನ್ನು ಸರಾಸರಿಯಾಗಿ ನೋಡಿದರೆ ಸುಮಾರು 1 ಸಾವಿರ ರೂಪಾಯಿ ಆಗುತ್ತದೆ. ರಾಜ್ಯದಲ್ಲಿ ಸುಮಾರು 5 ಕೋಟಿ ಜನರಿದ್ದಾರೆ.

1 ಲಕ್ಷ ಕೋಟಿ ರೂ. ಎಂದರೆ, ಕರ್ನಾಟಕದ ಜನತೆಯ(ಶ್ರೀಮಂತರೂ, ಬಡವರೂ ಸೇರಿ) 2 ವರ್ಷಗಳ ಒಟ್ಟು ಆದಾಯಕ್ಕೆ ಸಮ.

ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ರಾಜ್ಯಸಭೆಗೆ ಆಯ್ಕೆಯಾದ ವಿಜಯಮಲ್ಯರವರು ಚುನಾವಣೆಯಲ್ಲಿ ಆರಿಸಿ ಬರಲು ಕೋಟಿಗಟ್ಟಲೆ ಹಣ ಖರ್ಚು ಮಾಡಿದ್ದಾರೆಂಬ ಆಪಾದನೆ ಇದೆ. ಆದರೆ ಅವರು ಅಧ್ಯಕ್ಷರಾಗಿರುವ ಮಂಗಳೂರು ಕೆಮಿಕಲ್ಸ್ ಮತ್ತು ಫರ್ಟಿಲೈಸರ್ ಕಂಪನಿಯು ಐಸಿಐಸಿಐ ಗೆ ನೀಡಬೇಕಾಗಿದ್ದ 4.89 ಕೋಟಿ ರೂ. ಆಗಲಿ, ಸಿಂಡಿಕೇಟ್ ಬ್ಯಾಂಕ್‌ಗೆ ನೀಡಬೇಕಾದ 7.38 ಕೋಟಿ ರೂಪಾಯಿಯನ್ನಾಗಲೀ ಇದುವರೆಗೆ ನೀಡಿಲ್ಲ. ಇವೆರಡು ಸಾಲಗಳನ್ನು ಮಾರ್ಚ್ 95 ಕ್ಕೂ ಮೊದಲೇ 'ಕೆಟ್ಟ ಸಾಲ' ಎಂದು ಪರಿಗಣಿಸಲಾಗಿದೆ.

ಇನ್ನೋರ್ವ ಲೋಕಸಭಾ ಸದಸ್ಯ, ಮೈಸೂರು ಮಹಾರಾಜ ಶ್ರೀಕಂಠದತ್ತ ಒಡೆಯರ್ ಪಾಲುದಾರರಾಗಿರುವ ಕರ್ಪೂರ ತಯಾರಿಸುವ ಕಂಪನಿಯೊಂದು ಮೈಸೂರಿನ ಸಿಂಡಿಕೇಟ್ ಬ್ಯಾಂಕಿಗೆ 1.28 ಕೋಟಿ ರೂ. ನೀಡಬೇಕಾಗಿದೆ. ಈ ಸಾಲ ಮಾರ್ಚ್ 92 ರಲ್ಲೇ ಕೆಟ್ಟ ಸಾಲವೆಂದು ತೀರ್ಮಾನಿಸಲಾಗಿತ್ತು. ಆದರೆ ಈವರೆಗೆ ಸಾಲವನ್ನು ವಾಪಸ್ಸು ಮಾಡಿಲ್ಲ.

ಕರ್ನಾಟಕ ರಾಜ್ಯದ ಅಬಕಾರಿ ಗುತ್ತಿಗೆದಾರರು ರಾಜ್ಯದ ರಾಜಕೀಯವನ್ನೇ ಅಲುಗಾಡಿಸುವಷ್ಟು ಶಕ್ತರು. ಅವರಲ್ಲಿ ಹಣವಿಲ್ಲ ಎಂದರೆ ನಂಬಲಿಕ್ಕಾಗುತ್ತದೆಯೇ? ಆದರೆ ಪ್ರಮುಖ ಅಬಕಾರಿ ಗುತ್ತಿಗೆದಾರ ಡಿ.ದಾಸಪ್ಪ ಪಾಲುದಾರರಾಗಿರುವ ರವಿಕುಮಾರ್ ಟ್ರೇಡರ್ಸ್, ಇಂಡಿಯನ್ ಬ್ಯಾಂಕಿಗೆ 7.61 ಕೋಟಿ ರೂಪಾಯಿಗಳನ್ನು, ವಿಜಯಾ ಬ್ಯಾಂಕಿಗೆ 6.5 ಕೋಟಿ ರೂಪಾಯಿಗಳನ್ನು ನೀಡಬೇಕಾಗಿದೆ. ಇವರ ಕುಟುಂಬಕ್ಕೆ ಸೇರಿದ ರಾಮು ಲಿಕ್ಕರ್ಸ್, ವಿಜಯಾಬ್ಯಾಂಕಿಗೆ 1.84 ಕೋಟಿ ರೂ. ನೀಡಬೇಕಾಗಿದೆ. ಈ ಮೂರು ಖಾತೆಗಳಿಂದ ಎರಡು ಬ್ಯಾಂಕುಗಳಿಗೆ ನೀಡಬೇಕಾದ ಒಟ್ಟು ಮೊತ್ತ 15.95 ಕೋಟಿ ರೂ. ಅವುಗಳಿಗೆ 1995-96 ರ ನಂತರ ಯಾವುದೇ ಬಡ್ಡಿ ಸೇರಿಸಲಾಗಿಲ್ಲ. ಇಲ್ಲವಾದಲ್ಲಿ ಈ ಮೊತ್ತ ಇನ್ನಷ್ಟು ಹೆಚ್ಚುತ್ತದೆ.


ಮುರುಡೇಶ್ವರ ಫುಡ್ ಮತ್ತು ಎಕ್ಸ್‌ಪೋರ್ಟ್ ಸಂಸ್ಥೆಯ ಪ್ರಮುಖ ಪಾಲುದಾರರಾದ ಆರ್.ಎನ್. ಶೆಟ್ಟಿಯವರು ಕರ್ನಾಟಕ ರಾಜ್ಯದ ಪ್ರಖ್ಯಾತ ಉದ್ದಿಮೆದಾರರು. ಇವರು ಹಾಗೂ ಇವರ ಕುಟುಂಬದವರ ಮಾಲಕತ್ವದಲ್ಲಿ ಹಲವಾರು ಸಂಸ್ಥೆಗಳಿವೆ. ಹುಬ್ಬಳ್ಳಿಯ ಮುರುಡೇಶ್ವರ ಸೆರಾಮಿಕ್ಸ್, ಹುಬ್ಬಳ್ಳಿ-ಧಾರವಾಡ ರಸ್ತೆಯಲ್ಲಿರುವ ಹೋಟೆಲ್ ನವೀನ್, ಉತ್ತರ ಕನ್ನಡ ಜಿಲ್ಲೆಯ ಮುರುಡೇಶ್ವರದಲ್ಲಿರುವ ಹಂಚಿನ ಕಾರ್ಖಾನೆ, ಬೆಂಗಳೂರು ಎಂ.ಜಿ.ರಸ್ತೆಯಲ್ಲಿರುವ ತಾಜ್‌ರೆಸಿಡೆನ್ಸಿ ಹೋಟೆಲ್‌ನ ಭವ್ಯ ಕಟ್ಟಡ, ಅದರ ಪಕ್ಕದಲ್ಲಿರುವ ನವೀನ್ ಕಾಂಪ್ಲೆಕ್ಸ್ ಕಟ್ಟಡ ಇವರಿಗೆ ಸೇರಿದ್ದು. ಆದರೆ ಜನವರಿ 97 ರಿಂದ ವಿಜಯಾ ಬ್ಯಾಂಕಿನಲ್ಲಿ 'ಕೆಟ್ಟಸಾಲ' ಎಂದು ಪರಿಗಣಿಸಿರುವ 6.45 ಕೋಟಿ ರೂಪಾಯಿಯನ್ನು ಇನ್ನೂ ವಾಪಸ್ಸು ನೀಡಲು ಸಾಧ್ಯವಾಗಿಲ್ಲ! ಈ ಸಾಲವನ್ನು ಮುರುಡೇಶ್ವರ ಫುಡ್ ಮತ್ತು ಎಕ್ಸ್‌ಪೋರ್ಟ್ ಲಿಮಿಟೆಡ್ ಹೆಸರಿನಲ್ಲಿ ಪಡೆಯಲಾಗಿತ್ತು.

ಕಿರ್ಲೋಸ್ಕರ್ ಕಂಪನಿಗಳಿಂದ 63.02 ಕೋಟಿ ರೂ. ಬಾಕಿ.

ಕಿರ್ಲೋಸ್ಕರ್ ಹೆಸರು ಕೈಗಾರಿಕೋದ್ಯಮದಲ್ಲಿ ಪ್ರಖ್ಯಾತವಾದುದು. ಶ್ಯಾಂ ಎಸ್.ಕಿರ್ಲೋಸ್ಕರ್, ಅತುಲ್ ಸಿ.ಕಿರ್ಲೋಸ್ಕರ್, ವಿಜಯ್ ಆರ್.ಕಿರ್ಲೋಸ್ಕರ್ ಪಾಲುದಾರರಾಗಿರುವ ಹರಿಹರದಲ್ಲಿರುವ ಮೈಸೂರು ಕಿರ್ಲೋಸ್ಕರ್ ಲಿಮಿಟೆಡ್, ಸಣ್ಣ ಕೈಗಾರಿಕಾ ಅಭಿವೃದ್ಧಿ ಬ್ಯಾಂಕಿಗೆ 1.08 ಕೋಟಿ ರೂ. ನೀಡಬೇಕಾಗಿರುವುದು ಮಾತ್ರವಲ್ಲದೆ, ಕಾರ್ಖಾನೆಯನ್ನು ತೆರೆಯದೆ ನೌಕರರನ್ನು ಬೀದಿಪಾಲು ಮಾಡಿದ್ದಾರೆ. 'ಕಾರ್ಖಾನೆಯನ್ನು ನಿಮಗೆ ನಡೆಸಲು ಸಾಧ್ಯವಾಗದಿದ್ದರೆ ನಮಗೆ ವಹಿಸಿ' ಎಂದು ಕಾರ್ಮಿಕರು ಗೋಗರೆದರೂ ಯಾವುದೇ ಕಾಳಜಿ ವಹಿಸುತ್ತಿಲ್ಲ. ಇವರ ಕುಟುಂಬದವರೇ ನಡೆಸುತ್ತಿದ್ದ ಕಿರ್ಲೋಸ್ಕರ್ ಇನ್‌ವೆಸ್ಟ್‌ಮೆಂಟ್ ಅಂಡ್ ಫೈನಾನ್ಸ್ ಲಿಮಿಟೆಡ್ ವಿವಿಧ ಬ್ಯಾಂಕುಗಳಿಗೆ 21.50 ಕೋಟಿ ರೂಪಾಯಿ ನೀಡಬೇಕಾಗಿದೆ. ಈ ಕಂಪನಿಯು ಸಂಗ್ರಹಿಸಿದ ಠೇವಣಿಯನ್ನು ಸಕಾಲದಲ್ಲಿ ವಾಪಸು ಮಾಡಿಲ್ಲವೆಂದು ಠೇವಣಿದಾರರು ಚಳುವಳಿ ನಡೆಸಿದುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕು.

ಶ್ಯಾಂ ಎಸ್.ಕಿರ್ಲೋಸ್ಕರ್ ಅವರು ಪಾಲುದಾರರಾಗಿರುವ ಪವರ್ ಪ್ಲೋ ಲಿಮಿಟೆಡ್ ಕಂಪನಿಯು ಕೆನರಾ ಬ್ಯಾಂಕಿಗೆ 39.46 ಕೋಟಿ ರೂ. ನೀಡಬೇಕಾಗಿದ್ದು ಇನ್ನೆರಡು ಸಂಸ್ಥೆಗಳಿಗೆ 3.09 ಕೋಟಿ ರೂ. ನೀಡಬೇಕಾಗಿದೆ.

ಈ ಪಟ್ಟಿ ಬರೆಯುತ್ತಾ ಹೋದಂತೆ ಬೆಳೆಯುತ್ತಲೇ ಹೋಗುತ್ತದೆ. ಐಕ್ಯರಂಗದ 12 ಪುಟಗಳೂ ಸಾಕಾಗುವುದಿಲ್ಲ. ಬ್ಯಾಂಕು ನೌಕರರ ಸಂಘಟನೆ ಕೆಪಿಬಿಎಫ್ 544 ಖಾತೆಗಳ ಹೆಸರುಗಳನ್ನು ಪ್ರಕಟಿಸಿದ್ದು ಒಟ್ಟು ಬಾಕಿ ಇರುವ ಸಾಲ 2792.86 ಕೋಟಿ ರೂಪಾಯಿಗಳು. ಈ 544 ಖಾತೆಗಳಲ್ಲಿ ಕೆಲವು ಕಂಪನಿಗಳು 8-10 ಖಾತೆಗಳನ್ನು ಹೊಂದಿವೆ. ಅಂದರೆ ಕೇವಲ 300-400 ರಷ್ಟು ಕುಟುಂಬಗಳು 2800 ಕೋಟಿ ರೂನಷ್ಟು ಸಾರ್ವಜನಿಕ ಹಣವನ್ನು ತಮ್ಮ ಕೈನಲ್ಲಿಟ್ಟುಕೊಂಡಿದೆ. ಈ ರಾಜ್ಯದ, ಜನತೆಯ ಬೆಳವಣಿಗೆಯಾಗದಂತೆ ತಡೆ ಒಡ್ಡಿವೆ. 5-10


ಶ್ರೀಕಂಠದತ್ತ ಒಡೆಯರ್

ಸಾವಿರ ರೂಪಾಯಿ ಸಾಲಕ್ಕೆ ರೈತನ ಮನೆಯನ್ನೇ ಜಪ್ತಿ ಮಾಡಿಸುವ ಬ್ಯಾಂಕುಗಳಿಗೆ, ಕೋಟಿಗಟ್ಟಲೆ ಸಾಲ ಬಾಕಿ ಇಟ್ಟುಕೊಂಡಿರುವ ಈ ಕುಳಗಳ ಮನೆ ಬಾಗಿಲಿಗೆ ಹೋಗಲು ಧೈರ್ಯ ಸಾಲದು. ಏಕೆಂದರೆ ಇವರಿಗೆ ಆಳುವ ಸರಕಾರಗಳ ಆಶೀರ್ವಾದ ಇದೆ. ಅದು ಕಾಂಗ್ರೆಸ್ ನೇತೃತ್ವದ ಸರಕಾರವೇ ಇರಬಹುದು ಅಥವಾ ಬಿಜೆಪಿಯದ್ದೇ ಆಗಿರಬಹುದು. ಅವರ ಬೆಂಬಲ ಈ ಕಂಪನಿಗಳ ಮಾಲಿಕರ ಮೇಲಿದೆ.

ಇಷ್ಟೊಂದು ದೊಡ್ಡ ಮೊತ್ತದ ಸಾಲ ವಸೂಲಿಗಾಗಿ ಜನಸಾಮಾನ್ಯರು, ನಾಗರಿಕರು ದೇಶದಾದ್ಯಂತ ಹೋರಾಟ ನಡೆಸಬೇಕಾಗಿದೆ. ಬ್ಯಾಂಕು ನೌಕರರ ಸಂಘಟನೆಗಳು ಮುಂಚೂಣಿಯ ಪಾತ್ರವಹಿಸಬೇಕು.

- ಬಾಲಕೃಷ್ಣ ಶೆಟ್ಟಿ

ಎರಡು ವರ್ಷಗಳ ಹಿಂದೆ ಹೆಚ್ಚುಕಡಿಮೆ ಎಲ್ಲಾ ಪಶ್ಚಿಮ ಯುರೋಪಿನ 15 ದೇಶಗಳಲ್ಲಿ ಸೋಸಲಿಸ್ಟ್ - ಸೋಶಿಯಲ್ ಡೆಮಾಕ್ರೆಟಿಕ್ ಪಕ್ಷಗಳು ಅಧಿಕಾರದಲ್ಲಿ ಇದ್ದವು. ಆ ಮೇಲೆ ನಡೆದ ಪ್ರತಿಯೊಂದು ಚುನಾವಣೆಯಲ್ಲಿ ಈ ಪಕ್ಷಗಳು ಪರಾಭವಹೊಂದಿವೆ. ಫ್ಯಾಸಿಸ್ಟ್ ಒಲವಿನ ತೀವ್ರಗಾಮಿ ಬಲಪಂಥೀಯ ಪಕ್ಷಗಳ ಬೆಂಬಲ ಹೆಚ್ಚೆಚ್ಚು ಸರ್ಕಾರದಲ್ಲಿ ಭಾಗಿಯಾಗಿವೆ. ಈ ಎಲ್ಲಾ ಪಕ್ಷಗಳು ವಲಸೆ ಮತ್ತು ಅಪರಾಧವನ್ನು ತಡೆಗಟ್ಟುವುದನ್ನು ಚುನಾವಣಾ ವಿಷಯವಾಗಿಸುವುದರಲ್ಲಿ ಸಫಲವಾಗಿವೆ. ಇದರ ಜತೆ ಯುರೋಪಿನಲ್ಲಿ ವಲಸೆಗಾರರ ಮುಸ್ಲಿಮರ ಮೇಲೆ ದಾಳಿ ಅಪರಾಧಗಳು ಹೆಚ್ಚುತ್ತಿವೆ. ಅದು ಜನಾಂಗದ್ವೇಷ ರೂಪ ಪಡೆಯುತ್ತಿವೆ. ಇಂತಹ ಹಲ್ಲೆಗಳಲ್ಲಿ ನವ-ನಾಜಿ ಫ್ಯಾಸಿಸ್ಟ್ ಗುಂಪುಗಳು ಹಿಂದೆಂದಿಗಿಂತಲೂ ಮುಕ್ತವಾಗಿ ತೊಡಗಿವೆ. ಇವೆಲ್ಲದರ ಅರ್ಥ ಏನು? ಯುರೋಪು 1920-30ರ ದಶಕದಂತೆ ಫ್ಯಾಸಿಸಂನತ್ತ ಜಾರುತ್ತಿದೆಯೇ? ಯುರೋಪಿನ ಇತ್ತೀಚಿನ ತಿಂಗಳುಗಳ ರಾಜಕೀಯ ಬೆಳವಣಿಗೆಗಳ ಮೇಲೊಂದು ನೋಟ.

ಯುರೋಪ್ ಫ್ಯಾಸಿಸಂನತ್ತ ಜಾರುತ್ತಿದೆಯೇ?

ಶರತ್ಚಂದ್ರ

ಯುರೋಪಿನಲ್ಲಿ ಒಂದು ಕಡೆ ಫ್ಯಾಸಿಸ್ಟ್ ಒಲವಿನ ತೀವ್ರಗಾಮೀ ಬಲಪಂಥೀಯ ಪಕ್ಷಗಳ ಮತಗಳಿಕೆ ಗಣನೀಯವಾಗಿ ಹೆಚ್ಚಿದ್ದು, ಅವು ಸಮ್ಮಿಶ್ರ ಸರಕಾರಗಳ ಭಾಗವಾಗಿ ಅಧಿಕಾರಕ್ಕೆ ಬಂದಿವೆ. ಈ ಬೆಳವಣಿಗೆ ಆರಂಭವಾಗಿದ್ದು ಎರಡು ವರ್ಷಗಳ ಹಿಂದೆ ಆಸ್ಟ್ರಿಯಾದಲ್ಲಿ ತೀವ್ರ ಬಲಪಂಥೀಯ ಫ್ರಿಡಮ್ ಪಾರ್ಟಿ ಶೇಕಡಾ 27 ರಷ್ಟು ಮತಗಳಿಸಿ ಸರ್ಕಾರದಲ್ಲಿ ಭಾಗವಹಿಸುವಂತಾದಾಗ ಈ ಪಕ್ಷದ ನಾಯಕ ಹೈಡರ್ ಎಂಬ ಕುಖ್ಯಾತ ವ್ಯಕ್ತಿ. ಈ ಬೆಳವಣಿಗೆಗೆ 'ಹೈಡರ್ ಬೆಳವಣಿಗೆ' ಎಂದು ಹೆಸರಾಗಿದೆ. (ವಿವರಗಳಿಗಾಗಿ ಬಾಕ್ಸ್ ನೋಡಿ) ಈ ಬೆಳವಣಿಗೆ ಆಮೇಲೆ ಇಟಲಿ, ಡೆನ್ಮಾರ್ಕ್ ಗ್ರೀಸ್, ಪೋರ್ಚುಗಲ್, ನೆದರ್ ಲ್ಯಾಂಡ್, ಪೋರ್ಚುಗೀಸ್, ನಾರ್ವೆ, ಫ್ರಾನ್ಸ್‌ಗಳಲ್ಲಿ ಪುನರಾವರ್ತಿತವಾಗಿದೆ. ಫ್ರಾನ್ಸ್‌ನಲ್ಲಿ ತೀವ್ರಗಾಮಿ ಬಲ ಪಂಥೀಯ ನಾಯಕ ಲೇಪೆನ್ ಮೊದಲನೇ ಸುತ್ತಿನ ಅಧ್ಯಕ್ಷೀಯ ಚುನಾವಣೆಯಲ್ಲಿ ಸೋಸಲಿಸ್ಟ್ ಅಭ್ಯರ್ಥಿ (ಆಗಿನ ಪ್ರಧಾನಿ) ಜೋಸ್ಪಿನ್ ಅವರನ್ನು ಮೂರನೇ ಸ್ಥಾನಕ್ಕೆ ತಳ್ಳಿ ಇಡೀ ಜಗತ್ತಿಗೆ 'ಶಾಕ್' ಕೊಟ್ಟಿದ್ದರು. ಕೊನೆಗೆ ಅಧ್ಯಕ್ಷರಾಗಿ ಆಯ್ಕೆಯಾಗದಿದ್ದರೂ, ಅವರ ಪಕ್ಷ ಪಾರ್ಲಿಮೆಂಟರಿ ಚುನಾವಣೆಯಲ್ಲಿ ಅಧಿಕಾರಕ್ಕೆ ಬರದಿದ್ದರೂ, ಒಟ್ಟಾರೆ ಎಡ- ಒಲವಿನ ಫ್ರಾನ್ಸ್‌ನಲ್ಲಿ ಅಭೂತಪೂರ್ವ ರಾಜಕೀಯ ಬೆಳವಣಿಗೆ ಎಂದು ಪರಿಗಣಿಸಲಾಯಿತು. ಇಡೀ ಯುರೋಪಿನಲ್ಲಿ ತೀವ್ರಗಾಮಿ ಬಲಪಂಥದ ಜನ ಬೆಂಬಲದಲ್ಲಿ ಹೆಚ್ಚಳ ಮತ್ತು ಮಧ್ಯವರ್ತಿ ಮತ್ತು ಮಧ್ಯ - ಎಡ ಶಕ್ತಿಗಳ ತೀವ್ರ ರಾಜಕೀಯ ಹಿನ್ನಡೆಗೆ ಪ್ರತೀಕವಾಯಿತು. ಇದೇ ವರ್ಷ ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಜರ್ಮನ್ ಚುನಾವಣೆಗಳಲ್ಲಿ ಈಗಿನ ಆಳುವ ಎಡ-ಮಧ್ಯವರ್ತಿ ಸಮ್ಮಿಶ್ರ ಸರ್ಕಾರಕ್ಕೆ ನೋವಾಗುತ್ತದೆ ಎಂದು ಸಮೀಕ್ಷಕರ ಅಭಿಪ್ರಾಯ.

ಜನಾಂಗದ್ವೇಷ - ಹಿಂಸಾಚಾರದ ಹೆಚ್ಚಳ.

ಇನ್ನೊಂದು ಕಡೆ ಜನಾಂಗದ್ವೇಷಿ - ಹಿಂಸಾಚಾರದ ಹೆಚ್ಚಳ. ಜರ್ಮನ್ ಪಟ್ಟಣ ರೋಸ್ಟೋಕ್‌ನಲ್ಲಿ ನಡೆದ ಭೀಕರ ಘಟನೆ ಇದಕ್ಕೆ ಉತ್ತಮ ಉದಾಹರಣೆ. ಬಲ್ಗೇರಿಯನ್ ಮತ್ತು ರೋಮಾನಿಯಿನ್ ನಿರಾಶ್ರಿತರು ತಂಗಿದ್ದ ಹಾಸ್ಟೆಲ್ ಮೇಲೆ ನವನಾಜಿ ಯುವಕರು ನಡೆಸಿದ ಪೆಟ್ರೋಲ್ ಬಾಂಬ್ ದಾಳಿ. ಮೊದಲ ದಿನದ ದಾಳಿ ನಂತರ ಜರ್ಮನ್ ವಿಶೇಷ ದಂಗೆ ನಿಗ್ರಹ ಪೋಲೀಸುದಳ ಇದ್ದ ಹಾಗೆ ಎರಡನೇ ರಾತ್ರಿ ಸಹ 'ಮೊಲೊಟೊವ ಕಾಕ್‌ಟೈಲ್' ದಾಳಿ ನಡೆಸಿದರು. ನವನಾಜಿಗಳು ಏಕಾ-ಏಕಿ ಮತ್ತು ಪೊಲೀಸು ರೇಡಿಯೋ ಬಳಸಿ ದಾಳಿಯ ಸಂಯೋಜನೆ ನಡೆಸಿದರು ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ಪೋಲೀಸರು ನಿಷ್ಕ್ರಿಯವಾಗಿದ್ದರು ಅಥವಾ ಈ ದಾಳಿಗೆ ಪೂರಕವಾಗಿ ಕೆಲಸ ಮಾಡಿದ್ದರು ಎಂಬ ಆಪಾದನೆಗಳು ಕೇಳಿ ಬಂದಿವೆ. ನವನಾಜಿಗಳಿಗೆ ಯಾವುದೇ ಪ್ರತಿರೋಧ ತೋರದ ಪೋಲೀಸರು, ನೂರಕ್ಕು ಹೆಚ್ಚು ನಾಜಿ ವಿರೋಧಿ ಸ್ವಯಂ ಸೇವಕರು ನವನಾಜಿಗಳ ದಾಳಿ ತಡೆಯಲು ಪ್ರತಿರೋಧ ಒಡ್ಡಿದಾಗ ಅವರ ಮೇಲೆ ಕ್ರೂರ ರೀತಿಯಲ್ಲಿ ದಾಳಿ ಮಾಡಿ ಓಡಿಸಿದರು. ಅಂದು ಹೆಚ್ಚು ಸ್ವಯಂ-ಸೇವಕರನ್ನು ಬಂಧಿಸಿದರು ಕೂಡ.

ಫ್ರಾನ್ಸ್‌ನಲ್ಲಿ ಇತ್ತೀಚಿಗೆ ಇನ್ನೊಂದು ಘಟನೆಯಲ್ಲಿ ವಲಸೆಗಾರರ ಹಾಸ್ಟೆಲ್ ಮೇಲೆ 300 ದಂಗೆ ನಿರೋಧಕ ವಿಶೇಷ ದಳ ದಾಳಿ ಮಾಡಿ, 168 ಜನರನ್ನು ಬಂಧಿಸಿ 19 ಜನರನ್ನು 24 ಗಂಟೆಗಳೊಳಗಾಗಿ ದೇಶದಿಂದ ಹೊರಕ್ಕೆ ಕಳಿಸಲಾಯಿತು. ಅರಬರ ಮೇಲೆ, ಮುಸ್ಲಿಮರ ಮೇಲೆ, ಮುಸ್ಲಿಮ್ ಪ್ರಾರ್ಥನಾ ಸ್ಥಳಗಳ ಮೇಲೆ ದಾಳಿ ದಿನೇ ದಿನೇ ಹೆಚ್ಚುತ್ತಿದೆ. ನವ ಫ್ಯಾಸಿಸ್ಟ್ ಗುಂಪುಗಳು, ವಲಸೆಗಾರ ವಿರೋಧಿ ಗ್ಯಾಂಗ್‌ಗಳು, ಪೋಲೀಸರು ಈ ದಾಳಿಯಲ್ಲಿ ತೊಡಗಿದ್ದಾರೆ. ಸೆಪ್ಟೆಂಬರ್ 11ರ ನಂತರವಂತೂ ಇದು ಇನ್ನೂ ಹೆಚ್ಚಾಗಿದೆ. ಇದು ಸ್ಪಷ್ಟ ವಲಸೆಗಾರ ವಿರೋಧಿ ಮುಸ್ಲಿಮ್ ವಿರೋಧಿ, ಜನಾಂಗ ದ್ವೇಷಿ ರೂಪ ತಾಳಿದೆ.

'ಯುರೋಪು ಒಕ್ಕೂಟ'ದ ಮೇಲೆ ಕೋಪ

ಜನಾಂಗದ್ವೇಷಿ ಹಿಂಸಾಚಾರ ಹೆಚ್ಚಿದ್ದು ಮತ್ತು ಬಲಪಂಥೀಯ ಸರ್ಕಾರಗಳು ಯುರೋಪಿನಾದ್ಯಂತ ಆಗಿರುವುದು ನಿಜ. ಇದರಿಂದ ಯೂರೋಪು ಫ್ಯಾಸಿಸಂ ನತ್ತ ಜಾರುತ್ತಿದೆ ಎನ್ನುವುದಾಗಲಿ ಅಥವಾ ತೀವ್ರಗಾಮಿ ಬಲಪಂಥೀಯರು ಭಾರಿ ಜನಬೆಂಬಲ ಗಳಿಸಿದ್ದಾರೆ ಎನ್ನುವುದಾಗಲಿ ಉತ್ಪ್ರೇಕ್ಷೆ. ಇವೆರಡೂ ಸೇರಿ ಆತಂಕಕಾರಿ ರಾಜಕೀಯ ಬೆಳವಣಿಗೆ ಎನ್ನುವುದೇನೋ ಸರಿಯಾದ್ದು.

ಇದಕ್ಕೆ ಕಾರಣ ಬಂಡವಾಳಶಾಹಿ ಮತ್ತು ಸಮಾಜವಾದದ ನಡುವಿನ, 'ಮೂರನೇ ಹಾದಿ'ಯೊಂದನ್ನು ಕಂಡುಕೊಂಡಿದ್ದೇವೆ ಎಂದ ಯುರೋಪಿನ ಸೋಶಲಿಸ್ಟ್ ಸೋಶಿಯಲ್ ಡೆಮೊಕ್ರಾಟಿಕ್ - ಲೇಬರ್ ಪಾರ್ಟಿಗಳ ಆಡಳಿತ ಮತ್ತು ರಾಜಕೀಯ ನೀತಿಯ ವಿರುದ್ಧ ಜನ ರೊಚ್ಚಿಗೆದ್ದದ್ದು. ಈ ಕೋಪವನ್ನು ಆಳುವ ವರ್ಗಗಳು ಮತ್ತು ಬಲಪಂಥೀಯ ಶಕ್ತಿಗಳು ವಿಚ್ಛಿದ್ರಕಾರಿ ಹಾದಿಯಲ್ಲಿ ಹರಿಯಬಿಟ್ಟಿರುವುದು ಈ ಬೆಳವಣಿಗೆಗೆ ಕಾರಣ.

ಆದರೆ ನಿಜವಾದ ಕೋಪಕ್ಕೆ ಕಾರಣ 'ಜಾಗತೀಕರಣ'ಯುರೋಪಿನಲ್ಲಿ ತೆಗೆದುಕೊಂಡಿರುವ ರೂಪವಾದ 'ಯುರೋಪಿಯನ್ ಒಕ್ಕೂಟ' ರಚನೆ. ಯುರೋಪಿನ ಒಕ್ಕೂಟ'ದ ರಚನೆಯನ್ನು ಜನರ ವ್ಯಾಪಕ ವಿರೋಧದ ನಡುವೆ ಯುರೋಪಿನ



ಫ್ರಾನ್ಸ್‌ನಲ್ಲಿ ಲಿ ಪೆನ್ ವಿರುದ್ಧ ಪ್ರತಿಭಟನೆ

ಯೂರೋಪಿನಲ್ಲಿ 'ಹೈಡರ್ ಬೆಳವಣಿಗೆ'

(ತೀವ್ರಗಾಮಿ ಬಲಪಂಥೀಯ ಪಕ್ಷಗಳು ಜನಬೆಂಬಲ ಗಳಿಸುತ್ತಿರುವುದು)

ಆಸ್ಟ್ರಿಯಾ - ಜೋರ್ಗ್ ಹೈಡರ್ ಎಂಬುವನ ನಾಯಕತ್ವದ ಫ್ರೀಡ್‌ಮ್ ಪಾರ್ಟಿ 1999ರ ಚುನಾವಣೆಯಲ್ಲಿ ಶೇಕಡಾ 27 ಮತಗಳಿಸಿತು. ಹೈಡರ್‌ನ ಪಕ್ಷದ ಮತಗಳಿಕೆ ಹಿಂದಿನ ಶೇಕಡಾ 16ರಿಂದ ಭಾರಿ ಹೆಚ್ಚಳ ಸಾಧಿಸಿತು. ಚುನಾವಣೆಯಲ್ಲಿ ಹಿಂದೆ ಲೆಕ್ಕಕ್ಕೆ ಇಲ್ಲದಿದ್ದ ಪಕ್ಷ ಕನ್ಸರ್ವೇಟಿವ್ ಪಕ್ಷದೊಂದಿಗೆ ಅಧಿಕಾರವಹಿಸುವಂತಾಯಿತು. ಅಧಿಕಾರಕ್ಕೆ ಬಂದಮೇಲೆ ವಲಸೆಗಾರರ ಹಕ್ಕುಗಳನ್ನು ತೀವ್ರವಾಗಿ ಮೊಟಕುಗೊಳಿಸುವ ಹಲವು ಕಾನೂನುಗಳನ್ನು ಮಾಡಿದೆ.

ಇಟಲಿ: ಅಲೊಯೆನ್ಸ್ ನಾಶನಲ್ 2001ರ ಪಾರ್ಲಿಮೆಂಟರಿ ಚುನಾವಣೆಗಳಲ್ಲಿ ಶೇಕಡಾ 12 ಮತಗಳಿಸಿ ಬಲಂಥೀಯ ಸಮ್ಮಿಶ್ರ ಸರ್ಕಾರದ ಭಾಗವಾಗಿದೆ. ಇಲ್ಲಿ ಹಿಂದೆ ಅಧಿಕಾರದಲ್ಲಿದ್ದ ಸೋಶಲಿಸ್ಟ್ ಕಮ್ಯುನಿಸ್ಟ್ ಪಕ್ಷದ ಎರಡೂ ಬಣಗಳು ಇದ್ದ ಎಡ ಸಮ್ಮಿಶ್ರ ರಂಗ ಸೋತಿತು.


ಡೆನ್ಮಾರ್ಕ್ ; 1972ರಲ್ಲಿ ಎಲ್ಲಾ ಮುಸ್ಲಿಮರನ್ನು ದೇಶದಿಂದ ಹೊರಗೆ ಕಳಿಸಬೇಕು ಎಂದು ಒತ್ತಾಯಿಸಿದ್ದ ಪ್ರೋಗ್ರೆಸ್‌ಪಾರ್ಟಿ 175ರಲ್ಲಿ 22 ಸೀಟುಗಳಿಸಿ ಗಣನೀಯ ರಾಜಕೀಯ ಶಕ್ತಿಯಾಗಿ ಹೊಮ್ಮಿದೆ. ಈಗ ಸರ್ಕಾರದಲ್ಲಿದ್ದು - ನಿರಾಶ್ರಿತರ ಸ್ಥಾನ ಪಡೆಯಲು ಶರತ್ತುಗಳನ್ನು ಕಠಿಣಗೊಳಿಸಿ, ವಲಸೆಗಾರರಿಗೆ ಇದ್ದ ಆರ್ಥಿಕ ಸವಲತ್ತುಗಳನ್ನು ತೀವ್ರ ಕಡಿಮೆ ಮಾಡಿ, 7 ವರ್ಷದವರೆಗೆ ನಾಗರಿಕ ಪತ್ರ ಸಿಗದಂತೆ ಕಾನೂನು ಮಾಡಿದೆ.

ನೆದರ್‌ಲ್ಯಾಂಡ್ಸ್: ಪಿಮ್ ಫೋರ್ಚುನ್ ಎಂಬುವನು ಚುನಾವಣೆಯ ಮೂರು ತಿಂಗಳ ಹಿಂದೆ ಸ್ಥಾಪಿಸಿದ ಹೊಸ ಪಕ್ಷ ಈ ವರ್ಷದ ಮೇನಲ್ಲಿ ನಡೆದ ಪಾರ್ಲಿಮೆಂಟರಿ ಚುನಾವಣೆಯಲ್ಲಿ ಶೇಕಡಾ 20 ಮತಗಳಿಸಿ, 8 ವರ್ಷಗಳ ಕಾಲ ಸರ್ಕಾರ ನಡೆಸಿದ್ದ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿಯನ್ನು ಮೂರನೇ ಸ್ಥಾನಕ್ಕೆ ತಳ್ಳಿದೆ.

ಪೋರ್ಚುಗಲ್: ಪೊಪುಲರ್ ಪಾರ್ಟಿ ವಲಸೆಗಾರ - ವಿರೋಧಿ ಪ್ರಚಾರ ನಡೆದು 14 ಸೀಟುಗಳಿಸಿ ಸಮ್ಮಿಶ್ರ ಸರ್ಕಾರದಲ್ಲಿ ಭಾಗವಹಿಸಿದೆ. ಇಲ್ಲಿ ಪ್ರಬಲವಾಗಿದ್ದ ಪೋರ್ಚುಗೀಸ್ ಸೋಸಲಿಸ್ಟ್ ಪಾರ್ಟಿ ಸೋತಿದೆ.

ಫ್ರಾನ್ಸ್- ಲೆಪೆನ್‌ರ ನೇಶನಲ್ ಫ್ರಂಟ್ ಅಧ್ಯಕ್ಷೀಯ ಚುನಾವಣೆಯಲ್ಲಿ ಶೇಕಡಾ 18 ಮತಗಳಿಸಿತು. ಫ್ರಾನ್ಸ್‌ನ ವಿಶಿಷ್ಟ ಚುನಾವಣಾ ಪದ್ಧತಿಯಿಂದಾಗಿ ಅಧ್ಯಕ್ಷೀಯ ಚುನಾವಣೆ ಎರಡನೇ ಸುತ್ತಿಗೆ ಬಂದಿದೆ. ಪಾರ್ಲಿಮೆಂಟರಿ ಚುನಾವಣೆಗಳಲ್ಲಿ ಭಾರಿ ಯಶಸ್ಸು ಸಿಗಲಿಲ್ಲ. ಆದರೂ ಪ್ರಬಲ ತೀವ್ರ ಬಲಪಂಥಿಯ ಪಕ್ಷವಾಗಿ ಹೊಮ್ಮಿದೆ.

ಸ್ವಿಡ್ಜರ್‌ಲ್ಯಾಂಡ್: ಪೀಪಲ್ಸ್ ಪಾರ್ಟಿ 1995ರಲ್ಲಿ ಪಡೆದ ಶೇಕಡಾ 15 ಮತಗಳನ್ನು ಹೆಚ್ಚಿಸಿಕೊಂಡು 1999ರ ಚುನಾವಣೆಗಳಲ್ಲಿ ಶೇಕಡಾ 23 ಕ್ಕೇರಿಸಿಕೊಂಡಿದೆ.



ಜರ್ಮನ್‌ನ ನವ-ನಾಝಿ ಯುವಕರು

ಬಹುರಾಷ್ಟ್ರೀಯ ಕಂಪನಿಗಳು ಹಾಗೂ ಆಳುವ ವರ್ಗಗಳು ಹೊರಿಸಿದವು. 'ಯುರೋಪಿಯನ್ ಒಕ್ಕೂಟದ ದುಷ್ಪರಿಣಾಮಗಳು ದಿನೇ ದಿನೇ ಸ್ಪಷ್ಟವಾಗುತ್ತಿದ್ದಂತೆ ಅದರ ವಿರುದ್ಧ ರೋಷ ಹೆಚ್ಚುತ್ತಿದೆ. 'ಯುರೋಪಿನ ಒಕ್ಕೂಟ'ದ ರೂಪದಲ್ಲಿ ಸಾಮ್ರಾಜ್ಯಶಾಹಿ ಜಾಗತೀಕರಣದಿಂದ ಯುರೋಪಿನಲ್ಲಿ ಜನ, ಎರಡನೇ ಮಹಾಯುದ್ಧದ ನಂತರ ಗಳಿಸಿದ್ದ ಎಲ್ಲ ಸವಲತ್ತುಗಳನ್ನು ಕಳೆದುಕೊಳ್ಳಲಾರಂಭಿಸಿದ್ದಾರೆ. ಪೂರ್ವ ಯುರೋಪು ಮತ್ತು ಸೋವಿಯತ್ ಒಕ್ಕೂಟದಲ್ಲಿ ಸಮಾಜವಾದಿ ವ್ಯವಸ್ಥೆ ರೂಪುಗೊಂಡ ನಂತರ ಅದರ ಭಯದಿಂದ 'ಕ್ರಾಂತಿ'ಯನ್ನು ತಡೆಗಟ್ಟಲು ಪಶ್ಚಿಮ ಯುರೋಪಿನಲ್ಲಿ ವ್ಯಾಪಕವಾದ 'ಕಲ್ಯಾಣ ರಾಜ್ಯ' ಸ್ಥಾಪಿಲಾಗಿತ್ತು. ಇದರ ಭಾಗವಾಗಿದ್ದ ಸಾರ್ವಜನಿಕ ಕ್ಷೇತ್ರದಲ್ಲಿ ವ್ಯಾಪಕ ಸಾಮಾಜಿಕ ಸೇವೆಗಳು, ಉಚಿತ ಅಥವಾ ಕಡಿಮೆ ವೆಚ್ಚದಲ್ಲಿ ವೈದ್ಯಕೀಯ ಮುಂತಾದ ಸೇವೆಗಳು, ಉದ್ಯೋಗ ಭದ್ರತೆ, ನಿರುದ್ಯೋಗ ವೇತನ, ನಿವೃತ್ತಿ ಸೌಲಭ್ಯ - ಎಲ್ಲವನ್ನೂ ಈಗ 'ಸಮಾಜವಾದದ' ಅಪಾಯ ಇಲ್ಲವಾಗಿರುವುದರಿಂದ ಕಿತ್ತು ಹಾಕಲಾಗುತ್ತಿದೆ. ಈ ಸವಲತ್ತುಗಳ ಬಗ್ಗೆ ಇದ್ದ ರಾಷ್ಟ್ರೀಯ ಕಾನೂನುಬದ್ಧ ವ್ಯವಸ್ಥೆಯನ್ನು 'ಯುರೋಪಿಯನ್ ಒಕ್ಕೂಟ' ದ ಹೆಸರಲ್ಲಿ ಕಿತ್ತು ಹಾಕಲಾಗುತ್ತಿದೆ. ಪ್ರತಿಯೊಂದು ಆರ್ಥಿಕ-ರಾಜಕೀಯ- ಸಾಮಾಜಿಕ ನಿರ್ಧಾರದಲ್ಲಿ ಈಗ ಆ ದೇಶಗಳ ಸರ್ಕಾರಗಳಿಗೆ ಹೆಚ್ಚಿನ ಪಾತ್ರ ಇಲ್ಲ. ಬ್ರಸ್ಸೆಲ್ಸ್‌ನಲ್ಲಿ ಕುಳಿತ ನೇಮಕವಾದ ಅಧಿಕಾಶಾಹಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ.

ಕೋಪ 'ಜನಾಂಗ ದ್ವೇಷ' ದ ಹಾದಿ ಹಿಡಿದದ್ದು

ಯುರೋಪಿಯನ್ ಒಕ್ಕೂಟ ವನ್ನು ಬೆಂಬಲಿಸಿದ ಪಕ್ಷಗಳಲ್ಲಿ ಸೋಶಲಿಸ್ಟ್-ಸೋಶಿಯಲ್ ಡೆಮಾಕ್ರಟ್ - ಲೇಬರ್ ಪಕ್ಷಗಳು ಮತ್ತು ಮಧ್ಯವರ್ತಿ ಬಲ ಪಂಥೀಯ ಪಕ್ಷಗಳು ಮುಖ್ಯವಾಗಿ ಇದ್ದವು. ಯುರೋಪಿನ ಹೆಚ್ಚಿನ ದೇಶಗಳಲ್ಲಿ ಈ ಪಕ್ಷಗಳೇ ಆಳುವ ಪಕ್ಷಗಳು. ಒಂದು ಭಾರಿ ಎಡ-ಮಧ್ಯವರ್ತಿ ಪಕ್ಷಗಳ ರಂಗ ಬಂದರೆ, ಇನ್ನೊಂದು ಬಾರಿ ಬಲ-ಮಧ್ಯವರ್ತಿ ಪಕ್ಷಗಳ ರಂಗ. ಇಬ್ಬರ ನೀತಿಗಳಲ್ಲಿ ಏನೂ ವ್ಯತ್ಯಾಸವಿಲ್ಲ. ಇದರಿಂದಲೂ ಜನ ಬೇಸತ್ತು ಹೋಗಿದ್ದರು. ಇದರಿಂದಾಗಿ ಜನ ಮೂರನೇ ಪಕ್ಷಗಳತ್ತ ನೋಡುತ್ತಿದ್ದರು - ಬದಲಿಗೆ 'ಯುರೋಪಿಯನ್ ಒಕ್ಕೂಟ'ವನ್ನು ವಿರೋಧಿಸಿದ್ದು ಕಮ್ಯುನಿಸ್ಟ್ ಪಕ್ಷಗಳು ಮತ್ತು ತೀವ್ರ ಬಲಪಂಥೀಯ ಪಕ್ಷಗಳು ಮಾತ್ರ. ಆದರೆ ಕಮ್ಯುನಿಸ್ಟ್ ಪಕ್ಷಗಳು ಹಲವು ಕಡೆ (ಫ್ರಾನ್ಸ್,ಇಟಲಿಗಳಲ್ಲಿ ಮುಖ್ಯವಾಗಿ) ಎಡ-ಮಧ್ಯರಂಗ ಪಕ್ಷಗಳ ಸಮ್ಮಿಶ್ರ ರಂಗಕ್ಕೆ ಬೆಂಬಲ ಕೊಟ್ಟಿದ್ದರಿಂದ ಜನರ ಕೋಪ ಅವರ ಮೇಲೂ ತಟ್ಟಿದೆ.

ಈ ಪರಿಸ್ಥಿತಿಯ ಲಾಭವನ್ನು ಬಲಪಂಥೀಯ ಪಕ್ಷಗಳು ಪೂರ್ಣವಾಗಿ ಪಡೆದವು. 'ಯುರೋಪಿಯನ್ ಒಕ್ಕೂಟ'ದ ಬಗೆಗಿನ ಕೋಪವನ್ನು ಚೆನ್ನಾಗಿ ಬಳಸಿಕೊಂಡು, ಸಂಕುಚಿತ 'ದೇಶಪ್ರೇಮ'ವನ್ನು ಬಡಿದೆಬ್ಬಿಸಿದವು. ಜನ 'ಕಲ್ಯಾಣರಾಜ್ಯ'ದ ಭಾಗವಾಗಿ ಪಡೆಯುತ್ತಿದ್ದ ಸವಲತ್ತು ಉಳಿಸಿಕೊಳ್ಳುವ ವಿಷಯ ಎತ್ತುವ ಬದಲು, ವಿದೇಶಿಯರು - ವಲಸೆಗಾರರು ಎಲ್ಲಾ ಸಮಸ್ಯೆಗಳಿಗೆ ಮೂಲ ಎಂಬ ಪ್ರಚಾರ ಮಾಡಿ, ಜನಬೆಂಬಲ ಗಿಟ್ಟಿಸುವ ಪ್ರಯತ್ನ ನಡೆಸಿವೆ. ಆರ್ಥಿಕ ಬಿಕ್ಕಟ್ಟು ತೀವ್ರವಾದಂತೆ, ನಿರುದ್ಯೋಗ, ಅಭದ್ರತೆ ಜಾಸ್ತಿ ಆದಂತೆ ಇಂತಹ ಜನ-ಮರುಳು ಕಾರಣಗಳು ಜನರಿಗೆ ತಕ್ಷಣ ಒಗ್ಗುತ್ತದೆ. ಕಳೆದ ಸೆಪ್ಟೆಂಬರ್ 11 ರ ಭಯೋತ್ಪಾದಕ ಘಟನೆ, ಆಮೇಲೆ ಅಮೆರಿಕ ಮತ್ತು ಇತರ ಸಾಮ್ರಾಜ್ಯಶಾಹಿ ಶಕ್ತಿಗಳು ಹರಿಯಬಿಟ್ಟಿರುವ ಮುಸ್ಲಿಮ್ ವಿರೋಧಿ, ಅರಬ್ ವಿರೋಧಿ ಜನಾಂಗ ದ್ವೇಷ ಪ್ರಚಾರವನ್ನು ಈ ಶಕ್ತಿಗಳು ಚೆನ್ನಾಗಿ ಬಳಸಿವೆ. ಆದ್ದರಿಂದ ಈ ತೀವ್ರವಾದಿ ಬಲಪಂಥೀಯ ಶಕ್ತಿಗಳು ಜನಬೆಂಬಲ ಗಳಿಸಿ ಚುನಾವಣೆಯಲ್ಲಿ ತಾತ್ಕಾಲಿಕ ಯಶಸ್ಸು ಸಾಧಿಸಿವೆ.

ಆದರೆ ಇವುಗಳಲ್ಲಿ ಹೆಚ್ಚಿನವು ಫ್ಯಾಸಿಸ್ಟ್ ಪಕ್ಷಗಳಲ್ಲ. ಫ್ರಾನ್ಸ್,ಇಟಲಿ ಮತ್ತು ಆಸ್ಟ್ರಿಯಾದ (ಅನುಕ್ರಮವಾಗಿ ನೇಶನಲ್ ಫ್ರಂಟ್, ನ್ಯಾಶನಲ್ ಅಲಯನ್ಸ್, ಫ್ರೀಡಂ ಪಾರ್ಟಿ) ಪಕ್ಷಗಳನ್ನು ಸ್ಥಾಪಿಸಿದ್ದು ಎರಡನೇ ಮಹಾಯುದ್ಧ-ಪೂರ್ವದ ಫ್ಯಾಸಿಸ್ಟ್ ಪಕ್ಷಗಳಲ್ಲಿ ಹಿಂದೆ ಸಕ್ರಿಯರಾಗಿದ್ದವರು. ಹಿಂದಿನಿಂದಲೂ ವಲಸೆಗಾರ-ವಿರೋಧಿ, ವಿದೇಶಿ ವಿರೋಧಿ, ಜನಾಂಗದ್ವೇಷಿ ಗುಲ್ಲೆಬ್ಬಿಸುತ್ತಿದ್ದವು. ಇವರಲ್ಲಿ ಕೆಲವರಿಗೆ ನವ ಫ್ಯಾಸಿಸ್ಟ್ ಯುವಕರ ಗ್ಯಾಂಗ್‌ಗಳ ಜತೆ ಸಂಬಂಧವೂ ಇತ್ತು. ಹಲವು ಜನಾಂಗ ದ್ವೇಷಿ ಹಿಂಸಾಚಾರಗಳಲ್ಲಿ ಅವರ ಕೈವಾಡ ಇದೆ. ಆದರೆ ಅದು ಇನ್ನೂ ಸಂಘಟಿತ ಫ್ಯಾಸಿಸ್ಟ್ ಪಕ್ಷದ ರೂಪ ಪಡೆದಿಲ್ಲ. ಈಗಿನ ಸನ್ನಿವೇಶ ಬಳಸಿ ಅವು ಚುನಾವಣೆಯಲ್ಲಿ ಗಮನಾರ್ಹ ಜನಬೆಂಬಲ ಗಳಿಸುವಲ್ಲಿ ಯಶಸ್ವಿಯಾಗಿವೆ ಅಷ್ಟೇ. ಆದರೆ ಅವು ಸರ್ಕಾರಗಳಲ್ಲಿ ಈಗಾಗಲೇ ಪ್ರವೇಶಿಸಿವೆ. ನಿಜವಾದ ಸಮಸ್ಯೆಗಳಿಗೆ ಪರಿಹಾರ ಅವರ ಬಳಿ ಇಲ್ಲ. ಆಗ ಅವರು ಫ್ಯಾಸಿಸ್ಟ್ ತಂತ್ರಗಳನ್ನು ಬಳಸಿ ಫ್ಯಾಸಿಸ್ಟ್ ಪಕ್ಷ ಕಟ್ಟಲು ಮುಂದಾಗುವ ಅಪಾಯ ಇದೆ,



ನಾಝಿಗಳ ಪಥಸಂಚಲನ

ಅಧಿಕಾರವನ್ನು ಉಳಿಸಿಕೊಳ್ಳಲು.

'ಮೂರನೇ ಹಾದಿ'ಯ ವೈಫಲ್ಯ

ಈ ಆತಂಕಕಾರಿ ಸ್ಥಿತಿಗೆ ಯುರೋಪಿನ ಕಳೆದ ಹಲವು ದಶಕಗಳ ಹೆಚ್ಚಿನ ಭಾಗದಲ್ಲಿ ಅಧಿಕಾರದಲ್ಲಿದ್ದ ಪಕ್ಷಗಳು ಕಾರಣ. ಅದರಲ್ಲೂ ಸೋಶಲಿಸ್ಟ್-ಸೋಶಿಯಲ್ ಡೆಮಾಕ್ರೆಟಿಕ್ ಪಕ್ಷಗಳು ಜನರ ಮುಂದಿಟ್ಟ 'ಮೂರನೇ ಹಾದಿ'ಯ ವೈಫಲ್ಯವೂ ದೊಡ್ಡ ಕಾರಣ. ಬಂಡವಾಳಶಾಹಿ ಮತ್ತು ಸಮಾಜವಾದದ ನಡುವಿನ 'ಮೂರನೇ ಹಾದಿ' ಕಂಡುಕೊಂಡಿದ್ದೇವೆ ಎಂದ ಇವರು ಇದನ್ನು 'ಸಾಮ್ರಾಜ್ಯಶಾಹಿ ಜಾಗತೀಕರಣ' ರೂಪವಾದ 'ಯುರೋಪಿಯನ್ ಒಕ್ಕೂಟ'ಕ್ಕೆ ಬೆಂಬಲದ ನೀತಿಯನ್ನು ಸಮರ್ಥಿಸಿಕೊಳ್ಳಲು ಬಳಸಿಕೊಂಡರು. ಈ ನೀತಿಯ ಜತೆ ಹಿಂದೆ ಅವರು ಪ್ರತಿನಿಧಿಸುತ್ತಿದ್ದ ಕಾರ್ಮಿಕ ವರ್ಗದ ಆರ್ಥಿಕ-ಸಾಮಾಜಿಕ ಹಿತಾಸಕ್ತಿ ಕಾಪಾಡುವ, 'ಕಲ್ಯಾಣ ರಾಜ್ಯ'ದ ಸವಲತ್ತುಗಳನ್ನು ಉಳಿಸಿಕೊಳ್ಳುವ, ಸಾರ್ವಜನಿಕ ಕ್ಷೇತ್ರದಲ್ಲಿ ಪ್ರಮುಖ ಸೇವೆಗಳನ್ನು ಕಾಪಾಡಿಕೊಳ್ಳುವ ನೀತಿಯನ್ನು ಒಂದೊಂದಾಗಿ ಬಿಟ್ಟು ಕೊಟ್ಟರು. ಬಂಡವಾಳಶಾಹಿ ವ್ಯವಸ್ಥೆಯ ಹೊಸ ಅವತಾರವಾದ 'ಜಾಗತೀಕರಣ'ವನ್ನು ಮೂಲಭೂತವಾಗಿ ಪ್ರಶ್ನಿಸದೆ, ಅದಕ್ಕೆ ನಿಜವಾದ ಸಮಾಜವಾದಿ ಬದಲಿ ಕೊಡದೆ ಯುರೋಪಿನ ಸಮಸ್ಯೆ ಬಗೆಹರಿಯುವುದಿಲ್ಲ ಎಂದು ಗೊತ್ತಿದ್ದೂ, ಅದನ್ನು ಮಾಡದೆ ಬಿಟ್ಟಿದ್ದಾರೆ. ಇದಲ್ಲದೆ ಜನರ ಕೋಪ ಕಟ್ಟೆ ಒಡೆಯಲಾರಂಭಿಸಿದಾಗ ತೀವ್ರಗಾಮಿ ಬಲಪಂಥೀಯ ಶಕ್ತಿಗಳು ಆರಂಭಿಸಿದ ವಲಸೆಗಾರರ ಮೇಲೆ, ವಿದೇಶಿಯರ ಮೇಲೆ ಹರಿಹಾಯುವ ಸುಲಭ ಹಾದಿ ಹಿಡಿದಿದ್ದಾರೆ - ಅದರಲ್ಲೂ ಸರ್ಕಾರ ನಡೆಸುತ್ತಿರುವಾಗ ಅವರು ನಡೆದುಕೊಂಡ ರೀತಿ ಅವರಿಗೂ ಇತರ ಬಲ-ಮಧ್ಯವರ್ತಿ ಶಕ್ತಿಗಳಿಗೂ ಪಕ್ಷಗಳಿಗೂ ವ್ಯತ್ಯಾಸ ವಿಲ್ಲದಂತೆ ಮಾಡಿದೆ. ಯುಗೋಸ್ಲಾವಿಯಾ, ಅಫಘಾನಿಸ್ತಾನದ ಮೇಲೆ ಅಮೆರಿಕನ್ ಆಕ್ರಮಣವನ್ನು ಕಣ್ಣುಮುಚ್ಚಿ ಒಪ್ಪಿಕೊಂಡದ್ದು ಅವರು ಬೆಂಬಲ ಕಳೆದುಕೊಳ್ಳುವಂತೆ ಮಾಡಿದೆ. ಬಲಪಂಥೀಯರ ಜನಾಂಗ -ದ್ವೇಷಿ ಪ್ರಚಾರವನ್ನು ಸೈದ್ಧಾಂತಿಕವಾಗಿ-ರಾಜಕೀಯವಾಗಿ ಎದುರಿಸುವ ಧೈರ್ಯ ತೋರಿಲ್ಲ. ಆದ್ದರಿಂದ ಅವರ ಬೆಂಬಲಿಗರ ಒಂದು ವಿಭಾಗವೇ ತೀವ್ರಗಾಮಿ ಬಲಪಂಥೀಯ ಪಕ್ಷಗಳತ್ತ ವಾಲಿದ್ದು, 'ಮೂರನೇ ಹಾದಿ'ಯ ದುರಂತಕಾರಿ ನೀತಿ ಬಿಟ್ಟು ಈ ಶಕ್ತಿಗಳು ತಮ್ಮ ಹಿಂದಿನ ರಾಜಕೀಯ ನಿಲುವುಗಳಿಗೆ ಮರಳದಿದ್ದರೆ, ಜನಾಂಗ ದ್ವೇಷಿ ಬಲಪಂಥೀಯ ಪ್ರಚಾರಕ್ಕೆ ಸವಾಲು ಹಾಕದಿದ್ದರೆ ಯುರೋಪು ಫ್ಯಾಸಿಸ್ಟ್‌ನತ್ತ ಜಾರುವ ನಿಜವಾದ ಅಪಾಯ ಇದೆ. ಈ ಪರಾಭವ ಗಳಿಂದ ಅವು ಪಾಠ ಕಲಿಯುತ್ತವೆ ಎಂದು ಆಶಿಸೋಣ. ○

ಕರ್ನಾಟಕದಲ್ಲಿ ಕಳೆದ ವಾರ.....

ವಿಲೀನ : ಹೆಗಡೆ-ಯಾದವ್ ಆಟಗಳೇನು ?

ಜನತಾದಳದ ಉಭಯ ಬಣಗಳು ಒಂದುಗೂಡುವ ವಿಷಯವೇ ಸಧ್ಯ ಮತ್ತೆ ಚಾಲ್ತಿಯಲ್ಲಿದೆ. ಇಂತಹ ಪ್ರಯತ್ನ ಸಫಲವಾಗಲು ಸೂತ್ರ ರೂಪಿಸುವ ಹೊಣೆ ಹಿರಿಯ ನಾಯಕ ಎಸ್.ಆರ್. ಬೊಮ್ಮಾಯಿಯವರು ವಹಿಸಲಾಗಿದೆ, ಹಾಗಾಗಿ ಒಂದು ಸೂತ್ರ ರೂಪಿಸುವ ಯತ್ನ ಸಾಗಿವೆ.

ಬಿಜೆಪಿ ಮತ್ತು ಕಾಂಗ್ರೆಸ್‌ಗಳಿಗೆ ಪರ್ಯಾಯವಾಗಿ ಮೂರನೆಯ ಶಕ್ತಿಯಾಗಿ ರೂಪುಗೊಳ್ಳುವ ಪಾತ್ರ ವಹಿಸುವಲ್ಲಿ ಜನತಾದಳಕ್ಕೆ ಪ್ರಮುಖ ಪಾತ್ರ ಇದೆ. ಆದರೆ ಹೆಗಡೆವರು ಇದನ್ನು ತಿರಸ್ಕರಿಸುತ್ತಿದ್ದಾರೆ. ಈಗಲಂತೂ ಶರದ್ ಯಾದವ್ ಜೊತೆ ಸುತ್ತಿನ ಮೇಲೆ ಸುತ್ತಿನ ಮಾತುಕತೆ ನಡೆದ ಬಳಿಕವಂತೂ ಮೂರನೆ ಶಕ್ತಿ ಅಸಾಧ್ಯ, ಹಾಸ್ಯಾಸ್ಪದವೆಂದೇ ಕೂಗತೊಡಗಿದ್ದಾರೆ.

ಹೀಗಿದ್ದರೂ ಉಭಯ ಬಣಗಳಲ್ಲಿ ಕೆಳಹಂತದ ಕಾರ್ಯಕರ್ತರು, ಜನತೆಯಲ್ಲಿ ಒಂದುಗೂಡುವ ಪ್ರಬಲ ಇಚ್ಛೆ ಒತ್ತಡ ಇರುವುದೂ ಮುಖ್ಯ ಅಂಶ.

ಒಂದು ಪರ್ಯಾಯವಾದ ಮೂರನೇ ಶಕ್ತಿ ರೂಪುಗೊಳ್ಳದಂತೆ ನೋಡಿಕೊಳ್ಳುವ ದಿಕ್ಕಿನಲ್ಲಿ ಹೆಗಡೆಯವ ನಿಲುವು ಇದೆ ಎಂಬುದು ಸ್ಪಷ್ಟ. ಮೇಲಾಗಿ ಶರದ್ ಯಾದವ್ ಯಾಕಿಷ್ಟು ಬಾರಿ ಬಂದುಹೋಗುತ್ತಿದ್ದಾರೆ ಎಂಬುದು ನಿಗೂಢ. ರಾಜ್ಯ ಸಭೆ ಸದಸ್ಯರಾಗಿರುವ ಉದ್ಯಮಿ ವಿಜಯ ಮಲ್ಯರನ್ನು ಸಂಯುಕ್ತ ಜನತಾದಳದ ರಾಷ್ಟ್ರೀಯ ಉಪಾಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಮಲ್ಯರನ್ನು ಅನಿರೀಕ್ಷಿತವಾಗಿ ರಾಷ್ಟ್ರೀಯ ಉಪಾಧ್ಯಕ್ಷ ಸ್ಥಾನಕ್ಕೆ ನೇಮಿಸಿರುವ ಹೆಗಡೆಯವರ ಕ್ರಮದ ಬಗ್ಗೆ ಶಾಸಕರು ತೀವ್ರ ಅತೃಪ್ತಿ ವ್ಯಕ್ತಪಡಿಸಿದ್ದಾರೆ. ಜೆಡಿಯು ಕರ್ನಾಟಕದಲ್ಲಿ ಎನ್‌ಡಿಎ ಜತೆ ಸಂಪರ್ಕ ಕಡಿದುಕೊಂಡಿದ್ದು ಕೇಂದ್ರದಲ್ಲಿ ಸಂಬಂಧ ಮುಂದುವರಿಸುವ ಇರಾದೆ ಹೆಗಡೆಗಿದೆ. ಅಂದರೆ ಸಂ. ಜನತಾದಳ ಉಳಿಸಿಕೊಳ್ಳುವ ಯತ್ನ ಇದಾಗುವುದಲ್ಲವೇ? ಜನತಾದಳ ಮೂರನೇ ಶಕ್ತಿಯಾಗಿ ಹೊರಹೊಮ್ಮುವ ಸಾಧ್ಯತೆಗಳಿಗೆ ತಡೆಹಾಕುವುದು ಖಂಡನೀಯ.

ಸಮಾಜಘಾತುಕ ಆರ್‌ಎಸ್‌ಎಸ್: ಮುಖಾಮುಖಿಯಾಗದ ಸರ್ಕಾರ

ಸಮಾಜಘಾತುಕ ಶಕ್ತಿಗಳನ್ನು ಬಗ್ಗುಬಡಿಯುವ ಇಚ್ಛೆ ನಿಜವಾಗಿಯೂ ಕೃಷ್ಣರ ಸರ್ಕಾರಕ್ಕೆ ಇದೆಯೇ ಎಂಬ ಪ್ರಶ್ನೆ ಮತ್ತೆ ಎದುರಾಗುತ್ತಿದೆ. ಇತ್ತೀಚೆಗೆ ಗೃಹಇಲಾಖೆ ಸ್ವಾತಂತ್ರ್ಯ ದಿನಾಚರಣೆ ಹಿನ್ನೆಲೆಯಲ್ಲಿ ಸಮಾಜಘಾತುಕ ಶಕ್ತಿಗಳ ಬಗ್ಗೆ ನಿಗಾ ವಹಿಸಲು ಕೊಟ್ಟ ಸುತ್ತೋಲೆಯನ್ನು ಹಿಂತೆಗೆದುಕೊಂಡು ನಾಚಿಕೆಗೇಡಿನ ಪ್ರಸಂಗವನ್ನು ಸರ್ಕಾರವೇ ಸೃಷ್ಟಿಸಿದೆ.

ಸಮಾಜಘಾತುಕ ಸಂಸ್ಥೆಗಳೆಂದು ಎಲ್‌ಟಿಟಿಇ, ಜೆಕೆಎಲ್‌ಎಫ್, ನಕ್ಸಲೀಯರು ಮುಂತಾದವರ ಆರ್‌ಎಸ್‌ಎಸ್ ಹಾಗೂ ಡಿಎಸ್‌ಎಸ್‌ಗಳನ್ನು ಪಟ್ಟಿ ಮಾಡಿದ್ದಾರೆ. ಇದನ್ನೇ ಹಿಡಿದು ಚಡ್ಡಿಗಳು ವಿಧಾನಸಭೆಯ ಎರಡೂ ಸದನಗಳಲ್ಲಿ ಕೂಗಾಡುವ, 'ದೇಶಭಕ್ತಿ'ಯ ಪೋಜುಕೊಡುವ ಅವಕಾಶ ಗಿಟ್ಟಿಸಿದ್ದಾರೆ. ಆರ್‌ಎಸ್‌ಎಸ್ ಒಂದು ಬರ್ಬರ, ರಾಷ್ಟ್ರದ್ರೋಹಿ ಸಂಸ್ಥೆ ಎಂಬುದಕ್ಕೆ ಬೇಕಾದಷ್ಟು ಪುರಾವೆಗಳು, ಘಟನೆಗಳು ಜೀವಂತ ಇವೆ. ಪ್ರತಿಸಲದ ಸ್ವಾತಂತ್ರ್ಯೋತ್ಸವ, ಗಣರಾಜ್ಯೋತ್ಸವ ಸಂದರ್ಭದಲ್ಲಿ ಹುಬ್ಬಳ್ಳಿ-ಧಾರವಾಡಗಳಂತೆಡೆ ಈ ಚಡ್ಡಿ ವೀರರು ಸೃಷ್ಟಿಸಿದ ವಿಧ್ವಂಸಕ ಸನ್ನಿವೇಶಗಳು ತಿಳಿಯದ್ದೇನಲ್ಲ. ಆದರೆ ವಿಧಾನಸಭೆಯಲ್ಲಿ ಸುತ್ತೋಲೆಯನ್ನೇ ನೆಪವಾಗಿರಿಸಿಕೊಂಡು ಚಡ್ಡಿಗಳು ಬೊಗಳೆ ಭಾಷಣ ಮಾಡುವಾಗ ಅದರ ಬಾಯಿ ಮುಚ್ಚಿಸುವ, ಕರಾಳ ಅಧ್ಯಾಯವನ್ನು ಬಿಚ್ಚಿಡುವ ಯಾವ ಗಂಭೀರವಾದ ಪ್ರಯತ್ನಗಳು ಕಾಂಗ್ರೆಸ್‌ನಿಂದಾಗಲೀ ಇತರೆ ಪಕ್ಷಗಳಿಂದ ಅಷ್ಟಾಗಿ ಆಗದೇ ಇರುವುದು ಆತಂಕದ ವಿಚಾರ. ಹಾಗೆಯೇ ಪ್ರಜಾಸತ್ತಾತ್ಮಕ ಸಂಘಟನೆಯಾದ ಡಿಎಸ್‌ಎಸ್‌ನ್ನು ಈ ಪಟ್ಟಿಗೆ ಸೇರಿಸಿದ್ದು ಸರಿಯಲ್ಲ. ಇದು ಹಕ್ಕು ದಮನಿಸುವ ಕ್ರಮ. ವಿಧಾನಸಭೆಯಲ್ಲಿ ಚರ್ಚೆ ಆರ್‌ಎಸ್‌ಎಸ್ ಗೆ ಕೇಂದ್ರೀಕರಣಗೊಳ್ಳದೇ ವಿಷಯವನ್ನೇ ದುರ್ಬಲವಾಗುವಂತೆ ಮಾಡಲಾಗಿದೆ. ಆಕ್ಷೇಪ ಎತ್ತಿದಾಗಲಾದರೂ ಡಿಎಸ್‌ಎಸ್ ಹೆಸರು ಹಿಂತೆಗೆಯುವ ಆರ್‌ಎಸ್‌ಎಸ್ ನ್ನು ಉಳಿಸಿಕೊಳ್ಳುವ ದೃಢ ಪ್ರಕಟಣೆಯನ್ನು ಮಾಡಲಿಲ್ಲ. ನಂತರ ಕೃಷ್ಣರವರ ವ್ಯಾಖ್ಯಾನ, ಸ್ಪಷ್ಟನೆಗಳು ಈ ಸರ್ಕಾರ ಕೋಮುವಾದಿ, ಛಿದ್ರಕಾರಿಗಳನ್ನು ಮುಖಾಮುಖಿಯಾಗಿ ಎದುರಿಸುವ ರಾಜಕೀಯ ಎದೆಗಾರಿಕೆಯನ್ನು ತೋರಿಸದೇ ಅವರೊಂದಿಗೆ ರಾಜಿ ಮನೋಭಾವವನ್ನು ಮತ್ತೆ ಎತ್ತಿ ತೋರಿಸಿತು. ಹೊಸ ಸುತ್ತೋಲೆಯಲ್ಲಿ ಮತ್ತೇನಿರುತ್ತದೆ ಎಂದು ಕಾದು ನೋಡಬೇಕಿದೆ.

ಕಥೆ - 2 ಗಿರೀಶ್ ಕಾರ್ನಾಡ್



ತೃತೀಯ ದರ್ಜೆಯ ಹಿಂದಿ ಚಿತ್ರಗಳನ್ನು ನಿರ್ದೇಶಿಸುವ ರಿಝುವಿ ಎಂಬ ನಿರ್ದೇಶಕನೊಬ್ಬ ಕಾರಂತರ 'ಅಳಿದ ಮೇಲೆ' ಕತೆಯಿಂದ ಪ್ರಭಾವಿತನಾಗಿ ಅದನ್ನು ಟೆಲಿಫಿಲ್ಮ್ ಮಾಡ ಹೊರಟದ್ದು. ಮತ್ತು ಅದರಲ್ಲಿ ಕಾರಂತರ ಪಾತ್ರವನ್ನು ಕಾರ್ನಾಡರೇ ಮಾಡಬೇಕೆಂದು ದಂಬಾಲು ಬೀಳುವುದರ ಬಗ್ಗೆ ಹಿಂದಿನ ವಾರದಲ್ಲಿ ಓದಿದ್ದೀರಿ ಈ ಸಂಚಿಕೆಯಲ್ಲಿ ಕಥೆಯ ಬಗ್ಗೆ ಕಾರ್ನಾಡರೊಂದಿಗೆ ಚರ್ಚಿಸುತ್ತಾನೆ. ಆದರೆ ಕಾರಂತರ ಬೇಟಿಗೆ ಹೋಗುವವಾಗ ಅಫಘಾತವೊಂದರಲ್ಲಿ ಸಾವಿಗೀಡಾಗುತ್ತಾನೆ. ಆತನ ಮಗ ಯಾಕೂಬ್ ಗಿರೀಶ್‌ರಿಗೆ ಈ ಚಿತ್ರ ಮಾಡಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತಾನೆ. ಈ ಮಧ್ಯೆ ರಾಮಮಂದಿರದ ನಿರ್ಮಾಣದ ಸಲುವಾಗಿ ಅಯೋಧ್ಯೆಯ ಗದ್ದಲ ದೇಶದೆಲ್ಲೆಡೆ ವ್ಯಾಪಿಸುತ್ತದೆ...

ಅಳಿದ ಮೇಲೆ

'ಯಾವ ಸೀನಿಯರ್ ಹಿಂದೀ ತಾರೆ ತಲೆ ಬೋಳಿಸಿಕೊಂಡು ರೋಲ್ ಮಾಡತಾಳೇರೀ? ನಿಮ್ಮದ್ದೊಂದು!' ಎಂದು ಫೋನ್ ಕೆಳಗಿಟ್ಟ.

ಬ್ರಾಹ್ಮಣ ವಿಧವೆಯರು ಹೇಗಿರಬೇಕು ಎಂಬ ಪ್ರಶ್ನೆ ರಿಝುವಿಗೆ ಕೇವಲ ತಾರೆಯರ ಪೂರ್ವಗ್ರಹಗಳ ಪ್ರಶ್ನೆಯಾಗಿರಲಿಲ್ಲ. ಅದು ಅವನ ಟೆಲಿ ಫಿಲ್ಮಿನ ಜೀವಾಳವಾಗಿತ್ತು. ಏಕೆಂದರೆ ಕತೆಯ ಮಧ್ಯ ಬಿಂದುವನ್ನು ತಲುಪಿದೊಡನೆ ರಿಝುವಿ ಕಳ್ಳುಸುಬಿನಲ್ಲಿ ಸಿಲುಕಿದವನಂತೆ ಮುಂದೆ ಹೋಗಲಾರದೆ ಅಲ್ಲೇ ಅಲ್ಲೇ ಆಳಕ್ಕಿಳಿಯುತ್ತಿದ್ದ.

'ಎಂಥಾ ಅದ್ಭುತ ಸನ್ನಿವೇಶ! ಕಾರಂತರು ಆ ಹಳ್ಳಿಗೆ ಬರೋದು. ತನ್ನ ಮಿತ್ರರಾದ ಯಶವಂತ ರಾಯರ ಸಾಕುತಾಯಿಯನ್ನು ಕಾಣೋದು. ಆ ಹಣ್ಣು ಮುದುಕಿಯ ಆಸೆ ಪೂರೈಸಲಿಕ್ಕೆ ಗುಡಿಯ ಜೀರ್ಣೋದ್ಧಾರ ಮಾಡೋದು' ಆದರ ಪರಿಣಾಮವಾಗಿ ಒಂದೇ ಊರಿನಲ್ಲಿದ್ದರೂ ವೈರಿಗಳ ಹಾಗಿದ್ದ ಆ ಇಬ್ಬರು ಹಣ್ಣು ಮುದುಕಿಯರು ಒಂದಾಗೋದು- 'ಭೇ! ಭೇ! ಲಾಜವಾಬ್!'.

ರಿಝುವಿ ಗದ್ಗದನಾಗುತ್ತಾನೆ. ಇದನ್ನೇ ಅರ್ಧ ಡಝನ್ ಸಲ ಕೇಳಿ ದಣಿದ ನಾನೆಂದೆ;

'ಅಲ್ಲರೀ ರಿಝುವೀಜೀ. ನೀವು ಹೇಳತಿರೋದು ಕಾದಂಬರಿಯ ಪೂರ್ವಾರ್ಧ ಅಷ್ಟೆ! ಇನ್ನೂ ಬೇಕಾದಷ್ಟು ಪಾತ್ರಗಳಿವೆ. ಕತೆಯಿದೆ. ಅದರ ಮಾತೇ ಎತ್ತೊದಿಲ್ಲಲ್ಲ ನೀವು!-'

ರಿಝುವಿ ನನ್ನ ಕಡೆಗೊಮ್ಮೆ ನೋಡಿ, ತಲೆ ಕೊಡವಿ, 'ಅಬ್ದುಲ್-' ಎಂದು ಕರೆಯುತ್ತಾನೆ. ಕೂಡಲೆ ಪ್ರತ್ಯಕ್ಷವಾದ ಪ್ರೊಡಕ್ಷನ್ ಮ್ಯಾನೇಜರ್ ಕಿವಿಯಲ್ಲಿ ಏನೇನೋ ಉಸುರುತ್ತಾನೆ. ನಾನು, ಭೂಷಣ ಅಲ್ಲೆ ಇದ್ದೇವೆಂಬುದನ್ನು ಮರೆತಂತೆ ವರ್ತಿಸುತ್ತಾನೆ. ಆ ಮೇಲೆ ಭೂಷಣನತ್ತ ತಿರುಗಿ,

'ನಿಮಗೆ ಗೊತ್ತೇನು ಆ ಕತೆ? ಯಶವಂತ ರಾವ್ ಅನ್ನೋ ವ್ಯಕ್ತಿ ಎಲ್ಲೋ ಒಬ್ಬಂಟಿ ಬಾಳು ಬದುಕಿ ಆಪ್ತ ಮಿತ್ರರಿಲ್ಲದ ಸ್ಥಳದಲ್ಲಿ ಒಬ್ಬನೇ ಸಾಯತಾನೆ. ತನ್ನ ಆಸ್ತಿಯ ವಿಲೇವಾರಿ ಮಾಡು ಎಂದು ಕಾರಂತರಿಗೆ ಕೇಳಿಕೊಂಡಿರುತ್ತಾನೆ. ಕಾರಂತರು ಅವನ ನಿಕಟ ಮಿತ್ರರೇನಲ್ಲ- ಪರಿಚಯಸ್ಥರು. ಆದರೂ ಮನೆ ಬಿಟ್ಟು ಹೊರಟು, ಯಶವಂತ ರಾಯರ ಸಂಬಂಧಿಕರನ್ನು ಹುಡುಕತಾರೆ. ಹಳ್ಳಿಗೆ ಬಂದಾಗ ಅವರನ್ನು ಸಾಕಿದ ಮುದುಕಿ ಪಾರ್ವತಮ್ಮ-'

ಕಳ್ಳುಸುಬಿನತ್ತ ಮತ್ತೆ ಧಾವಿಸುತ್ತಿದ್ದ ರಿಝುವಿಯನ್ನು ತಡೆಯಲಿಕ್ಕೆಂದು ನಾನು ಸಜ್ಜಾಗುತ್ತಿದ್ದುದನ್ನು ಕಂಡು, ರಿಝುವಿ ತನ್ನ ಬ್ಯಾಗಿನಿಂದ ಒಂದು ಸ್ಕ್ರಿಪ್ಟ್ ತೆಗೆದು, ಭೂಷಣ್‌ನ ಎದುರಿಗೆ ಚಾಚುತ್ತಾನೆ.

'ಆ ಗ್ರಾಫ್ ನೋಡಿರಿ. ಆರಂಭದಲ್ಲಿ ಯಶವಂತರಾಯ ಸತ್ತಿದ್ದಾನೆ. ಏಕಾಕಿ. ಆಸುಪಾಸಿನಲ್ಲಿ ಯಾರೂ ಸಂಬಂಧಿಕರಿಲ್ಲ. ಆದರೆ ಕಾರಂತರ ಹೆಣಗಾಟದಿಂದ, ಆ ವಿಧವೆಯ ಸಮಾಧಾನಕ್ಕಾಗಿ, ಒಂದು ಮಂದಿರದ ಪುನರುಜ್ಜೀವನವಾಗತದೆ. ಉಳಿದ ಪಾತ್ರಗಳನ್ನು, ಸರಿ, ಎಲ್ಲಾದರೂ ಅಡ್ಜಸ್ಟ್ ಮಾಡೋಣಂತೆ. ಆದರೆ ಚಿತ್ರಪಟದ ಕೇಂದ್ರ ಸಂಕೇತ ಅದು, ಭೂಷಣ್. ಗುಡಿಯ ಪುನರುದ್ಧಾರ! ಮನುಷ್ಯನ ಸ್ಪಿರೀಚ್ಯುಯಲ್ ಜಾಗೃತಿಗೆ ಸಿಂಬಲ್'.

"ಎಲ್ಲೆಡೆ ಅಯೋಧ್ಯೆಯ ಗದ್ದಲ ಹಬ್ಬಿತ್ತು. ರಾಜಕೀಯ ಒಳಸುದ್ದಿಗಳ ಬಣ್ಣ ಬದಲಾವಣೆಗಳನ್ನೆಲ್ಲ ಬಲ್ಲ ಅನಂತನಾಗ್‌ಗೆ ಫೋನ್ ಮಾಡಿದೆ. ಆದರೆ ಅನಂತ ಹೇಳಿದ ಸುದ್ದಿಯೇ ಬೇರೆ ...."

ಆ ಮೇಲೆ ನನ್ನ ಮೇಲೆ ಎರಗಿದ.

'ನಮ್ಮ ಫಿಲ್ಮ್‌ನ ಕೊನೆಯ ದೃಶ್ಯ. ಇಮ್ಯಾಜಿನ್ ಮಾಡಿರಿ. ಮುರುಕಲು ಗುಡಿಯ ಪುನರುದ್ಧಾರ ನಡೆದಿದೆ. ಇಬ್ಬರು ಮುದುಕಿಯರು ಒಬ್ಬರನ್ನೊಬ್ಬರು ಅಪ್ಪಿಕೊಂಡು ಅಳುತ್ತಿದ್ದಾರೆ. ನೀವು- ಅಂದರೆ ಕಾರಂತರು - ಊರು ಬಿಟ್ಟು ಹೊರಟವರು ನಿಂತು ಹೊರಳಿ ನೋಡತೀರಿ. ನಿಮ್ಮ ಮಿತ್ರ ಯಶವಂತ ರಾವ್ ನಾಸ್ತಿಕ. ನೀವೂ ನಾಸ್ತಿಕರು. ಆದರೆ ನಿಮ್ಮ ಜೀವನದ ಕೃತಾರ್ಥತೆ ಇರೋದು ಆ ಮಂದಿರದ ಪುನರ್ಜನ್ಮದಲ್ಲಿ! ನಿಮ್ಮ ಕಣ್ಣಲ್ಲಿ ನೀರು! ಏನೆನಿಸತದೆ ಭೂಷಣ್‌ಜಿ? ಹೇಗಿದೆ ಕ್ಲೈಮ್ಯಾಕ್ಸ್?'

'ನಿಮಗೆ ನಿಜವಾಗಿಯೂ ನನ್ನ ಅಭಿಪ್ರಾಯ ಬೇಕಾಗಿದ್ದರೆ ಹೇಳತೇನೆ', ಭೂಷಣ ಯಾವ ನಟನಾದರೂ ಕೊಡುವ ಉತ್ತರವನ್ನೇ ಕೊಡುತ್ತಾನೆ. 'ನೀವು ಈ ಸಲನೂ ಎಂದಿನ ಹಾಗೆ ದುಡ್ಡು ಕೊಡದಿದ್ದರೂ ಅಡ್ಡಿಯಿಲ್ಲ. ಯಶವಂತ ರಾಯರ ಪಾತ್ರಕ್ಕೆ ಯೋಗ್ಯ ನಟ- ನಾನೇ!'

ರಿಝುವಿ ಜೋರಾಗಿ ನಕ್ಕ. ಅದೇ ಸಿಗ್ನಲ್ ಎಂಬಂತೆ ಸಹನಿರ್ದೇಶಕ ನೊಬ್ಬ ಬಂದು, 'ಲೈಟಿಂಗ್ ರೆಡಿ' ಎಂದ. ರಿಝುವಿ 'ಅಳಿದ ಮೇಲೆ'ಯ ಸ್ಕ್ರಿಪ್ಟನ್ನು ಬ್ಯಾಗಿಗೆ ಸೇರಿಸುತ್ತ, 'ಮೊದಲನೇ ಶಾಟ್ ನಿಮ್ಮದು, ಭೂಷಣ್‌ಜೀ' ಎನ್ನುತ್ತ ಅದೇ ಉಸಿರಿನಲ್ಲಿ ಆ ಸಹನಿರ್ದೇಶಕನೊಡನೆ ಮಾತನಾಡುತ್ತ ಹೊರಟು ಹೋದ.

'ಬಹಳ ಮಾತಾಡತಾನೆ' ಎಂದು ಗೊಣಗಿದ ಭೂಷಣ್. ನಾನು ಈತನ ಚಿತ್ರಪಟಗಳಲ್ಲಿ ಪಾರ್ಟು ಮಾಡಲಿಕ್ಕೆ ಕಾರಣ ಒಂದೇ: ಅವನ ಹೆಂಡತಿ ಮಾಡಿ ಕಳಿಸುವ ನಾನ್‌ವೆಜ್ ಪಲ್ಯ!'

ಮೇಕಪ್ ರೂಮಿಗೆ ಹೊರಟುಹೋದ.

ಇದಾದ ಹದಿನೈದು ದಿನಗಳಲ್ಲೇ ರಿಝುವಿ ತೀರಿಕೊಂಡ.

ನಾನು ಸಿಂಗಪುರಕ್ಕೆ ಚಿತ್ರೀಕರಣಕ್ಕೆ ಹೋಗಿದ್ದೆ. ಆ ಚಿತ್ರದ ನಿರ್ಮಾಪಕ 'ಚಿತ್ರೀಕರಣ ಕಾಶ್ಮೀರದಲ್ಲೇ ಆಗಬೇಕಿತ್ತು, ಸರ್. ಆದರೆ ಇದ್ದಾರಲ್ಲ ಟೆರರಿಸ್ಟ್, ಕಶ್ಮೀರಿ ಗೂಂಡಾಗಳು! ಅವರ ಕಾರಣದಿಂದಾಗಿ ಸ್ವಿಜರ್ಲೆಂಡಿಗೆ ಹೋಗು, ಸಿಂಗಾಪುರಕ್ಕೆ ಹೋಗು! ಅವರಿಗೆ ಸರಿಯಾಗಿ ಬುದ್ಧಿ ಕಲಿಸೋ ಸರ್ಕಾರ ಬೇಕು ಈ ದೇಶಕ್ಕೆ' ಎಂದು ತನ್ನ ಚಿತ್ರಪಟವನ್ನು ಕುಲಗೆಡಿಸಲೆಂದೇ ಈ ಉಗ್ರಗಾಮಿಗಳು ಹೊಂಚು ಹಾಕಿರುವರೆಂದು ಸೂಚಿಸಿ ಕೊನೆಗೆ, 'ನಮ್ಮ ಸ್ಟಾರ್ಸಿಗೂ ಅದೇ ಬೇಕು! ಸ್ವಿಜರ್ಲೆಂಡ್! ಸಿಂಗಾಪುರ್! ಇಂಡಸ್ಟ್ರಿಯ ಚಿಂತೆ ಯಾರಿಗಿದೆ?' ಎಂದು ಈ ಸ್ಟಾರ್ಸ್‌ಗಳ ರಗಳೆ ಒಂದು ಇರದಿದ್ದರೆ ಕಶ್ಮೀರಿಗಳನ್ನೆಲ್ಲ ಸದೆಬಡಿಯಬಹುದಾಗಿತ್ತು ಎಂದು ಗೋಗರೆಯುತ್ತ ಸಿಂಗಾಪುರಕ್ಕೆ ಕರೆದುಕೊಂಡು ಹೋಗಿದ್ದ.

ಮರಳಿ ಬಂದಾಗ ಎಲ್ಲೆಡೆ ಅಯೋಧ್ಯೆಯ ಗದ್ದಲ ಹಬ್ಬಿತ್ತು. ರಾಜಕೀಯ ಒಳಸುದ್ದಿಗಳ ಬಣ್ಣ ಬದಲಾವಣೆಗಳನ್ನೆಲ್ಲ ಬಲ್ಲ ಅನಂತನಾಗ್‌ಗೆ ಫೋನ್ ಮಾಡಿದೆ. ಆದರೆ ಅನಂತ ಹೇಳಿದ ಸುದ್ದಿಯೇ ಬೇರೆ - 'ರಿಝುವಿ ಬೆಂಗಳೂರಿಗೆ ಬಂದು ನನ್ನನ್ನು ಭೆಟ್ಟಿಯಾದ. ಅಡ್ವಾನ್ಸ್ ಹಣ ಕೊಟ್ಟ. ನಾನ್‌ಸ್ಟಾಪ್ ಮಾತಾಡಿದ. ಅದೇ ರಾತ್ರಿ ಶಿವರಾಮ ಕಾರಂತರನ್ನು ಕಾಣಲಿಕ್ಕೆಂತ ಬಸ್ಸಿನಿಂದ ಉಡುಪಿಗೆ ಹೊರಟ. ಮುಲ್ಕಿಯ ಬಳಿಯಲ್ಲೊ ಅಪಘಾತ ವಾಯಿತಂತೆ. ತಲೆಯ ಮೇಲೆ ಟ್ರಂಕು ಬಿದ್ದು ಸತ್ತನಂತೆ. ಇಡಿಯ ಬಸ್ಸಿನಲ್ಲಿ ಸತ್ತವ ಅವನೊಬ್ಬನೇ. ಮೂರು ದಿನ ಹೆಣ ಅಲ್ಲೇ ಇತ್ತಂತೆ!'

ಆವತ್ತು ಸಂಜೆ ರಿಝುವಿಯ ಮನೆಗೆ ಹೋದೆ. ಬಾಂದ್ರಾದಿಂದ ಪಾಲಿಹಿಲ್‌ಗೆ ಹೋಗುವಾಗ ಮೂಲೆಯ ಗಲ್ಲಿಯೊಂದರಲ್ಲಿ ಹಳೆಯ ಮನೆ. ರಿಝುವಿ ಹತ್ತೊಂಬತ್ತು ನೂರ ಅರವತ್ತರ ಸುಮಾರಿಗೆ ಮುಂಬಯಿಗೆ ಬಂದಾಗ ಬಾಡಿಗೆಗೆ ಹಿಡಿದದ್ದು. ಈಗ ಈ ಆಸ್ತಿಯ ಬೆಲೆ ಗಗನಕ್ಕೇರಿದೆ. ಆದರೆ ಮನೆ ಬಿಟ್ಟೆ ಅದರ ಬದಲಾಗಿ ಒಂದು ಪ್ರಸಕ್ತ ಫ್ಲಾಟ್ ನಿಮಗೆ ಪುಕ್ಕಟೆ ಕೊಡಿಸುತ್ತೇನೆ ಎಂದು ದುಂಬಾಲು ಬಿದ್ದಿರುವ ಮನೆ ಮಾಲೀಕನ ಮನವಿಯನ್ನು ರಝುವಿ ತಳ್ಳಿ ಹಾಕುತ್ತಲೇ ಇದ್ದ.

'ಮನೆ ಅಂದರೆ ಮನೆಯಾಗಿರಬೇಕು' ಎಂದು ವಾದಿಸುತ್ತಿದ್ದ.

ರಿಝುವಿಯ ಹೆಂಡತಿ ಪಡಸಾಲೆಯಲ್ಲಿ ಬಂದು ಸೋಫಾದ ಮೂಲೆಗಂಟಿ ಕೂತಳು. ಮಾತನಾಡಲಿಲ್ಲ. ಕಣ್ಣೀರು ಧಾರಾಕಾರವಾಗಿ ಹರಿಯುತ್ತಿದ್ದರೂ ಬಿಕ್ಕಲಿಲ್ಲ.

ಮಗಳೆಲ್ಲೋ ಹೊರಗೆ ಹೋಗಿರಬೇಕು.

ರಿಝುವಿಯ ಮಗ, ಯಾಕೂಬ್ ಹಸನ್, ವಯಸ್ಸು ಇಪ್ಪತ್ತು ಇಪ್ಪತ್ತೆರಡು ಇರಬೇಕು. ಒಂದು ಚೊಂಬು ನೀರು ತಂದಿಟ್ಟು ಎಲ್ಲ ವಿವರಗಳನ್ನು ಹೇಳಿದ.

ಅಪಘಾತದಲ್ಲಿ ರಿಝುವಿ ಸತ್ತ. ಅವನ ಪರ್ಸಿನಲ್ಲಿ ಅವನ ವಿಳಾಸ ಓದಿ, ಮೂಲ್ಕಿಯ ಪೋಲೀಸರು ಮುಂಬಯಿ ಪೊಲೀಸರನ್ನು ಸಂಪರ್ಕಿಸಿದರು. ಅವರು ಮನೆಯವರನ್ನು ಸಂಪರ್ಕಿಸಿ ರಿಝುವಿಯ ಅಣ್ಣ-'ಅಳಿದ ಮೇಲೆ' ಯನ್ನು ಭಾಷಾಂತರಿಸಿದವ- ಉಡುಪಿಗೆ ಹೊರಟ. ಅಷ್ಟರಲ್ಲಿ ಮುಲ್ಕಿಯ ಮುಸಲ್ಮಾನರು ಬಂದು, 'ಯಾರೋ ಮುಸಲ್ಮಾನ ಸತ್ತಿದ್ದಾನಂತೆ. ನಮಗೆ ಶವವನ್ನು ಕೊಟ್ಟರೆ ನಾವು ದಫನಾಯಿಸಿ ಬಿಡುತ್ತೇವೆ' ಎಂದು ಕೇಳಿಕೊಂಡಿದ್ದರಂತೆ. ಆದರೆ ಅಣ್ಣ ಬಂದು ತಲುಪುವ ತನಕ ಪೋಲೀಸರೂ ಏನೂ ಮಾಡುವ ಹಾಗಿರಲಿಲ್ಲ. ಅಂತೂ ಮೂರು ದಿನ ಹೆಣ ಅನಾಥವಾಗಿ ಕೊಳೀತಿತ್ತಂತೆ. ಮುಲ್ಕಿಯ ತನಕ ಹೋದ ಅಣ್ಣನೂ ಕಾರಂತರನ್ನು ಕಾಣದೆ ಮರಳಿದ್ದ.

(ಮುಂದುವರಿಯುವುದು)

ಪೆಟ್ರೋಲ್‌ಬಂಕ್ ಹಗರಣ

ಮುಖ ಉಳಿಸಿಕೊಳ್ಳಲು ಮುಂದಾದ ಪ್ರಧಾನಿ

ಪುಟ 7 ರಿಂದ

ವಿರೋಧ ಪಕ್ಷಗಳ ಒಗ್ಗೂಡಿದ ವಿರೋಧಕ್ಕೆ ಒಪ್ಪಿ ಇಡೀ ಪರವಾನಗಿಗಳನ್ನು ರದ್ದು ಮಾಡಿದ್ದರೂ ಸಹಾ, ರದ್ದತಿಯ ಹಿಂದೆ ಮತ್ತೊಂದು ಅಂಶ ಅಡಗಿದೆ. ವಿವೇಚನಾ ಕೋಟಾದಡಿ ನೀಡಲಾಗುವ ಪರವಾನಗಿಗಳ ವಿಷಯದ ನಿಯಮಗಳ ಕುರಿತು ಈ ಹಿಂದೆ ತೀರ್ಪನ್ನಿತ್ತಿರುವ ಮಾಜಿ ನ್ಯಾಯಾಧೀಶರಾದ ಕುಲದೀಪ್ ನಾಯರ್ ತೀರ್ಪಿನ ಪ್ರಕಾರ, ಈ ನಿಯಮಗಳ ಕುರಿತು' ಯಾರೊಬ್ಬರೂ ಕೋರ್ಟಿಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದರೆ ಇಡೀ ಪರವಾನಗಿಗಳು ರದ್ದಾಗುತ್ತವೆ' ಎಂದು ಅವರು ಬಹಿರಂಗವಾಗಿ ಹೇಳಿಕೆ ನೀಡಿದ್ದಾರೆ. ಈ ಎಲ್ಲವನ್ನೂ ಗಮನಿಸಿದ ಪ್ರಧಾನಿಗಳು ನ್ಯಾಯಾಲಯಗಳಿಂದ ಛೀಮಾರಿ ಹಾಕಿಸಿಕೊಳ್ಳುವ ಮೊದಲೇ ರದ್ಧತಿ ಮಾಡಿ, ತಮ್ಮ ಸರ್ಕಾರದ ತೇಜೋವಧೆಯನ್ನು ತಾವಾಗೇ ತಡೆದಿದ್ದಾರೆ.

ಅವಮಾನಕಾರಿ ನಿಯಮ

ಸುಪ್ರೀಂ ಕೋರ್ಟ್‌ನ ಮಾಜಿ ಮುಖ್ಯ ನ್ಯಾಯಮೂರ್ತಿಗಳಾದ ಆನಂದ್‌ರವರು ಈ ಸರ್ಕಾರ ಡಿಸಿಬಿ ಅಧ್ಯಕ್ಷರ ನೇಮಕ ಹಾಗೂ ಕಾರ್ಯವಿಧಾನದ ಕುರಿತು ರೂಪಿಸಿರುವ ನಿಯಮಾವಳಿಗಳಡಿಯಲ್ಲಿ ಯಾವುದೇ ವ್ಯಕ್ತಿ ಆತ್ಮಗೌರವದೊಂದಿಗೆ, ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗದು" ಎಂದಿದ್ದಾರೆ. ಇದೇ ರೀತಿಯ ಅಭಿಪ್ರಾಯವನ್ನು ಮತ್ತೊಬ್ಬ ಮುಖ್ಯ ನ್ಯಾಯಮೂರ್ತಿಗಳು ಸಹ ವ್ಯಕ್ತಪಡಿಸಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಈ ಬಿಜೆಪಿ ನೇತೃತ್ವ ಎನ್‌ಡಿಎ ಅಸ್ತಿತ್ವಕ್ಕೆ ಬಂದಾಗಿನಿಂದ ಡಿಸಿಬಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುವ ಮಾಜಿ ನ್ಯಾಯಮೂರ್ತಿಗಳ ಪಾಡೇನಾಗಿರಬೇಕು? ರಾಮನಾಯಕ್‌ನಂತಹ ಭ್ರಷ್ಟ ಮಂತ್ರಿಗಳು ಎಲ್ಲಾ ಅಕ್ರಮಗಳನ್ನು ಡಿಎಸ್‌ಬಿ ಮೇಲೆ ಹಾಕುವ ಮೂಲಕ ನ್ಯಾಯಾಲಯ ಹಾಗೂ ನ್ಯಾಯಾಧೀಶರ(ಮಾಜಿ) ಗೌರವ-ಘನತೆಗೂ ಸಹ ಚ್ಯುತಿ ತಂದಿದ್ದಾರೆ.

ರಾಮನಾಯಕ್ ಈಗ ರಾಜಿನಾಮೆ ನೀಡಿದರೂ, ಜಾರ್ಜ್ ಫರ್ನಾಂಡೀಸ್ ರೀತಿ ಮತ್ತೆ ಸಚಿವ ಸಂಪುಟಕ್ಕೆ ಇನ್ನೊಂದು ಸಂಪುಟ ವಿಸ್ತರಣೆ-ಪುನರ್ರಚನೆ ಸಮಯದಲ್ಲಿ ವಾಪಸ್ಸಾಗಬಹುದು. ಆದರೆ ನಮ್ಮ ದೇಶ ತನ್ನ ಸ್ವತಂತ್ರ ಇತಿಹಾಸದಲ್ಲಿ ಕಂಡರಿಯದಂತಹ ಭ್ರಷ್ಟಾಚಾರಗಳ ಹಗರಣಗಳನ್ನು ಜನತೆಗೆ ಕೊಡುಗೆಯಾಗಿ ನೀಡಿರುವ ಈ ಸರ್ಕಾರದ ಭ್ರಷ್ಟಾಚಾರದ ಬಗ್ಗೆ ಹಾಗೂ ಅದು ಅನುಸರಿಸಿರುವ ಕೋಮುವಾದದ ಬಗ್ಗೆ ಇತರೆ ಎನ್‌ಡಿಎ ಮಿತ್ರ ಪಕ್ಷಗಳು ಈಗಲಾದರೂ ಎಚ್ಚೆತ್ತುಕೊಳ್ಳುವುದು ಅಗತ್ಯವಾಗಿದೆ.

...ದೇವದಾಸ್' ಹೇಳುವುದೇನು?

...ತ 12 ರಿಂದ

...ಚಂದ್ರಮುಖಿಯ ದುರಂತ ಪ್ರೇಮ ತ್ರಿಕೋನವನ್ನು, ಕೃಷ್ಣ - ರಾಧೆ ...ಮೀರಾ ಇವರ 'ವಿವಾಹ ಬಂಧನದ' ಆಚೆಗಿನ ಪವಿತ್ರ ಪ್ರೇಮದಂತೆ ...ನೋಡಲು ಪ್ರಯತ್ನಿಸಿದ್ದಾರೆ. ಕಾದಂಬರಿಯ ನಿರ್ದಿಷ್ಟ ಸಾಮಾಜಿಕ ...ವರಗಳನ್ನು ಬಿಟ್ಟು ಅದರ ಹಂದರ ಮಾತ್ರ ಇರುವ ಕಾವ್ಯಮಯ ...ಲಾತ್ಮಕ ನೃತ್ಯ - ನಾಟಕದಂತೆ ಚಿತ್ರಿಸಲು ಯತ್ನಿಸಿದ್ದಾರೆ. ...ದೇವದಾಸ್'ನ ಪುರುಷ ಕೇಂದ್ರಿತ ಕಥೆಯನ್ನು ಅವನ ಜೀವನದಲ್ಲಿ ...ರುವ ಇಬ್ಬರು ಮಹಿಳೆಯರ ದೃಷ್ಟಿಯಿಂದ ನೋಡಿ ಅದಕ್ಕೆ ಬೇರೆ ...ದೃಷ್ಟಿಕೋನ ನೀಡಲು ಪ್ರಯತ್ನಿಸಿದ್ದಾರೆ. ಇದಿಷ್ಟು ಬನ್ಸಾಲಿಯವರ ...ಉದ್ದೇಶ. ಈ ಬಗ್ಗೆ ಅವರು ಹೇಳಿಯೂ ಇದ್ದಾರೆ. ಇದರಲ್ಲಿ ಅವರು ...ಷ್ಟು ಯಶಸ್ವಿಯಾಗಿದ್ದಾರೆ ಎಂದು ನೋಡುವುದಕ್ಕೆ ಮಾತ್ರ ...ಮರ್ಶೆಯನ್ನು ಸೀಮಿತಗೊಳಿಸುವ ಉದ್ದೇಶ ಇಲ್ಲ.

...ಉತ್ತಮ ಆರೋಗ್ಯಕರ ಚಿತ್ರವಲ್ಲ

ಯಾಕೆಂದರೆ ನಿರ್ದೇಶಕ ಒಂದು ಫಿಲಂನ್ನು ಯಾಕೆ ಮಾಡಿದ? ...ತನ ಉದ್ದೇಶ ಏನಿತ್ತು? ಆತ ಏನನ್ನು ಹೇಳಲು ಬಯಸಿದ? ...ಎಂಬುದು ಮಾತ್ರ ಮುಖ್ಯವಲ್ಲ. ಅದರಷ್ಟೇ ಫಿಲಂಗೆ 50 ಕೋಟಿ ...ತೊಡಗಿಸುವವರ ಉದ್ದೇಶ ಏನಿತ್ತು? ಸೂಪರ್ ಹಿಟ್ ಮಾಡಿ ...ಲಾಭಮಾಡುವುದಲ್ಲದೆ ಯಾವ ಸಾಮಾಜಿಕ ಸಂದರ್ಭದಲ್ಲಿ ಬಂದಿದೆ? ...ನ ಅದನ್ನು ಏಕೆ ಸ್ವೀಕರಿಸಿದ್ದಾರೆ ಅಥವಾ ಸ್ವೀಕರಿಸಿಲ್ಲ?

...ಕ್ ಕೊಡು ಕಾಕ್‌ಟೈಲ್'

ದೇವದಾಸ್‌ನಲ್ಲಿ ಹಲವು ಕಡೆ 'ಕರ್ಕಶ' 'ಮೆಲೋಡ್ರಾಮಾ' ಮತ್ತು ...ಅತಿರೇಕ' ಎನ್ನಿಸುವ ಉತ್ತಮ ಚಿತ್ರವೊಂದರಲ್ಲಿ ಇರುವ ...ಅಪವಾದಗಳಲ್ಲ ಚಿತ್ರದ ಅವಿಭಾಜ್ಯ ಅಂಗಗಳು ಹಾಗಾದರೆ ಇಂದಿನ ...ಸಂದರ್ಭದಲ್ಲಿ ಬನ್ಸಾಲಿಯವರ ದೇವದಾಸ್ ಹೇಳುವುದೇನು? ...ಇಂದಿನ ಕಷ್ಟಕೋಟಲೆಗಳಿಂದ ಬಿಡುಗಡೆ ಪಡೆಯಲು ಸಮೂಹ ...ನೃತ್ಯಗಳು, ಕಣ್ಣಿಗೆ ಹಬ್ಬ ನೀಡುವ ಸೂಪರ್ - ಸುಂದರಿಯರು, ...ಕಣ್ಣು ಕೋರೈಸುವ ಸೀರೆ - ಆಭರಣಗಳು, ಕುಣಿವ ಹಾಡುಗಳು ...ಒಂದೆಡೆ. ನಿಮಗೆ ಸಮಸ್ಯೆಗಳಿವೆಯೇ? ಅದರ ಬಗ್ಗೆ ತಲೆ ...ಕೆಡಿಸಿಕೊಳ್ಳಬೇಡಿ. ಕಾರಣ ಹುಡುಕಲೂ ಪರಿಹರಿಸಲೂ ...ಪ್ರಯತ್ನಿಸಬೇಡಿ. ಅದರಿಂದ ಸಾಧ್ಯವಾದಷ್ಟು ದೂರ ಓಡಿಹೋಗಿ. ...ಅಂತಪೂರ್ತಿ 'ಕುಡಿದು ಓಡುತ್ತಾ ಓಡುತ್ತಾ' ಸಾಯಿರಿ ಎಂಬ ...ವಿಮಾತು ಇನ್ನೊಂದೆಡೆ. ಇವೆರಡರ ಅಮಲೇರಿಸುವ ಮಿಶ್ರಣವೇ ...ಕಾಕ್‌ಟೈಲ್' ಎನ್ನಿರಿ ಬೇಕಾದರೆ 'ದೇವದಾಸ್' ಸೂಪರ್ ಹಿಟ್ ...ಆಗಲು ಕಾರಣ 20ನೇ ಶತಮಾನದ ಆದಿಯ ಶರತ್ ಚಂದ್ರರ ...ದೇವದಾಸ್‌ನ ಜೀವನ ಮಾತ್ರ ದುರಂತವಲ್ಲ. ನಾವು ನೀವೆಲ್ಲರೂ ...ದೇವದಾಸರೇ. ನಮ್ಮ ನಿಮ್ಮ ದುರಂತ ಸಾರ್ವಕಾಲಿಕ. ಕನಿಷ್ಟ ನಮ್ಮ ...ಲಕ್ಕಂತೂ ಪ್ರಸ್ತುತ. ಬನ್ಸಾಲಿಯವರ ದೇವದಾಸ್ ಇವೆಲ್ಲವನ್ನೂ ...ಕಲಾತ್ಮಕವಾಗಿ ಹೇಳುವಂತಿದೆ.

...ದೇವದಾಸ್'ರುಗಳಾಗಲು ನಿರಾಕರಿಸುತ್ತೇವೆ

ಇದರ ಅರ್ಥ ಬನ್ಸಾಲಿಯವರ 'ದೇವದಾಸ್'ನಲ್ಲಿ ಉತ್ತಮ ...ಅಂಶಗಳಲ್ಲಿವೆಂದಲ್ಲ ಉತ್ತಮ ಅಭಿನಯ, ಕಲಾತ್ಮಕ ಫೋಟೋಗ್ರಾಫಿ, ...ಮ್ಯೂಲಾಯ್ಡ್ ಕಾವ್ಯದಂತಿರುವ ನೃತ್ಯ ನಾಟಕದ ಶೈಲಿ, ಚಾರಿತ್ರಿಕ ...ಸನ್ನಿವೇಶ ಸೃಷ್ಟಿಸುವಲ್ಲಿ ತೋರಿಸಿರುವ ಮುತುವರ್ಜಿ ಇವೆಲ್ಲ ಫಿಲಂನ ...ಪ್ರಬಲ ಅಂಶಗಳೇ. ಆದರೆ ಬನ್ಸಾಲಿಗೆ ಫಿಲಂ ಮಾಡಲು 50 ಕೋಟಿ ...ಕೊಟ್ಟು ಸೂಪರ್ ಹಿಟ್ ಮಾಡಲು ಹೋಗಿ (ಭೂಗತ ದೊರೆಗಳ ...ಜತೆಗೆ ಸಂಬಂಧ ಇಟ್ಟುಕೊಟ್ಟಿದ್ದಕ್ಕೆ) ಜೈಲಿನಲ್ಲಿರುವ ಭರತ ಶಹಾ ...ಮತ್ತು ಆತನ ವರ್ಗದ ಉದ್ದೇಶ ಮೀರಲು ಆಗುತ್ತದೆಯೇ? ...ಬನ್ಸಾಲಿಯುವರು ಪ್ರಜ್ಞಾಪೂರ್ವಕವಾಗಿಯೋ ಅಥವಾ ...ಗೊತ್ತಿಲ್ಲದೆಯೋ ತಮ್ಮ 'ಪ್ರೇಮದ ದುರಂತ ಕಾವ್ಯ'ದ ಜತೆ, ಸೂಪರ್ ...ಹಿಟ್ ಮಾಡಲು ಬೇಕಾದ ಅಂಶಗಳನ್ನು ಪಲಾಯನವಾದ ಕಾಕ್ ...ಟೈಲ್‌ನ್ನು ಮಿಶ್ರಮಾಡಿ ನಮಗೆಲ್ಲಾ ಒರೆಸಿದ್ದಾರೆ. 'ಸೂಪರ್ ಹಿಟ್'ನ ...ಯಶಸ್ಸಫಾರ್ಮುಲಾ ತಯಾರಿಸಿದ್ದಾರೆ. ಆದರೆ ಇವರೆಲ್ಲಾ ಎಷ್ಟು ...ಪ್ರಯತ್ನಿಸಿದರೂ ನಾವು ದೇವದಾಸ್‌ರ ಬಗ್ಗೆ ಕಣ್ಣೀರು ಮಿಡಿಯುತ್ತೇವೆ. ...ವರ ದುರಂತ ಅರ್ಥವಾಡಿಕೊಳ್ಳುತ್ತೇವೆ. ಆದರೆ ...ದೇವದಾಸ್'ಗಳಾಗಲು ನಿರಾಕರಿಸುತ್ತೇವೆ ಎಂದು ಗಟ್ಟಿಯಾಗಿ ಕೂಗಿ ...ಹೇಳೋಣವೆ? ಜೈಲಿನಲ್ಲಿರುವ ಭರತ್ ಶಾಗೂ ಕೇಳುವಂತೆ!

ಕಾಮನ್ ವೆಲ್ತ್ ಕ್ರೀಡೆಗಳು

ಭಾರತದ ಅಪ್ರತಿಮ ಸಾಧನೆ

ಕಾಮನ್ ವೆಲ್ತ್ ಕ್ರೀಡಾ ಸ್ಪರ್ಧೆ ಇದೀಗ ಮುಕ್ತಾಯಗೊಂಡಿದೆ. ಇದರಲ್ಲಿ ಭಾರತದ ಸಾಧನೆ ಅತ್ಯುತ್ತಮವಾಗಿದೆ. ಈ ಕ್ರೀಡಾಕೂಟ ಆರಂಭಗೊಂಡ ಇತಿಹಾಸದತ್ತ ಗಮನ ಸೆಳೆದಿದ್ದಾರೆ

ಆರ್.ಡಿ.ಮಿರ್ಕಿಯೋರ್

ಇದೀಗ 17ನೇ ಕಾಮನ್‌ವೆಲ್ತ್ ಕ್ರೀಡೆಗಳು ಇಂಗ್ಲೆಂಡಿನ ಮ್ಯಾಂಚೆಸ್ಟರ್‌ನಲ್ಲಿ ಮುಕ್ತಾಯಗೊಂಡಿದೆ. ಭಾರತ ಈ ಬಾರಿ ಅಪ್ರತಿಮ ಪ್ರದರ್ಶನ ನೀಡಿದೆ. ಈ ಸಲದ ಕ್ರೀಡೆಯಲ್ಲಿ 72 ರಾಷ್ಟ್ರಗಳು ಭಾಗವಹಿಸಿದ್ದವು. (ಈ ಸಂಖ್ಯೆ ಬ್ರಿಟೀಷ್ ಸಾಮ್ರಾಜ್ಯ ಆಳ-ವಿಸ್ತಾರವನ್ನು ತೋರಿಸುತ್ತದೆ) ಭಾರತ ಈ ಬಾರಿ 32 ಚಿನ್ನ, 21 ಬೆಳ್ಳಿ, 19 ಕಂಚಿನ ಪದಕಗಳಿಸಿ ಪದಕ ಮಟ್ಟದಲ್ಲಿ ಮೂರನೇ ಸ್ಥಾನ ಗಳಿಸಿದೆ. ಯಾವುದೇ ಅಂತರಾಷ್ಟ್ರೀಯ ಕ್ರೀಡೋತ್ಸವದಲ್ಲಿ ಇದು ಭಾರತದ ಅಪ್ರತಿಮ ಸಾಧನೆ. (ಸಾರ್ಕ್ ಕ್ರೀಡೋತ್ಸವ ಹೊರತುಪಡಿಸಿ) ಆದರೆ ಈ ಫಲಿತಾಂಶದಿಂದ ನಾವು ಬೀಗುವಂತಿಲ್ಲ. ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ ಭಾರತ 32 ಚಿನ್ನದ ಪದಕ ಗಳಿಸಿದ ಭಾರತ ಕಳೆದೆರಡು ಒಲಿಂಪಿಕ್ಸ್‌ನಲ್ಲಿ ಕೇವಲ ಒಂದು ಕಂಚಿನ ಪದಕ ಮಾತ್ರ ಗಳಿಸಿತ್ತು ಎಂಬ ಅಂಶವನ್ನು ಸಹಾ ನಾವೆಲ್ಲರೂ ಗಮನಿಸಬೇಕು.

ಹೀಗಿದ್ದರೂ ಭಾರತದ ಸ್ಪರ್ಧಿಗಳು ಈ ಬಾರಿಯ ಕಾಮನ್‌ವೆಲ್ತ್ ಕ್ರೀಡೆಯಲ್ಲಿ ಅತ್ಯುನ್ನತ ಸಾಧನೆ ತೋರಿದ್ದಾರೆ. ಶೂಟಿಂಗ್, ಭಾರ ಎತ್ತುವಿಕೆ (ಪುರುಷರು - ಮಹಿಳೆಯರು)ಯಲ್ಲಿ ಪದಕಗಳಿಕೆಯಲ್ಲಿ ಭಾರತದ್ದು ಸಿಂಹಪಾಲು. ಉಳಿದಂತೆ ಕುಸ್ತಿ, ಬಾಕ್ಸಿಂಗ್, ಬ್ಯಾಡ್ಮಿಂಟನ್‌ನಲ್ಲಿ ಪದಕ ಸಿಕ್ಕಿದೆ. ಆದರೆ ಅಥ್ಲೆಟಿಕ್ಸ್‌ನಲ್ಲಿ ಮಾತ್ರ ಕೇವಲ ಎರಡು ಪದಕ ಭಾರತದ ಪಾಲಿಗೆ ಸಿಕ್ಕಿದೆ. (ಡಿಸ್ಕಸ್‌ನಲ್ಲಿ ನೀಲಂ ಸಿಂಗ್ ಬೆಳ್ಳಿ- ಲಾಂಗ್‌ಜಂಪ್‌ನಲ್ಲಿ ಅಂಜು



ಹಾಕಿಯಲ್ಲಿ ಚಿನ್ನ ಗೆದ್ದ ಭಾರತದ ಮಹಿಳಾ ತಂಡ

ಆರಂಭದಿಂದಲೂ ಉತ್ತಮ ಪಲಿತಾಂಶ ನೀಡುತ್ತಿದೆ. ಇಂಗ್ಲೆಂಡ್, ಆಸ್ಟ್ರೇಲಿಯಾ, ಕೆನಡಾ ಬಿಟ್ಟರೆ ಕಾಮನ್‌ವೆಲ್ತ್‌ನಲ್ಲಿ ಭಾರತ ನಂತರದ ಸ್ಥಾನ ಯಾವಾಗಲೂ ಗಳಿಸುತ್ತಿದೆ. ಈ ಮೇಲಿನ ಮೂರು ರಾಷ್ಟ್ರಗಳನ್ನು ಹೊರತುಪಡಿಸಿದರೆ ಬ್ರಿಟೀಷ್ ಅಧಿಪತ್ಯದಲ್ಲಿದ್ದ ಎಲ್ಲಾ ರಾಷ್ಟ್ರಗಳು ಬಡ ರಾಷ್ಟ್ರಗಳು ಹಾಗೂ ಬ್ರಿಟೀಷ್ ಸಾಮ್ರಾಜ್ಯಶಾಹಿಯಿಂದ ಹಿಂಡಿ ಹಿಪ್ಪಡಿಯಾದ ರಾಷ್ಟ್ರಗಳು. ಭಾರತದ ಈ ಬಾರಿಯ ಕಾಮನ್‌ವೆಲ್ತ್ ಕ್ರೀಡೆಗಳ ಸಾಧನೆ ಎಲ್ಲರಿಗೂ ಸಂತಸ ತಂದಿದ್ದರೂ ವಿಶ್ವ ಮಟ್ಟಕ್ಕೆ, ಒಲಿಂಪಿಕ್ಸ್‌ಗೆ ಹೋಲಿಸಿದರೆ ನಾವು ಶತಮಾನದಷ್ಟು ಕ್ರೀಡೆಯಲ್ಲಿ ಹಿಂದೆ ಇದ್ದೇವೆ. (ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ ಯಾವುದೇ ಸಮಾಜವಾದಿ ರಾಷ್ಟ್ರಗಳಿಲ್ಲ. ಕ್ರೀಡೆಗಳಲ್ಲಿ ಸಮಾಜವಾದಿ ರಾಷ್ಟ್ರಗಳ ಸಾಧನೆ ಅತ್ಯುನ್ನತವಾಗಿದೆ) ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ ಈ ಬಾರಿ ಜಾರ್ಜ್- ಕಂಚು -ಇಬ್ಬರು ಮಹಿಳೆಯರು) ಈ ಬಾರಿಯ ಕ್ರೀಡೆಯಲ್ಲಿ ಭಾರತದಿಂದ ಪದಕ ಗಳಿಕೆಯಲ್ಲಿ ಮಹಿಳೆಯರದೇ ಮೇಲುಗೈ. ಆದರೆ ಕಾಮನ್‌ವೆಲ್ತ್ ಕ್ರೀಡೆಗಳ ಸಾಧನೆಗೂ ಒಲಿಂಪಿಕ್ಸ್ ಕ್ರೀಡೆಗಳ ಸಾಧನೆಗೂ ಅಜಗಜಾಂತರ ವ್ಯತ್ಯಾಸವಿದೆ. ಇದೆಲ್ಲದರ ನಡುವೆ ಭಾರತದ ಅತ್ಯುತ್ತಮ ಸಾಧನೆ ಎಂದರೆ ಮಹಿಳಾ ಹಾಕಿ ತಂಡದಿಂದ ಚಿನ್ನದ ಪದಕ ಗಳಿಕೆ. ಮಹಿಳಾ ಹಾಕಿಯಲ್ಲಿ ಭಾರತ ಬಲಿಷ್ಟ ದಕ್ಷಿಣ ಆಫ್ರಿಕಾ, ನ್ಯೂಜಿಲೆಂಡ್ ಹಾಗೂ ಇಂಗ್ಲೆಂಡ್‌ನ್ನು ಮಣಿಸಿದ್ದು ನಿಜಕ್ಕೂ ವಿಶ್ವಮಾನ್ಯದ ಸಾಧನೆ. (ಹಾಕಿ ಭಾರತದ ರಾಷ್ಟ್ರೀಯ ಕ್ರೀಡೆ)

ಭಾರತದ ಅತ್ಯುತ್ತಮ ಸಾಧನೆ ನಡುವೆ ಪದಕ ಗಳಿಸಿದ ಇಬ್ಬರು ಭಾರ ಎತ್ತುವ ಸ್ಪರ್ಧಿಗಳು ಉದ್ದೀಪನಾ ಮದ್ದು ಸೇವನೆ ಆರೋಪಕ್ಕೆ ಬಳಗಾಗಿದ್ದು ತೀರಾ ವಿಷಾದನೀಯ.

ಏನಿದು ಕಾಮನ್‌ವೆಲ್ತ್ ಕ್ರೀಡೆ, ಇದರ ಉಗಮ ಎಂದಾಯಿತು?

ಒಲಿಂಪಿಕ್ಸ್, ಏಷ್ಯನ್ ಕ್ರೀಡೆಗಳ ತರಹಾ ಕಾಮನ್‌ವೆಲ್ತ್ ಕ್ರೀಡೆಗಳೂ ಸಹಾ ಎಂದು ಎಲ್ಲರೂ ಅಂದುಕೊಳ್ಳುತ್ತೇವೆ. ಏನಿದು ಕಾಮನ್‌ವೆಲ್ತ್ ಕ್ರೀಡೆ, ಇದರ ಉಗಮ ಎಂದಾಯಿತು ಎಂಬ ಬಗ್ಗೆ ಒಂದು ಹಿನ್ನೋಟ ಹರಿಸೋಣ.

ಬ್ರಿಟಿಷ್ ಸಾಮ್ರಾಜ್ಯವು ಸೂರ್ಯ ಅಸ್ತಮಿಸದ ಸಾಮ್ರಾಜ್ಯ ಎಂದು ಹೆಸರು ಪಡೆದಿತ್ತು. ಬ್ರಿಟೀಷ್ ಸಾಮ್ರಾಜ್ಯ ವಿಶ್ವದಾದ್ಯಂತ ಹರಡಿತ್ತು. ಬ್ರಿಟನ್ನಿನ ವಸಾಹತು ಅಮೇರಿಕಾ ಖಂಡದ ಕೆನಡಾದಿಂದ ಆಸ್ಟ್ರೇಲಿಯಾದವರೆಗೆ, ಯುರೋಪ್‌ನಿಂದ ಹಿಡಿದು ಆಫ್ರಿಕಾದಾದ್ಯಂತ, ಏಷ್ಯಾ ಖಂಡದ ಬಹುಪಾಲು ಬ್ರಿಟನ್ನಿನ ವಸಾಹತು ಆಗಿತ್ತು. ಬ್ರಿಟನ್ ಸಾಮ್ರಾಜ್ಯದ ಅಧೀನ ರಾಷ್ಟ್ರಗಳ ಕ್ರೀಡೆಯಾಗಿ ಆರಂಭವಾಯಿತು. ಕಾಮನ್‌ವೆಲ್ತ್ ಕ್ರೀಡೆಗಳು 1891ರಲ್ಲಿ ಬ್ರಿಟೀಷ್ ಸಾಮ್ರಾಜ್ಯಕ್ಕೆ ಮೊಸಲಾಗಿ ಕ್ರೀಡೋತ್ಸವ ನಡೆಸಬೇಕೆಂಬ ಪ್ರಸ್ತಾವನೆ ಬಂದಿದ್ದರೂ ಕಾರ್ಯಗತವಾಗಿರಲಿಲ್ಲ. 1911ರಲ್ಲಿ ಬ್ರಿಟೀಷ್ ಸಾಮ್ರಾಟ 5ನೇ ಜಾರ್ಜ್‌ನ ಪಟ್ಟಾಬಿಷೇಕದ ಸಂದರ್ಭದಲ್ಲಿ ಸಾಮ್ರಾಜ್ಯ ಚಾಂಪಿಯನ್‌ಷಿಪ್ ಎಂಬ ಹೆಸರಿನ ಕ್ರೀಡಾಸ್ಪರ್ಧೆ ಪಟ್ಟಾಭಿಷೇಕದ ಉತ್ಸವದಲ್ಲಿ ಸೇರಿ ನಡೆಯಿತು. ಬ್ರಿಟನ್, ಕೆನಡಾ, ದಕ್ಷಿಣ ಆಫ್ರಿಕಾ ಹಾಗೂ ಆಸ್ಟ್ರೇಲಿಯಾ ಕ್ರೀಡಾಪಟುಗಳು ಮಾತ್ರ ಈ ಕ್ರೀಡೋತ್ಸವದಲ್ಲಿ ಭಾಗವಹಿಸಿದ್ದರು. 1928ರಲ್ಲಿ ಆಮ್‌ಸ್ಟರ್‌ಡ್ಯಾಮ್‌ನಲ್ಲಿ ಒಲಿಂಪಿಕ್ಸ್ ಕ್ರೀಡೆಗಳು ನಡೆದಾಗ ಬ್ರಿಟನ್ ಸಾಮ್ರಾಜ್ಯಕ್ಕೆ ಕ್ರೀಡೆಗಳನ್ನು ನಡೆಸುವ ಬಯಕೆಯಾಗಿ ಈ ಬಗ್ಗೆ ಯೋಜನೆ ತಯಾರಾಯಿತು. 1930ರಲ್ಲಿ ಕೆನಡಾದ ಹ್ಯಾಮಿಲ್ಟನ್‌ನಲ್ಲಿ ಮೊದಲ ಸಾಮ್ರಾಜ್ಯ ಕ್ರೀಡೋತ್ಸವ ಅಧಿಕೃತವಾಗಿ ಆರಂಭವಾಗಿ ಪ್ರತಿ 4 ವರ್ಷಕ್ಕೊಮ್ಮೆ ಈ ಕ್ರೀಡೋತ್ಸವ ನಡೆಸುವ ನಿರ್ಧಾರ ಕೈಗೊಳ್ಳಲಾಯಿತು. 1932ರಲ್ಲಿ ಈ ಬಗ್ಗೆ ಕ್ರೀಡಾ ಮಂಡಳಿ ಅಸ್ತಿತ್ವಕ್ಕೆ ಬಂದಿತು.


1958ರಲ್ಲಿ ವೆಲ್ಸ್‌ನ ಕಾರ್ಡಿಪ್‌ನ ಕ್ರೀಡಾಕೂಟಕ್ಕೆ ಜ್ಯೋತಿ ಬದಲು ಬೆಳ್ಳಿಯ ರಾಜದಂಡವನ್ನು ಹಸ್ತಾಂತರ ಓಟದ ಮೂಲಕ ಕ್ರಿಡಾಂಗಣಕ್ಕೆ ತರಲಾಯಿತು. (ಸಾಮ್ರಾಜ್ಯ ಅಳಿದರೂ ಅಹಂಕಾರದ ಕುರುಹು ಉಳಿದಿತ್ತು) ಮುಂದೆ 1962ರಲ್ಲಿ ಆಸ್ಟ್ರೇಲಿಯಾದ ಪರ್ತ್‌ನಲ್ಲಿ ನಡೆದ ಸಾಮ್ರಾಜ್ಯ ಕ್ರೀಡೆಗಳ ಸಮಯದಲ್ಲಿ ಈ ಕ್ರೀಡೋತ್ಸವಕ್ಕೆ "ಕಾಮನ್‌ವೆಲ್ತ್ ಕ್ರೀಡೆಗಳು" ಎಂಬ ಹೆಸರು ಇಡಲಾಯಿತು.

ಐಕ್ಯರಂಗ

ಸೂಪರ್‌ಹಿಟ್ 'ದೇವದಾಸ್' ಹೇಳುವುದೇನು?

ದೇವದಾಸ್ ಚಿತ್ರ ಮತ್ತೇ ಸೂಪರ್‌ಹಿಟ್ ಆಗಲು ಕಾರಣಗಳೇನು

ಶರತ್‌ಚಂದ್ರ



ಹಿಂದೆ ಒಂಬತ್ತು ಅವತಾರಗಳಲ್ಲಿ ಫಿಲಂ ಆಗಿ ಬಂದಿದ್ದರೂ 'ಸೂಪರ್ ಹಿಟ್' ಹಾದಿಯಲ್ಲಿರುವ ಬನ್ಸಾಲಿಯವರ ದೇವದಾಸ್' ಹೇಳುವುದೇನು? ದೈನಂದಿನದ ಕಷ್ಟಕೋಟಲೆಗಳಿಂದ ಬಿಡುಗಡೆ ಪಡೆಯಲು ಬೇಕಾದ 'ಕಿಕ್' ಕೊಡುವ ವೈಭವಪೂರಿತ ಹವೇಲಿಗಳು, ಸಮೂಹನೃತ್ಯಗಳು, ಕಣ್ಣಿಗೆ ಹಬ್ಬ ಕೊಡುವ ಸೂಪರ್ ಸುಂದರಿಯರು ಕಣ್ಣು ಕೋರೈಸುವ ಸೀರೆ ಆಭರಣಗಳು, ಕುಣಿಸುವ ಹಾಡುಗಳು. ಒಂದೆಡೆ ನಿಮಗೆ ಸಮಸ್ಯೆಗಳಿವೆಯೇ? ಅದರ ಬಗ್ಗೆ ತಲೆ ಕೆಡಿಸಿಕೊಳ್ಳಬೇಡಿ. ಕಾರಣ ಹುಡುಕಲೂ ಪರಿಹರಿಸಲೂ ಪ್ರಯತ್ನಿಸಬೇಡಿ. ಆದರಿಂದ ಸಾಧ್ಯವಾದಷ್ಟು ಓಡಿಹೋಗಿ ಕಂಠಪೂರ್ತಿ ಕುಡಿದು ಓಡುತ್ತಾ ಓಡುತ್ತಾ ಸಾಯಿರಿ! ಎಂಬ ಕಿವಿಮಾತು ಇನ್ನೊಂದೆಡೆ, ಇವೆರಡರ ಅಮಲೇರಿಸುವ ಮಿಶ್ರಣವೇ 'ಕಾಕ್ ಟೈಲ್' ಎನ್ನಿ ಬೇಕಾದರೆ 'ದೇವದಾಸ್' ಸೂಪರ್ ಹಿಟ್ ಆಗಲು ಕಾರಣ.


ಬನ್ಸಾಲಿಯವರ 'ದೇವದಾಸ್' ದೇಶದ ಹಲವು ಭಾಗಗಳಲ್ಲಿ ತುಂಬಿದ ಚಿತ್ರಮಂದಿರಗಳಲ್ಲಿ ಓಡುತ್ತಿದ್ದು, ಸೂಪರ್ ಹಿಟ್ ಆಗುವ ಹಾದಿಯಲ್ಲಿದೆ. ಭಾರಿ ಪ್ರಚಾರದ ಭರಾಟೆ ನಂತರ ರಿಲೀಸ್ ಆಗಿ 'ದೇವದಾಸ್' ಉತ್ತಮ ಚಿತ್ರವೂ ಆಗಿರುವ ನಿರೀಕ್ಷೆನೂ ಹುಟ್ಟಿಸಿತ್ತು. ಪರಾನ್ಸ್ ಕ್ಯಾನೋ ಫಿಲಂ ಉತ್ಸವದಲ್ಲಿ ತೋರಿಸಲ್ಪಟ್ಟು ಪ್ರಚಾರ ಗಿಟ್ಟಿಸಿತ್ತು. 50 ಕೋಟಿಯ ಭಾರಿ ಬಜೆಟ್, ಬನ್ಸಾಲಿಯಂತಹ ಹಿಂದೆ ಉತ್ತಮ ಚಿತ್ರಗಳನ್ನು ಕೊಟ್ಟ ನಿರ್ದೇಶಕ ಶಾರೂಕ್, ಮಾಧುರಿ - ಐಶ್ವರ್ಯ ಸೂಪರ್ ಸ್ಟಾರ್ ತ್ರಿವಳಿ - ಇವೆಲ್ಲಾ 'ಸೂಪರ್‌ಹಿಟ್' ಅಥವಾ ಉತ್ತಮ ಚಿತ್ರದ ಗ್ಯಾರಂಟಿಯೇನೂ ಕೊಡುವುದಿಲ್ಲ ಎಂತ ಎಲ್ಲರಿಗೂ ಗೊತ್ತು. ಇಂತಹ ಅಂಶಗಳಿರುವ ಹಲವು ಚಿತ್ರಗಳು ತೋಪಾಗಿದ್ದವು. 'ದೇವದಾಸ್' ಸೂಪರ್ ಹಿಟ್ ಆಗಲು ಅದು ಉತ್ತಮ ಚಿತ್ರವೆಂದು ಜನ ಗುರುತಿಸಿದ್ದು ಕಾರಣವೆ, ಅಥವಾ ಅದು ನಿಜವಾದ ಉತ್ತಮ ಚಿತ್ರವೇ? ಅಥವಾ ಉತ್ತಮ ಚಿತ್ರವಲ್ಲದಿದ್ದರೂಸೂಪರ್ ಹಿಟ್ ಹೊಸ ಫಾರ್ಮುಲಾವನ್ನು ಹುಡುಕಿದೆಯೇ ಎಂಬುದು ಪ್ರಶ್ನೆ.

ದೇವದಾಸ್ ಬಗ್ಗೆ ಹಲವು ವಿಮರ್ಶೆಗಳು ಬಂದಿವೆ. 20ನೇ ಶತಮಾನದ ಆದಿಯ ಬಂಗಾಳದ ಸಾಮಾಜಿಕ ಸನ್ನಿವೇಶದಲ್ಲಿ ಮೂಡಿಬಂದ ಪ್ರಸಿದ್ಧ ಕಾದಂಬರಿಕಾರ ಶರತ್‌ಚಂದ್ರ ಚಟ್ಟೋಪಾಧ್ಯಾಯರ 'ಕ್ಲಾಸಿಕ್' ಕಾದಂಬರಿ 'ದೇವದಾಸ್'ನ ಹೊಸ ಸೃಜನಶೀಲ ಅವತಾರ ಎಂದು ಕೆಲವರ ಮೆಚ್ಚುಗೆ. ದುರಂತ ಪ್ರೇಮದ ಬಗ್ಗೆ ಅಮರ ಸೆಲ್ಲುಲಾಯ್ಡ್ ಕಾವ್ಯ ಎಂದು ಇನ್ನೂ ಹಲವರ ಅಂಬೋಣ. 20ನೇ ಶತಮಾನದ ಆದಿಯ ಬಂಗಾಳವನ್ನು ಸಮರ್ಥ ವಾಗಿ ಸುಂದರವಾಗಿ ಪುನರ್ ಸೃಷ್ಟಿಸಿದ ಸುಂದರ 'ಚಾರಿತ್ರಿಕ' ಫಿಲಂ ಎಂದು ಇನ್ನೂ ಹಲವರ ಅಭಿಪ್ರಾಯ. ಶರತ್‌ಚಂದ್ರರ ಕಾದಂಬರಿಯಿಂದ ಬಹಳ ದೂರ ಹೋಗಿದ್ದಾರೆ ಎಂದು ಇನ್ನೂ ಕೆಲವರ ಟೀಕೆ. ಬೀಮಲುರಾಯ ನಿರ್ದೇಶನದಲ್ಲಿ ದಿಲೀಪ್ ಕುಮಾರರ ಅಪಾರ ಅಭಿನಯ ಹೊಂದಿದ್ದ ಹಿಂದಿನ 'ದೇವದಾಸ್'ಗೆ ಹೋಲಿಸಿದರೆ ಪೀಚು ಚಿತ್ರ ಎಂದು ತಿರಸ್ಕರಿಸುವವರು ಕೆಲವರು. ದಿಲೀಪ್ ಕುಮಾರರಷ್ಟು 'ಅಥೆಂಟಿಕ್' ಆಗಿ ಶಾರೂಕ್ ಖಾನ್ ದೇವದಾಸ್ ನನ್ನೂ ತೆರೆಯಲ್ಲಿ ಮೂಡಿಸಲಿಲ್ಲ ಹೀಗೆ 'ದೇವದಾಸ್'ಗೆ ಹತ್ತು ಹಲ[illegible] ವಿಮರ್ಶೆಗಳು ಬಂದಿವೆ. ಇವೆಲ್ಲವೂ ಸ್ವಲ್ಪ ಮಟ್ಟಿ[illegible] ನಿಜಕೂಡ.

ಪ್ರೇಮದುರಂತದ ಸೆಲುಲಾಯ್ಡ್ ಕಾವ್ಯವೇ[illegible]

ಒಂಬತ್ತು ಬಾರಿ ಫಿಲಂ ಆದ, ಕ[illegible] ಮನೆಮಾತಾಗಿರುವ 'ದೇವದಾಸ್' ಮೇ[illegible] ಇನ್ನೊಂದು ಫಿಲಂ ಮಾಡಬೇಕಾದರೆ ಎಂಟ[illegible] ಬೇಕು. ಅದೂ 50 ಕೋ[illegible] ಬಂಡವಾಳ ತೊಡಗಿಸಿ! ಆದು[illegible] ಬನ್ಸಾಲಿಗೆ ದೇವದಾಸ್ ಇಪ್ಪತ್ತನೇ ಶತಮಾನ[illegible] ಭಾರತೀಯನನ್ನು ಆಳವಾಗಿ ಕಲಕಿದ ಒಂದ[illegible] ಪ್ರಬಲ ಪ್ರತೀಕ ಎಂಬುದೂ ಗೊತ್ತು. (ವಿವರಗಳ[illegible] "ಯಾಕಪ್ಪಾ? 'ದೇವದಾಸ್' ಥರ ಆಡ್ತಿಯಾ?" ಬಾಡ್ಸ್ ನೋಡಿ). 'ದೇವದಾಸ್'ನ ಪ್ರತೀಕವ[illegible] ಇಪ್ಪತ್ತೊಂದನೇ ಶತಮಾನಕ್ಕೆ ಹೊಸ ರೀತಿಯ[illegible] ಪ್ರಸ್ತುತಪಡಿಸುವ, ನೋಡುವ ಪ್ರಯ[illegible] ಮಾಡಿದ್ದಾರೆ. ದೇವದಾಸ್ - ಪಾರೋ[illegible]

ಪುಟ 11



46 ವರ್ಷಗಳ ಹಿಂದಿನ 'ದೇವದಾಸ್' ಚಿತ್ರದಲ್ಲಿ ದಿಲೀಪ್‌ಕುಮಾರ್

ಯಾಕಪ್ಪಾ 'ದೇವದಾಸ್' ಥರ ಆಡ್ತೀಯಾ?

'ದೇವದಾಸ್' 20ನೇ ಶತಮಾನದಲ್ಲಿ ಭಾರತದ ಜನ ಮಾನಸದ ಮೇಲೆ ಮಹತ್ವದ ಪ್ರಭಾವ ಬೀರಿದ ದುರಂತ ನಾಯಕ ದೇವದಾಸ್ 20ನೇ ಶತಮಾನದ ಆದಿ ದಶಕಗಳಲ್ಲಿ ಪಾಳೆಯಗಾರಿ ವ್ಯವಸ್ಥೆ ಮತ್ತು ಆಧುನಿಕತೆಗೆ ತೆರೆದುಕೊಳ್ಳಲಾರಂಭಿಸಿದ ಹೊಸ ಮಧ್ಯಮ ವರ್ಗದ ನಡುವಿನ ತಾಕಲಾಟದ ಸನ್ನಿವೇಶದಲ್ಲಿ ಮೂಡಿ ಬಂದ ಶರತ್‌ಚಂದ್ರ ಚಟ್ಟೋಪಾಧ್ಯಾಯರ ಮಹತ್ವದ ಕಾದಂಬರಿಗಳಲ್ಲೊಂದು. ಭಾರತದ ಹೆಚ್ಚು ಕಡಿಮೆ ಎಲ್ಲಾ ಭಾಷೆಗಳಿಗೆ ಭಾಷಾಂತರವಾದ ಹಾಗೂ ಜನಪ್ರಿಯವಾಗಿದ್ದ ಕಾದಂಬರಿಗಳಲ್ಲೊಂದು. ಅಖಿಲ ಭಾರತ 'ಪ್ರತೀಕ'ವಾದ ನಾಯಕರುಗಳಲ್ಲಿ ದೇವದಾಸ್ ಅದ್ವಿತೀಯ ಇದರಿಂದಲೋ ಏನೋ 'ದೇವದಾಸ್'ನ್ನು ಹಿಂದಿ, ಬಂಗಾಳಿ, ತಮಿಳು, ತೆಲುಗು, ಸೇರಿದಂತೆ ಹಲವು ಭಾಷೆಗಳಲ್ಲಿ ಒಂಬತ್ತು ಬಾರಿ ಫಿಲಂ ಮಾಡಲಾಗಿದೆ!

1928ರಲ್ಲಿ ಮೂಕಿ ಫಿಲಂ ಯುಗದಲ್ಲೇ ಮೊದಲ ಫಿಲಂ ಬಂದಿತ್ತು. 1935ರಲ್ಲಿ ಪಿ.ಸಿ. ಬರುವಾ ಬಂಗಾಳಿಯಲ್ಲಿ ತಂದರು. ಆ ಮೇಲೆ ಅವರು ಹಿಂದಿಯಲ್ಲಿ ಗಾಯಕ - ನಾಯಕ ಕೆ.ಎಲ್. ಸೈಗಲ್ ನಟನೆಯಲ್ಲಿ ಫಿಲಂ ಮಾಡಿದರು. 1955ರಲ್ಲಿ ಬಿಮಲ್ ರಾಯ್ ನಿರ್ದೇಶನದಲ್ಲಿ ದಿಲೀಪ್ ಕುಮಾರ್ ನಾಯಕರಾಗಿ ಬಂದ ಚಿತ್ರ ಅತ್ಯಂತ ಪ್ರಸಿದ್ಧ ಮತ್ತು 'ಅಥೆಂಟಿಕ್' ಎಂದು ಪರಿಗಣಿಸಲಾದ ಚಿತ್ರ.

ಪ್ರೇಮ ವಂಚಿತನಾಗಿ, ಅದನ್ನು ಒಪ್ಪಿಕೊಳ್ಳಲಾಗದೆ ಕುಡಿದು ಕುಡಿದು ತನ್ನನ್ನು ನಾಶ ಮಾಡಿಕೊಂಡು 'ಅಮರನಾದ ದೇವದಾಸ್‌ನ ದುರಂತದ ಬಗ್ಗೆ ಭಾರತದ ಒಂದು ಇಡೀ ಪೀಳಿಗೆಯೇ ಹಲವು ದಶಕಗಳ ಕಾಲ ಕಣ್ಣೀರು ಹಾಕಿತ್ತು' ಎಂದು ಹೇಳಿದ ಮಾತು ಅಕ್ಷರಶಃ ನಿಜ. ಪ್ರತಿ ಪುರುಷ ತಾನು 'ದೇವದಾಸ್' ಎಂದು ಕೊಂಡರೆ, ಪ್ರತಿ ಮಹಿಳೆ ತನ್ನ ಪ್ರೇಮಿ ದೇವದಾಸ್ ಥರ ಪ್ರೇಮಿಸಬೇಕು ಎಂದು ಬಯಸುವಷ್ಟು ಪ್ರಬಲವಾಗಿತ್ತು ಈ ಪ್ರತೀಕ. ಜೀವನದಲ್ಲಿ ಸಮಸ್ಯೆ ಬಂದಾಗ ಕುಡಿದು ಅದನ್ನು ಮರೆಯಲು ಪ್ರಯತ್ನಿಸಿ, ಮರೆಯಲಾಗದೆ ಕುಡಿದು ಕುಡಿದು ಮಾಡಿ ಕೊಳ್ಳುವ ಆತ್ಮ ವಿನಾಶದ ಪ್ರತೀಕವೂ ಆಗಿದ್ದ 'ದೇವ ದಾಸ್'. ಸಮಸ್ಯೆ ಎದುರಿಸ ಲಾಗದೆ ಹಲವು 'ಅಮಲು' ಗಳಲ್ಲಿ ಓಡಿ ಹೋಗಲು ಪ್ರಯತ್ನಿ ಸುವವರಿಗೆ "ಯಾಕಪ್ಪಾ? ದೇವದಾಸ್' ಥರ ಆಡ್ತಿಯಾ?" ಎಂದು ಹೇಳುವಷ್ಟು ದೇವದಾಸ್ ಸಾರ್ವತ್ರಿಕ 'ಪ್ರತೀಕ'ನಾಗಿದ್ದ.



ಶರತ್‌ಚಂದ್ರ ಚಟ್ಟೋ ಪಾಧ್ಯಾಯ

ಒಟ್ಟಾರೆ ಈ ಫಿಲಂ ಯಾವ ರೀತಿಯ ಸಾಮಾಜಿಕ - ಸಾಂಸ್ಕೃತಿಕ ಪರಿಣಾಮ ಬೀರಿದೆ? ಅದು ಸಾಮಾಜಿಕ-ಸಾಂಸ್ಕೃತಿಕ ಬದುಕು ಎತ್ತರಿಸುವ ಜನಸಾಮಾನ್ಯರ ಹಂಬಲ ಪೂರೈಸಿದೆಯೆ? ಈ ಪ್ರಶ್ನೆಗಳು ಅಷ್ಟೇ ಮುಖ್ಯವಾಗುತ್ತವೆ. ಇಂತಹ ಒಟ್ಟು ಹಿನ್ನೆಲೆಯಲ್ಲಿ ನೋಡಿದರೆ ಬನ್ಸಾಲಿಯವರ 'ದೇವದಾಸ್' ಒಂದು ಉತ್ತಮ ಸಕಾರಾತ್ಮಕ ಚಿತ್ರ ಎಂದು ಹೇಳಲು ಬರುವುದಿಲ್ಲ. ಅದು ಸೂಪರ್ ಹಿಟ್ ಆಗಲು ಕಾರಣವಾದ ಅಂಶಗಳೂ ಆರೋಗ್ಯಕರವಲ್ಲ. ಬನ್ಸಾಲಿಯವರ 'ಪ್ರೇಮಿ ದುರಂತದ ಅಮರ ಕಾವ್ಯ'ದ ದೃಷ್ಟಿಯಿಂದ ನೋಡಿದರೂ ಹವೇಲಿ, ವಾರಣಾಸಿಯ 'ಕೋಟೆ'ದ ಭವ್ಯ ಸೆಟ್ಟುಗಳು ಅಗತ್ಯವಿರಲಿಲ್ಲ. 'ಚಾರಿತ್ರಿಕ ಸನ್ನಿವೇಶ'ದ ದೃಷ್ಟಿಯಿಂದ ನೋಡಿದರೂ ಖಂಡಿತ ಬಂಗಾಳದ ಹವೇಲಿಗಳಾಗಲಿ, ವಾರಣಾಸಿಯ ಕೋಟೆಗಳಾಗಲಿ ಖಂಡಿತ್ ಅಷ್ಟು ದುಬಾರಿ[illegible] ಶ್ರೀಮಂತಿಕೆ ಹೊಂದಿರಲಿಲ್ಲ. ಇವು ಹೆಚ್ಚಾಗಿ[illegible] ನೆನಪಿಸುತ್ತದೆ. ಕಣ್ಣುಕೊರೈಸುವ 30 ಕೆ.ಜಿ. ಭಾರದ ಉಡುಗೆ ತೋಡುಗೆಗಳು, ಮತ್ತು ಆಭರಣಗಳೂ ಅಷ್ಟೇ. ಎರಡು ಮೂರು ಹಾಡು ನೃತ್ಯ ಬಿಟ್ಟರೆ ಫಿಲಂ ತುಂಬಾ ಬರುವ ಒಂಬತ್ತು ನೃತ್ಯ-ಹಾಡುಗಳಲ್ಲಿ ಇತರವೂ ಫಿಲಂಗೆ ಭಾರವಾಗಿದೆ. ಇವೆಲ್ಲಕ್ಕಿಂತಲೂ ಹೆಚ್ಚಿಗೆ ಈ ದುರಂತಕ್ಕೆ ಕಾರಣವಾದ 20ನೇ ಶತಮಾನದ ಆದಿಭಾಗದ ಬಂಗಾಳದ ವಿಶಿಷ್ಟ ಸಾಮಾಜಿಕ ಸಾಂಸ್ಕೃತಿಕ ರಾಜಕೀಯ ಹಿನ್ನೆಲೆಯನ್ನು ಪೂರ್ತಿ 'ಕಟ್' ಮಾಡಿದ್ದು ಫಿಲಂನ ಒಟ್ಟಾರೆ ಪರಿಣಾಮವನ್ನೇ ಪೂರ್ತಿಯಾಗಿ ಬದಲಾಯಿಸಿದೆ. ಬಂಗಾಳದ ಪಾಳೆಯಗಾರಿ ವ್ಯವಸ್ಥೆ ಮತ್ತು ಈತ ತಾನೇ ಇಂಗ್ಲೆಂಡಿನಲ್ಲಿ ಹತ್ತು ವರ್ಷ ಇದ್ದು (ಪಾಶ್ಚಿಮಾತ್ಯ ಪ್ರಜಾಸತ್ತಾತ್ಮಕ ಮೌಲ್ಯ ವ್ಯಕ್ತಿ ಸ್ವಾತಂತ್ರ್ಯ, ಸಮಾನತೆಗಳನ್ನು ಅರಗಿಸಿ ಕೊಂಡು) ಮರಳಿದ ದೇವದಾಸ್ ನಡುವಿನ ಘರ್ಷಣೆ, ಆತ ಪ್ರತಿನಿಧಿಸುವ ಮೌಲ್ಯಗಳು ಪಾಳೆಗಾರಿಕೆ ವ್ಯವಸ್ಥೆಗೆ ಸವಾಲು ಹಾಕುವ ಸ್ಥಿತಿಯಲ್ಲಿ ಇಲ್ಲದ್ದು 'ದೇವದಾಸ್'ನನ್ನು ದುರಂತದ ಮೂಲ. ಇದು ಸರ್ವಕಾಲಿಕ ಅಲ್ಲ. ಆದರೆ ಹೊಸಮೌಲ್ಯ ಪ್ರತಿನಿಧಿಸುವ ವ್ಯಕ್ತಿ ಮತ್ತು ಹಳೆಯ ವ್ಯವಸ್ಥೆ ನಡುವಿನ ಘರ್ಷಣೆ ಸಾರ್ವಕಾಲಿಕ. ಆದರೆ ಅಲ್ಲಿಯೂ ದೇವದಾಸ್‌ನ ಪಲಾಯನವಾದ ಮಾತ್ರ ಸಾರ್ವಕಾಲಿಕ ಅಲ್ಲ. ಇಂತಹ ಘರ್ಷಣೆಯಲ್ಲೂ ಸವಾಲು ಒಡ್ಡಿ ಹೋರಾಡುವುದು ಕೂಡಾ ಅಷ್ಟೇ ಸಾಮಾನ್ಯ. ಆದ್ದರಿಂದ ದುರಂತವನ್ನು ಚಿತ್ರಿಸಿ, ಅದರ ಹಿನ್ನೆಲೆ ಪೂರ್ತಿ ಮರೆಮಾಚುವುದು, ಮತ್ತು ಪೂರ್ಣ ಪಲಾಯನವಾದವನ್ನು ಆರಿಸಿಕೊಳ್ಳುವುದು ನಿರ್ದಿಷ್ಟ ಆಯ್ಕೆ ಸರ್ವಕಾಲಿಕವಾದದ್ದಲ್ಲ.

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2002
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್. ನಾಗರಾಜು
ಸಂಪಾದಕರು: ಎಸ್. ವೈ. ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ: 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH